41st year of Publication.  Phone: 3728.

ದೀಪಾವಳಿ ಅಂಕ 1975

# ಪ್ರಭಾತ

ಬೆಲೆ 75 ಪೈಸೆ.

ಸಂಪುಟ: ೪೧. ಸಂಚಿಕೆ: ೪೦. | ಸಂಪಾದಕ: ಕುಡ್ವಿ ವಾಸುದೇವ ಶೆಣೈ. ರವಿವಾರ ತಾ. 9—11—1975 | VOL. 41. No. 40.

ಜನಕೆ ಜಾಗ್ರತಿಯುದಯ
ವಿದುವೆ ತಾಮಸ ಜಡತೆ
ಗಳೆನೆ ವಿಜಯದ ಸಾರ್ವ
ನೊದಲ ತೂರ್ಯಂ

# ಪ್ರಭಾತ

ಬಗೆಗೆ ಬಾಹ್ಯಜ್ಞಾನ
ವೀವಾದ್ಯ ಶಕ್ತಿಯಿದು
ಸದಮಲಾಂತಃಕರಣ
ತರುಣ ಪ್ರಭಾತಂ

ದೀಪಾವಳಿ ಅಂಕ 9—11—1975 DEEPAVALI NUMBER

# ಮಹಿಳೆ..... ಮನುಕುಲದ ಅರ್ಧಾಂಶ

ಈ ವರ್ಷವು (೧೯೭೫) ಅಂತರರಾಷ್ಟ್ರೀಯವಾಗಿ ಆಚರಿಸಲ್ಪಡುತ್ತಿದ್ದು, ದಶಂಬರ ೩೧ಕ್ಕೆ ಅಂತ್ಯಗೊಳ್ಳುವುದು. ಕಳೆದ ಹತ್ತು ತಿಂಗಳುಗಳಲ್ಲಿ, ಎಲ್ಲ ರಾಷ್ಟ್ರಗಳಲ್ಲಿ, ಈ ಮಹಿಳಾ ವರ್ಷದ ಚಟುವಟಿಕೆಗಳು ವಿವಿಧ ಸಮಾರಂಭ, ಸಭೆ, ಘೋಷಣೆ, ಸಾಹಿತ್ಯ ....ಗಳಿಂದ ಪ್ರಕಟವಾಗಿವೆ. ವಿಶ್ವಸಂಸ್ಥೆಯ ಸಹಾಯಕ ಸೆಕ್ರೆಟರಿ–ಜನರಲ್ ಆಗಿರುವ ಹೆಲ್ವಿ ಸಾಯ್ಪಿಲಾರವರು ಅಂತರರಾಷ್ಟ್ರೀಯ ಮಹಿಳಾವರ್ಷದ ಸೆಕ್ರೆಟರಿ ಜನರಲ್ ಆಗಿರುತ್ತಾರೆ. ಈಕೆ, ಮಹಿಳಾ ವರ್ಷದ ಆರಂಭದಲ್ಲಿ ಬರೆದೊಂದು ಲೇಖನದಲ್ಲಿ ಹೀಗನ್ನುತ್ತಾರೆ:

"ಪುರುಷ ಮತ್ತು ಸ್ತ್ರೀ ಇವರೊಳಗಿನ ಸಮಾನತೆ ಎಂಬುದು ಅಸ್ತಿತ್ವದಲ್ಲಿಲ್ಲ; ಇಂದಿಗೂ ಹೆಣ್ಣಾಗಿ ಜನಿಸುವುದು ಒಂದು ಅನರ್ಥ ಅಥವಾ ಅನರ್ಹತೆಯಾಗಿಯೇ ಉಳಿದಿದೆ. ಮಹಿಳೆಗೆ ವಿರುದ್ಧವಾಗಿರುವ ಈ ಪಕ್ಷಪಾತವನ್ನು ಜೀವಂತವಿರಿಸಿರುವ ಶಾಸನಗಳನ್ನೂ.ಪರಂಪರಾಗತವಾಗಿ ಬಂದ ಸಂಪ್ರದಾಯಗಳನ್ನೂ ಬದಲಾಯಿಸಲು ಎಲ್ಲ ರಾಷ್ಟ್ರಗಳು ನಿರ್ದಿಷ್ಟ ಕಾರ್ಯಕ್ರಮ ಕೈಕೊಳ್ಳುವಂತೆ ಹೋರಾಡುವ ಅಂಗವಾಗಿ ಸಂಯುಕ್ತ ರಾಷ್ಟ್ರಗಳು ೧೯೭೫ನೇ ವರ್ಷವನ್ನು ಅಂತರರಾಷ್ಟ್ರೀಯ ಮಹಿಳಾ ವರ್ಷವೆಂದು ಸಾರಿವೆ.

"ಮಹಿಳೆ–ಮನುಕುಲದ ಅರ್ಧಾಂಶ. ಜಗತ್ತಿನ ಜನಕೋಟಿಯ ಈ ಅರ್ಧಾಂಶವು ಈ ವರೆಗೆ ಜಗತ್ತಿನ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪೂರ್ಣವಾಗಿ ತನ್ನ ಅಂಶದಾನ ಸಲ್ಲಿಸಲು ಸಮರ್ಥವಾಗಿಲ್ಲ. ಮಾನವಶಕ್ತಿಯ ಆಕರದಲ್ಲಿ ಮಹಿಳೆಯರು ಸಾಮುದಾಯಿಕವಾಗಿ ಅತ್ಯಂತ ಅನಭಿವೃದ್ಧ ಅಂಶವಾಗಿಯೇ ಉಳಿದಿದ್ದಾರೆ. ಪುರುಷರೊಡನೆ ಜೀವನದ ಎಲ್ಲ ಕ್ಷೇತ್ರಗಳಲ್ಲಿ ಸಮಾನ ಪಾತ್ರ ವಹಿಸಲು ಮಹಿಳೆಗಿರುವ ಸಂದರ್ಭಗಳ ಅಭಾವ ಒಂದು ಕಾರಣ; ಪುರುಷರ ಮತ್ತು ಸ್ತ್ರೀಯ ಪಾತ್ರಗಳು ರೂಢಿಬದ್ಧವಾಗಿ ಬಂದಿದ್ದು, ಬದಲಾಗದೇ ಇರುವುದು ಇನ್ನೊಂದು ಕಾರಣ.

"ಸರಕಾರಗಳು ಮಹಿಳೆಯ ಸ್ಥಿತಿ, ಸ್ಥಾನಮಾನಗಳ ಸಮಸ್ಯೆಯನ್ನು ಆಗಾಗ ತಮ್ಮದೇ ಆದ ವಿಧಾನಗಳಿಂದ ಪರಿಹರಿಸಲು ಯತ್ನಿಸಿವೆಯಾದರೂ, ಜಗತ್ತಿನಲ್ಲಿ ಅನಕ್ಷರಸ್ಥ ಮತ್ತು ಅವಿದ್ಯಾವಂತ ಮಹಿಳೆಯರಿಗೆ–(ಇವರಲ್ಲಿ ಹಲವರು ಹೆಚ್ಚಾಗಿ ಪೂರ್ಣ ಆರೋಗ್ಯವಂತರು ಕೂಡ ಅಲ್ಲ)–ಕೋಟಿ ಕೋಟಿ ಮಕ್ಕಳು ಹುಟ್ಟುತ್ತಲೇ ಇರುವಾಗ, ಅಂಥ ಮಕ್ಕಳ ರಕ್ಷಣೆ ಪಾಲನೆಗಳಿಗೆ ಅವರನ್ನೇ ಇನ್ನೂ ಜವಾಬ್ದಾರರಾಗಿ ಗಣಿಸಿರುವಾಗ, ಈ ಜಾಗತಿಕ ಮಹಿಳಾ ಉದ್ಧಾರವು ಹೇಗೆ ತಾನೆ ಸಾಧ್ಯ? ಇನ್ನೂ ಹಲವು ಕಡೆಗಳಲ್ಲಿ, ಗೃಹಕೃತ್ಯ, ಮಕ್ಕಳ ಲಾಲನೆಪಾಲನೆಗಳೊಂದಿಗೆ, ತಕ್ಕ ತರಬೇತಿಯಿಲ್ಲದೆ, ಸುಸಜ್ಜಾಗಿರದೆ . ಬೇಸಾಯದ ಪರಿಶ್ರಮವು ಕೂಡ ಪ್ರಧಾನವಾಗಿ ಮಹಿಳೆಯ ಹೊಣೆಯೇ ಆಗಿರುವಾಗ, ಜಗತ್ತು ಆಹಾರೋತ್ಪಾದನೆಯನ್ನು ಹೆಚ್ಚಿಸಲು ಹೇಗೆ ಸಾಧ್ಯವಾದೀತು? ಪ್ರಜೋತ್ಪಾದನೆಯೆಂಬುದನ್ನು ದೈವಘಟನೆಯೋ ಅನಿರೀಕ್ಷಿತ ಘಟನೆಯೋ ಎನ್ನುತ್ತ ಹದಮೀರಿದ ಪ್ರಜಾಸಂಖ್ಯೆಗೆ ಇಂಬುಕೊಡದೆ, ಮಕ್ಕಳಾಗಬೇಕೆಂಬ ವಿಷಯವು "ಆಯ್ಕೆ"ಯೆನಿಸದೆ ಈ ಸಮಸ್ಯೆಗೆ ಬೇರೆ ಉತ್ತರವಿಲ್ಲ. ಮಹಿಳೆಯರಿಗೆ, ತಕ್ಕುದಾದ ಪಾತ್ರವನ್ನು ವಹಿಸುವಂತೆ ಅವಕಾಶಗಳನ್ನೀಯದೆ ಇದು ಹೇಗೆ ಸಾಧ್ಯ?

ಜಗತ್ತಿನ ಅನೇಕ ಸಮಸ್ಯೆಗಳಿಗೆ ಪರಿಹಾರಕ್ಕೆ ಪೂರ್ವಭಾವಿಯಾಗಿ ಮಹಿಳೆಯರ ಸ್ಥಿತಿಗತಿಗಳ ಉದ್ಧಾರವು ಅತ್ಯವಶ್ಯವೆಂಬ ಪ್ರಜ್ಞೆಯು ಇಂದು ಸರಕಾರಗಳಲ್ಲಿ ಕಂಡು ಬರುತ್ತಿದೆ. ಮಹಿಳೆಯರಲ್ಲಿ ಅವರ ಶಕ್ತಿ-ಸಾಮರ್ಥ್ಯಗಳ ಪೂರ್ಣ ಅರಿವನ್ನು ವೃದ್ಧಿಪಡಿಸುವ ಕಾಲವೀಗ ಪಕ್ವವಾಗಿದೆ. ಕಾರ್ಯಪ್ರವೃತ್ತವಾಗುವ ಕಾಲ ಇದೇ.

—೦—

## ಭಾರತದ ಮಹಿಳೆಗೆ
# ಸಮಾನತೆಯೆಂಬುದು ಕಾಲ್ಪನಿಕವೇ ಅಥವಾ ವಾಸ್ತವಿಕವೇ?

● ಡಾ| ಪ್ರಮಿಳಾ ಕಪೂರ್.

ಪ್ರಗತಿಶೀಲ ಕಾನೂನುಗಳ ರಚನೆ ಮತ್ತು ಸುಧಾರಿತ ಶೈಕ್ಷಣಿಕ ಹಾಗೂ ಉದ್ಯೋಗಾವಕಾಶಗಳಿದ್ದರೂ, ಭಾರತದ ಮಹಿಳೆಯು ತತ್ವತಃ ಅನುಭವಿಸುವ ಮತ್ತು ಪ್ರತ್ಯಕ್ಷ ಅನುಷ್ಠಾನದಲ್ಲಿರುವ ಅವಳ ಸ್ಥಿತಿ-ಪದವಿಗಳ ನಡುವೆ ಬಹಳ ಅಂತರ ಉಳಿದೇ ಇದೆ.

ವೇದಕಾಲದಲ್ಲಿ (ಕ್ರಿ. ಪೂ. ೨೫೦೦ರಿಂದ ೧೫೦೦) ಸ್ತ್ರೀಗೆ ಪುರುಷನೊಡನೆ ಸಮಾನತೆಯೆಂಬುದು ವಾಸ್ತವಿಕವಾಗಿತ್ತು. ಅವರ ಈ ಸ್ಥಾನಮಾನಗಳ ಪತನವು ಮೆಲ್ಲಗೇ ಆರಂಭವಾಯಿತು; ಕ್ರಿ. ಪೂ. ೩೦೦ರಿಂದ ಹಲವು ರಾಜಕೀಯ ಮತ್ತು ಸಾಮಾಜಿಕ–ಆರ್ಥಿಕ ಕಾರಣಗಳಿಂದ ಅದು ತ್ವರೆಯಾಗಿಯೇ ನಡೆದು, ಕ್ರಿ. ಶ. ಹದಿನೆಂಟನೇ ಶತಮಾನದ ಅಂತ್ಯಕ್ಕೆ ತಲಪುವಾಗ—ಸ್ಥಿತಿಯು ತೀರ ಮಾರ್ಪಾಟಾಗಿ, ಪುರುಷರಿಗೇ ಸರ್ವಶ್ರೇಷ್ಟ ಸ್ಥಾನಮಾನಗಳು ರೂಢಿಗೆ ಬಂದು, ಮಹಿಳೆಯರು "ಸ್ಥಿತಿಹೀನ" ರೆಂಬಷ್ಟಕ್ಕೆ ಬಂತು.

ಆ ಕಾಲದಲ್ಲಿ ಶಿಶುಹತ್ಯೆಗಳು ಸರ್ವಸಾಮಾನ್ಯವಾದುವು; ಹೆಣ್ಣುಮಕ್ಕಳಿಗೆ ಶಿಕ್ಷಣವೇ ಇಲ್ಲದಾಯಿತು; ಬಾಲವಿವಾಹದ ರೂಢಿ ಬಂತು; ಘರದಾಪದ್ಧತಿ, ಸತಿ ಸಹಗಮನಗಳು ಹೆಚ್ಚಿದುವು. ಅಂದಿನ ಸಮಾಜಸುಧಾರಕರ, ಪ್ರಗತಿಶೀಲ ಮುಖಂಡರ ಮತ್ತು ಬ್ರಿಟಿಷ್ ಪ್ರಭುತ್ವದ ಯತ್ನದಿಂದ ಈ ಅನ್ಯಾಯಗಳು ಸಮಾಜಸುಧಾರಣಾ ಯತ್ನ ಮತ್ತು ಕಾನೂನಿನಿಂದ ತಕ್ಕಷ್ಟು ತಡೆಯಲ್ಪಟ್ಟು, ಹೆಣ್ಣುಮಕ್ಕಳ ಶಿಕ್ಷಣಾರಂಭ ಮತ್ತು ಸ್ಥಾನಮಾನಗಳಲ್ಲಿ ಸುಧಾರಣೆ ಕಾಣತೊಡಗಿತು.

ಭಾರತವು ಸ್ವತಂತ್ರವಾದ ನಂತರ ಈ ಸುಧಾರಣೆಯು ತ್ವರಿತಗತಿಯಿಂದ ಸಾಗತೊಡಗಿತು. ಭಾರತ ಸಂವಿಧಾನವು, ಲಿಂಗಭೇದವಿಲ್ಲದೆ ಸರ್ವರಿಗೆ ನ್ಯಾಯ, ಸಮಾನಾಧಿಕಾರ, ಸಮಾನಾವಕಾಶಗಳ ಅಧ್ಯಾಯವನ್ನು ತೆರೆಯಿತು. ಇಂದು, ಭಾರತದಲ್ಲಿ. ಮಹಿಳೆಗೆ ಶಾಸನಾನುಸಾರ ಶಿಕ್ಷಣ, ಉದ್ಯೋಗ, ಮತದಾನ, ಪಿತ್ರಾರ್ಜಿತದ ಬಾಧ್ಯತೆ, ದಾಂಪತ್ಯವಿಚ್ಛೇದ ಮತ್ತು ದಾಂಪತ್ಯವಿಚ್ಛೇದನಾನಂತರ ಅಥವಾ ವಿಧವೆಯಾಗಿದ್ದರೆ ಪುನರ್ವಿವಾಹದ ಹಕ್ಕು ಹಾಗೂ ತನ್ನ ಪತಿಯ ಏಕಮಾತ್ರ ನ್ಯಾಯಬದ್ಧ ಪತ್ನಿಯಾಗಿ ಇರುವಂಥ ಹಕ್ಕುಗಳಿವೆ. ನ್ಯಾಯರೀತ್ಯಾ ತತ್ವತಃ ಮಹಿಳೆಯರಿಗೆ ಸಮಾನ ಹಕ್ಕುಗಳ ನೀತಿಯು ಸ್ಥಾಪಿತವಾಗಿದೆ. ಆದರೆ, ವಾಸ್ತವಿಕವಾಗಿ ಅವರು ಇದನ್ನನುಭೋಗಿಸುತ್ತಿರುವರೇ?

ನಗರಗಳಲ್ಲಿ ವಾಸಿಸುವ ಶ್ರೀಮಂತ ಅಥವಾ ಅನುಕೂಲಸ್ಥ, ಸುಶಿಕ್ಷಿತ ಮತ್ತು ಪ್ರಗತಿಶೀಲ ಕುಟುಂಬಗಳಿಗೆ ಸೇರಿದ ಮಹಿಳೆಯರ ಮಟ್ಟಿಗೆ ಈ ಸಮಾನತೆಯೆಂಬುದು ನೈಜ ಸ್ಥಿತಿಗೆ ಬಲು ಸಮೀಪವೇ ಇದೆ. ಅವರಿಗೆ ಜನನಾರಭ್ಯ, ಪುರುಷರಂತೇ ಸಮಾನ ಹಕ್ಕುಗಳೂ ಸಮಾನಾವಕಾಶಗಳೂ ಇವೆ. ಆದರೆ, ವಿಶಾಲ ರಾಷ್ಟ್ರದ ಜನಕೋಟಿಯನ್ನು ನೋಡುವಾಗ, ಇಂಥ ಸೌಭಾಗ್ಯವಂತ ಹೆಂಗಳೆಯರು ಕೇವಲ ಬೆರಳೆಣಿಕೆಯಲ್ಲಿ ಬರುವರು; ಮತ್ತು ಇವರಿಗೆ ಕೂಡ ಸಮಾನತೆಯೆಂಬುದು 'ಪೂರ್ಣ'ವೆನ್ನುವಂತಿಲ್ಲ. ಪಕ್ಷಪಾತ, ಭೇದ ಮತ್ತು ನೈತಿಕಾಚರಣೆಯಲ್ಲಿ ಎರಡು ಬಗೆಯ ಮಾನಗಳು ಇನ್ನೂ ಮುಂದರಿದಿವೆ. ಉತ್ತಮತೆಯ ಕಡೆಗೆ ಸಾಗುವ ಬದಲಾವಣೆಗಳು ಕಂಡರೂ, ಭಾರತವು ಪ್ರಾಮುಖ್ಯವಾಗಿ ಪುರುಷರ ಜಗತ್ತೇ ಆಗಿ ಮುಂದರಿಯುತ್ತಿದೆ.

ಸಾಮಾನ್ಯವಾಗಿ ಎಲ್ಲ ಕಡೆಗಳಲ್ಲಿ ಗುಣದಲ್ಲೂ ವೈಶಿಷ್ಟ್ಯದಲ್ಲೂ ಹೆಣ್ಣುಮಗುವಿಗಿಂತ ಗಂಡುಮಗುವೇ ಶ್ರೇಷ್ಠ. ಸಂಪ್ರದಾಯ, ನಂಬಿಕೆ, ಸಂಸ್ಕೃತಿ ಪದ್ಧತಿಗಳೇ ಇದಕ್ಕೆ ಮುಖ್ಯ ಕಾರಣ. ಉದಾ: ಭಾರತದಲ್ಲಿನ ಪ್ರಧಾನ ಸಮಾಜವಿಭಾಗವೆನಿಸುವ (ಹಿಂದೂಗಳಲ್ಲಿ ಮೇಲುವರ್ಗದವರು) ಪಿತೃಸಂತಾನ ಪದ್ಧತಿಯನ್ನನುಸರಿಸುವವರಲ್ಲಿ ಪುತ್ರನು ಮಾತ್ರ, ಆವಶ್ಯಕ ಸಂಸ್ಕಾರಗಳನ್ನು (ಶವಸಂಸ್ಕಾರ, ಉತ್ತರಕ್ರಿಯೆಗಳನ್ನು ಸಹ) ಮಾಡಬೇಕಾದುದು, ಹಿಂದೂವಿನ ಜೀವನವ್ಯವಸ್ಥೆಯಲ್ಲಿ ಮೋಕ್ಷಸಾಧನೆಗೆ ಅತ್ಯವಶ್ಯ. ಇದಲ್ಲದೆ. ದುಡಿದು ಗಳಿಸುವವನೂ, ಮಾತಾಪಿತೃರ ವೃದ್ಧಾಪ್ಯದಲ್ಲಿ ಆಧಾರನೂ, ಕುಲೋದ್ಧಾರಕನೂ, ಕೌ

(೪ನೇ ಪುಟಕ್ಕೆ ಮುಂದುವರಿದಿದೆ)

(೩ನೇ ಪುಟದಿಂದ)

ಟುಂಬಿಕ ಅಭಿವೃದ್ಧಿ ಸಾಧಕನೂ ಆಗಿರುವನು. ಏಕೆಂದರೆ, ಅವನು ವರದಕ್ಷಿಣೆಯನ್ನು ಪಡೆದು, ವಿವಾಹಾನಂತರವೂ ತನ್ನ ಕುಟುಂಬದಲ್ಲಿ ಮುಖ್ಯಸ್ಥನಾಗಿಯೇ ಮುಂದುವರಿಯುತ್ತಾನೆ. ಹೆಣ್ಣಾದರೋ-ವಿಶೇಷ ರಕ್ಷಣೆ ಬೇಕಾದವಳು, ಅವಳನ್ನು ವರದಕ್ಷಿಣೆಕೊಟ್ಟು ಹೊರಗೆ ಕಳಿಸಬೇಕು, ವಿವಾಹವಾಗುತ್ತಲೇ ಅವಳು ತನ್ನ ಗಂಡನ ಮನೆತನದವಳಾಗುವಳು. ಈ ಎಲ್ಲ ವಿಚಾರಗಳೇ ಗಂಡುಮಗುವನ್ನು ಹೆಣ್ಣಿಗಿಂತ ಅಧಿಕ ಅಪೇಕ್ಷಣೀಯವಾಗಿ ಮಾಡುತ್ತವೆಂಬುದು ಸುಸ್ಪಷ್ಟ. ಜನನಕಾಲದಿಂದ ಒಂದು ಹೆಣ್ಣನ್ನೂ ಗಂಡನ್ನೂ ಮನೆಯಲ್ಲಿ ಲಾಲಿಸಿ ಪಾಲಿಸಿ ತರುವಲ್ಲೇ ಈ ತಾರತಮ್ಯವನ್ನು ಕಾಣಬಹುದು.

ಇಂದಿಗೂ ಅಧಿಕಸಂಖ್ಯಾಕ ಹಿಂದೂ ಗೃಹಗಳಲ್ಲಿ, ಗಂಡುಮಗುವಿನ ಜನನವು ಆನಂದೋತ್ಸವದ ವಿಷಯ; ಹೆಣ್ಣು ಹುಟ್ಟಿತೆಂದರೆ ಅದುವೇ ಅಸಂತೋಷ ಹಾಗೂ ಯೋಚನೆ. ಮಗುವನ್ನು ನೋಡಿಕೊಳ್ಳುವಲ್ಲಿ ಆಹಾರಪಾನೀಯಾದಿಗಳಲ್ಲೂ ಶಿಕ್ಷಣದಲ್ಲೂ ಹೆಣ್ಣಿಗಿಂತ ಉತ್ತಮವಾದುದು ಗಂಡಿಗೆ ಸೇರುತ್ತದೆ. ಇತ್ತೀಚೆಗೆ ಇದರ ಅಧ್ಯಯನ ನಡೆಸಿದ ಸಂಖ್ಯಾತಜ್ಞರು, ಹೆಣ್ಣುಗಳ ಸಂಖ್ಯಾಪ್ರಮಾಣ ಇಳಿಮುಖವಾದುದನ್ನು ಕಂಡಿದ್ದಾರೆ. ಜನನದಿಂದ ತೊಡಗಿ ಎಲ್ಲ ವಯಸ್ಸಿನ ಹಂತಗಳಲ್ಲೂ ಹೆಣ್ಣಿನ ಲಾಲನೆ-ಪಾಲನೆಯು ಅಲಕ್ಷಿಸಲ್ಪಟ್ಟುದೇ ಇದಕ್ಕೆ ಕಾರಣವೆಂದು, ಜನನ-ಮರಣ-ಮತ್ತು ಆರೋಗ್ಯ ಸಂಬಂಧವಾದ ಅಂಕೆಸಂಖ್ಯೆಗಳ ತಜ್ಞರೊಬ್ಬರು ಅಭಿಪ್ರಾಯಪಡುತ್ತಾರೆ. ಅಭಿವೃದ್ಧ ದೇಶಗಳಿಗಿಂತ ಭಾರತದಲ್ಲಿ, ೫ರಿಂದ ೩೫ ವರ್ಷದೊಳಗಿನ ಮರಣಗಳಲ್ಲಿ ಗಂಡುಗಳಿಗಿಂತ ಹೆಣ್ಣುಗಳದ್ದು ಹೆಚ್ಚು. ಗಂಡು-ಹೆಣ್ಣುಗಳ ಸಾಕ್ಷರತಾ ಸಂಖ್ಯೆಯಲ್ಲೂ ತಾರತಮ್ಯವಿದೆ—ಸೇಕಡಾ ೬೯·೫ ಗಂಡು—ಸೇ. ೧೮·೭ ಹೆಣ್ಣುಗಳು.

ಗ್ರಾಮಾಂತರ ಪ್ರದೇಶಗಳನ್ನು ಸಂಚರಿಸಿದ ಡಾಕ್ಟರುಗಳು, ಸಮಾಜ ಕಾರ್ಯಕರ್ತರು ಮತ್ತು ಸಂಶೋಧಕರು,—ಅಲ್ಲಿ ಊಟ್ಟಮಲ್ಲಿ ಕೂಡ ಯಾರು ಮೊದಲು ಯಾರು ಮತ್ತೆ ಎಂಬುದನ್ನೂ ಕಂಡಿದ್ದಾರೆ. ಹುಡುಗರಿಗೆ ದೊಡ್ಡ ಪಾಲು, ಒಳ್ಳೇ ಆಹಾರ; ಹುಡುಗಿಯರಿಗೆ ತುಸ ಕಡಿಮೆ. ದುಡಿವ ಗಂಡಸಿಗೆ ಹೆಚ್ಚು. ಪ್ರೌಢ (ಬೆಳೆದ) ಹೆಂಗುಸರಿಗೆ, — ಇತರರೆಲ್ಲರಿಗೆ ಉಣಬಡಿಸಿ ಉಳಿದುದು ಮಾತ್ರ. ವಿವಾಹಿತ ಹೆಣ್ಣು, ಗರ್ಭಿಣಿಯಾದ ನಂತರ ಹೆಚ್ಚು ಲಕ್ಷ್ಯ ಪಡೆವಳು.

ಭಾರತದಲ್ಲಿ ಬಾಲವಿವಾಹ ನಿರ್ಬಂಧ ಶಾಸನವಿದ್ದರೂ (ವಿವಾಹಕ್ಕೆ ಕನಿಷ್ಠ ವಯಸ್ಸು ಗಂಡಿಗೆ ೧೫, ಹೆಣ್ಣಿಗೆ ೧೪), ೧೯೭೧ರ ಖಾನೇಶುಮಾರಿಯಂತೆ, ೧೦ರಿಂದ ೧೪ ವಯಸ್ಸಿನೊಳಗಿನ ೩೭ ಲಕ್ಷ ವಿವಾಹಗಳಾದುವು; ೨೦೦೦೦ ಬಾಲಕಿಯರು ವಿಧವೆಯರಾದರು, ೧೧೦೦೦ ಮಂದಿ ಬಾಲಿಕೆಯರು ತಮ್ಮ ಗಂಡನಿಂದ ತ್ಯಜಿಸಲ್ಪಟ್ಟರು ಅಥವಾ ದಾಂಪತ್ಯವಿಚ್ಛೇದನ ಪಡೆದರು.

ಹೆಣ್ಣಿನ ಸ್ಥಾನಮಾನ, ಭದ್ರತೆ ಇತ್ಯಾದಿಗಳೆಲ್ಲವೂ ಆಕೆಯ ಪ್ರಜೋತ್ಪತ್ತಿ ಸಾಮರ್ಥ್ಯದ ಮೇಲೆ ಅವಲಂಬಿಸಿವೆ. ನಮ್ಮ ದೇಶದಲ್ಲಿ ಸರಾಸರಿ ಒಂದು ಹೆಣ್ಣಿಗೆ ೫–೬ ಮಕ್ಕಳಿವೆ. ಹೆತ್ತ ತಾಯಿಯ ಮತ್ತು ಆಕೆಯ ಮಕ್ಕಳ ಅನಾರೋಗ್ಯ ಮತ್ತು ಅಪೌಷ್ಟಿಕರ ಆಹಾರಕ್ಕೆ ಇದೂ ಒಂದು ಗಣನೀಯ ಕಾರಣವಾಗಿರುತ್ತದೆ.

ಆರ್ಥಿಕವಾಗಿ ಅಭಿವೃದ್ಧಿ ಹೊಂದಿದ ದೇಶಗಳಿಗೆ ತುಲನೆಮಾಡಿದರೆ, ನಮ್ಮ ದೇಶದಲ್ಲಿ ಪ್ರಸವದಿಂದ ಮತ್ತು ಗರ್ಭಪಾತದಿಂದ ಸಾಯುವ ಹೆಂಗುಸರ ಸಂಖ್ಯೆ ಹೆಚ್ಚು. ಹೆಂಗುಸು ಗರ್ಭಿಣಿಯಾಗಿದ್ದಾಗಲೂ ಪ್ರಸವಕಾಲದಲ್ಲೂ ಹೆಚ್ಚು ಜಾಗರೂಕತೆಯಿಂದ ಆರೈಕೆಹೊಂದಬೇಕೆಂಬುದನ್ನು ತಿಳಿದೂ, ಹೀಗಾಗುತ್ತಿದೆ. ಇಂದಿಗೂ, ಹಳ್ಳಿಗಳಲ್ಲೂ, ಪೂರ್ವಾಚಾರ ಪದ್ಧತಿಯ ಗೃಹಗಳಲ್ಲೂ ಹೆರಿಗೆಗಳು ಅನನುಭವಿಗಳಾದ ದಾದಿಗಳ ಸಹಾಯದಿಂದ ಅವರವರ ಮನೆಗಳಲ್ಲೆ ಆಗುತ್ತಿವೆ; ಇದು ಅನೇಕವೇಳೆ ವಿಷಮಸ್ಥಿತಿಗೆ ಹೋಗುತ್ತಿದೆ. ಸೇಕಡಾ ೪೦ರಷ್ಟು ಮಂದಿ ಹೆಂಗುಸರು ಅನಧಿಕೃತರಿಂದ ಮತ್ತು ಏನೇನೂ ತರಬೇತಿಯಿಲ್ಲದವರಿಂದ ಗರ್ಭಪಾತಮಾಡಿಸಿಕೊಳ್ಳುತ್ತಾರೆ, ಇದು ಬಹು ಅಪಾಯಕಾರಿ.

ಪೂರ್ವಾಚಾರದ ಹಿಂದೂ ಕುಟುಂಬಗಳಲ್ಲಿ ಗಂಡ ಮತ್ತು ಹೆಂಡತಿ ಇವರಲ್ಲಿ ಯಾರಾದರೊಬ್ಬರು ಮರಣಪಟ್ಟರೆ ಅಥವಾ ದಾಂಪತ್ಯವಿಚ್ಛೇದನವಾದರೆ, ಅಲ್ಲಿಯೂ ಬಹಳವಾದ ಅಸಮಾನತೆಯ ವಾತಾವರಣ ನಿರ್ಮಾಣವಾಗುತ್ತದೆ. ಅರ್ಥಾತ್, ಓರ್ವ ವಿಧವೆ ಅಥವಾ ದಾಂಪತ್ಯವಿಚ್ಛೇದನದಿಂದ ಗಂಡನನ್ನು ಕಳಕೊಂಡವಳು. ಹೆಂಡತಿಯನ್ನು ಕಳೆದುಕೊಂಡ ಗಂಡಸಿಗಿಂತ ಕೀಳಾಗಿ ಕಾಣಲ್ಪಡುತ್ತಾಳೆ. ಆಕೆ ಪುನರ್ವಿವಾಹವಾಗುವ ಅವಕಾಶಗಳು ಕಡಿಮೆ. ಗಂಡಸಾದರೆ, ಒಬ್ಬಳು ಹೆಂಡತಿಯನ್ನು ಕಳೆದುಕೊಂಡರೆ-ಮದುವೆ ಮಾರುಕಟ್ಟೆಯಲ್ಲಿ ಅವನಿಗೆ ಹೆಣ್ಣುಗಳು ಸಿದ್ಧ. ಸಮಾಜದ ಅನಾದರ, ಭಾವಂದಿರ, ಮೈದುನರ, ಅತ್ತಿಗೆ-ನಾದಿನಿ ಮೊದಲಾದವರ ತಿರಸ್ಕಾರ ಇತ್ಯಾದಿಗಳು ಹಲವು ಹೆಣ್ಣುಗಳನ್ನು ಆತ್ಮಹತ್ಯೆಗೆ ಓಡಿಸಿವೆ.

ಪೂರ್ವಸಂಪ್ರದಾಯವು ಬಲವಾಗಿ ಬೇರೂರಿರುವ ಭಾರತದಲ್ಲಿ ಆಚಾರ, ರೂಢಿಗಳು ಪುರುಷಶ್ರೇಷ್ಠತೆಯನ್ನು ಶಾಶ್ವತಗೊಳಿಸುತ್ತಲೇ ಇರುವಾಗ.—ಜನಸಮುದಾಯದ ಜೀವನದಲ್ಲಿ ಬಲು ಅಲ್ಪ ಮಾರ್ಪಾಟುಗಳು ಮಾತ್ರ ಆಗಿರುವಾಗ, ಮಹಿಳೆಯ ಸಮಾನತೆಯು ಜನರಿಗೆ ಚೆನ್ನಾಗಿ ಭಾಸವಾಗುವಂತೆ ಅಥವಾ ಸಮಾನತೆಯ ಭಾವನೆಯನ್ನು ಕಾರ್ಯರೂಪಕ್ಕೆ ತರುವಂತೆ ಸಾಧಿಸುವುದು ಸುಲಭವೇನಲ್ಲ. ಕಾನೂನುಸಂಬಂಧವಾದ ಮತ್ತು ರಾಜಕೀಯ ಸಮಾನತೆಗಳು ತತ್ವತಃವಾಗಿಯಾದರೂ ಜ್ಯಾರಿಗೆ ಬಂದಿವೆಯೆಂಬುದು ಅಲ್ಪ ಸಾಧನೆಯೇನಲ್ಲ. ಹಾಗಿದ್ದರೂ, ಮಹಿಳೆಯರೆಲ್ಲರೂ ಗೃಹದಲ್ಲಿ, ಕೆಲಸಮಾಡುವಲ್ಲಿ, ಅಥವಾ ಸಮಾಜದಲ್ಲಿ ಸಮಾನತೆಯನ್ನನುಭವಿಸಲು ಸಾಧ್ಯವಾಗಿಲ್ಲ. ಅಧಿಕಸಂಖ್ಯಾಕ ಮಹಿಳಾಲೋಕಕ್ಕೆ ಅದಿನ್ನೂ ಕಲ್ಪನೆಯಾಗಿಯೇ ಉಳಿದಿದೆ. ಈ ಪರಿಸ್ಥಿತಿಯೇ, ತುಸ ಹೆಚ್ಚುಕಡಮೆ ಆಸ್ಯದಲ್ಲಿ ಇಂಡೋನೇಸ್ಯ. ಶ್ರೀಲಂಕಾ, ಬರ್ಮ, ಲಾವೊಸ್, ಮಲೇಸ್ಯ ಮತ್ತು ಫಿಲಿಪ್ಪಾಯಿನ್ಸ್ —ಈ ದೇಶಗಳಲ್ಲದೆ. ಆ ದೇಶಗಳಲ್ಲಿ ಕೂಡಾ ಶಾಸನಸಮ್ಮತವಾದ ಸಮಾನತೆ ಸಾರಲ್ಪಟ್ಟಿದ್ದರೂ ಅಲ್ಲೆಲ್ಲ ಗಂಡು-ಹೆಣ್ಣುಗಳ ನಡುವೆ ಸಮಾನತೆ ಇಲ್ಲ.

ಇದನ್ನು ಅಧ್ಯಯನಮಾಡಿದವರು, ಪರಂಪರೆಯಾಗಿ ಬಂದಿರುವ ಸಂಪ್ರದಾಯಗಳನ್ನು ಮಹಿಳೆಯರೇ ಶಾಶ್ವತಪಡಿಸುತಿದ್ದಾರೆಂದು ಅಭಿಪ್ರಾಯಪಡುತ್ತಾರೆ. ಗೃಹದೊಳಗೆ ಸಮತಾಭಾವವನ್ನು ಹರಿಸುವಲ್ಲಿ ಸಾಮರ್ಥ್ಯವುಳ್ಳವರು ಮಹಿಳೆಯರೇ. ಅವರೇ ಮನೆಮಂದಿಯ, ಮಕ್ಕಳ ಆಹಾರ ಮತ್ತು ಆರೋಗ್ಯವನ್ನು ನೋಡಿಕೊಳ್ಳುವರು ಆದರೆ, ಮಹಿಳೆಯರ ಅಜ್ಞಾನವು ಶೋಚನೀಯ ಸ್ಥಿತಿಗೆ ಕಾರಣ. ಮಕ್ಕಳನ್ನು ಹೆರುವ ಹೊರತು ಮತ್ತಾವ ವಿಚಾರ ಕ್ರಾಂತಿಗೂ ಒಳಗಾಗಿರದ ಮಹಿಳೆಯರು ತಮ್ಮ ಹಾಗೂ ತಮ್ಮ ಮಕ್ಕಳ ಮಾನಸಿಕ ಹಾಗೂ ದೈಹಿಕ ಹಾನಿ ತಂದಂತಾಗುತ್ತದೆ. ಆದುದರಿಂದ, ಬಾಲಿಕೆಯರಿಗೆ ಓದುಬರಹ ಕಲಿಸುವಾಗ ಆರೋಗ್ಯ ಮತ್ತು ಪೌಷ್ಟಿಕ ಆಹಾರದ ಕುರಿತೂ ಶಿಕ್ಷಣ ಅವಶ್ಯವಿದೆ. ತಾಯಂದಿರಿಗೆ ಮಕ್ಕಳ ಆರೈಕೆಯನ್ನು ಹೇಗೆ ಉತ್ತಮವಾಗಿ ಮಾಡಲು ಸಾಧ್ಯ ಮತ್ತು ಸ್ಥಳೀಯವಾಗಿ ದೊರೆವ ಆಹಾರಸಾಮಗ್ರಿಗಳನ್ನು ಹೇಗೆ ಹೆಚ್ಚು ಸತ್ಪರಿಣಾಮಕರವಾಗಿ ಉಪಯೋಗಿಸಬಹುದು ಎಂಬ ತಿಳಿವು ಕೊಡಬೇಕು.

ಭಾರತೀಯ ಮಹಿಳೆಯರಿಗೆ—ಜೀವನವನ್ನು ಉತ್ತಮಗೊಳಿಸಲು ಸಾಧ್ಯವಿದೆ. ಪೌಷ್ಟಿಕ ಆಹಾರಗಳಿಂದ ಮಕ್ಕಳನ್ನು ಆರೋಗ್ಯವಂತರಾಗಿ ಬೆಳೆಸಿತರಲು ಸಾಧ್ಯವಿದೆ ಮತ್ತು ದೀರ್ಘಾಯುಷಿಗಳಾಗುವಂತೆ ಮಾಡಲೂ ಸಾಧ್ಯವಿದೆ ಎಂದು ಖಚಿತಪಡಿಸಬೇಕು. ಹಳೇ ಸಂಪ್ರದಾಯಗಳು, ಸಮಾಜಪದ್ಧತಿಗಳು, ಸಂಸ್ಕಾರಗಳು ಕಾಲಬಾಧಿತವಾಗಿವೆ—ಆರೋಗ್ಯ ಮತ್ತು ಶಿಕ್ಷಣವು ಅಜ್ಞಾನ, ಅಂಧಶ್ರದ್ಧೆ, ಅರ್ಥಹೀನ ಸಂಸ್ಕಾರಾದಿಗಳನ್ನು ಅಳಿಸಿ, ಮಾನವಕುಲದಲ್ಲಿ ತಮ್ಮ ಅಸ್ತಿತ್ವದ, ಮೌಲಿಕ ಸ್ಥಾನಮಾನದ, ನಿಜವಾದ ಸಮಾನತೆಯ ಯುಗವನ್ನು ತರುವುದೆಂಬ ಅರಿವನ್ನು ನೀಡಬೇಕು.

ಬಹುಸಂಖ್ಯಾಕ ಕೃಷಿಕರು ತುಂಬಿರುವ ಭಾರತದಲ್ಲಿ ಇಂಥ ಮಾರ್ಪಾಟನ್ನುಂಟುಮಾಡುವ ಕಾರ್ಯವು ಈ ದೇಶದ ಸ್ವಂತ ಯತ್ನ ಮತ್ತು ಆಸರೆಗಳಿಂದ ಬಲು ಕಷ್ಟಕರ, ವಿಶ್ವ ಆರೋಗ್ಯ ಸಂಸ್ಥೆಸಹಿತ ಅಂತರರಾಷ್ಟ್ರೀಯ ಸಂಸ್ಥೆಗಳ ನೆರವಿನಿಂದ ಇದು ಸುಲಭವೂ ಆದೀತು ಮತ್ತು ಶೀಘ್ರವೂ ಆದೀತು ಅನಿಸುತ್ತದೆ.

—೦—


# ಮುದ್ದಣ

## ಮಹಾಕವಿಯಾಗಿದ್ದನೋ?



ಮಹಾಕವಿ ಮುದ್ದಣ.

(ಲೇಖಕ: ಶ್ರೀ ಕೆ. ವೆಂಕಟ್ರಾಯಾಚಾರ್ಯ, ವಿದ್ವಾನ್, ಸುರತ್ಕಲ್ಲು).



ಲೇಖಕ:
ಶ್ರೀ ಕೆ. ವೆಂಕಟರಾಯಾಚಾರ್ಯ.

ಕನ್ನಡದಲ್ಲಿ ಇಪ್ಪತ್ತನೆಯ ಶತಕದ ಮೊದಲಿಗೆ ಹೊಸಗನ್ನಡ ಯುಗ ತೊಡಗಿತ್ತೆಂದು ಹೇಳುವರು. ಆ ಸಂಧಿಕಾಲದಲ್ಲಿ, ಕನ್ನಡದಲ್ಲಿ ಭಾಷಣ–ಲೇಖನಗಳ ಬಗೆಗೆ–ಆ ಮೊದಲಿನಷ್ಟು ಅನಾದರವನ್ನು ತೊಡೆದುಹಾಕುವ ಸತ್ಕಾರ್ಯವೂ ತೊಡಗಿತ್ತೆಂದು ಹೇಳಬರುವುದು. ಶ್ರೀ ಮುನ್ನೂರು ಶಿವರಾಮಯ್ಯ, ಶ್ರೀ ಐರೋಡಿ ಶಿವರಾಮಯ್ಯ, ಶ್ರೀ ನಿಡ್ಡೋಡಿಯವರು, ಶ್ರೀ ಉಡುಪಿ ಸೀತಾರಾಮಾಚಾರ್ಯರು, ಶ್ರೀ ಸುರತ್ಕಲ್ಲು ಸುಬ್ಬರಾಯರು ಶ್ರೀ ಪೈಯವರು, ಶ್ರೀ ಪಡಮುನ್ನೂರು ನಾರಾಯಣಾಚಾರ್ಯರು, ಶ್ರೀ ಅಗ್ರಹಾರ ನಾರಾಯಣ ತಂತ್ರಿಗಳು, ಶ್ರೀ ಪಂಜೆ, ಶ್ರೀ ಮುಳಿಯ ಮೊದಲಾದವರು ಬೇರೆ ಬೇರೆ ವಿಷಯಗಳ ಬಗೆಗೆ ವಿವರಣಾತ್ಮಕಗಳಾದ ಲೇಖನಗಳನ್ನು-ಭಾಷಣಗಳನ್ನು ಕೈಕೊಂಡು, ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಕನ್ನಡದ ಪ್ರಸಾರದ ಕೆಲಸಮಾಡಿದ್ದರು. ಇಂತಹ ದೊಡ್ಡ ಕೆಲಸಗಳಲ್ಲಿ ಕೈಹಚ್ಚುವ ಬಗೆಯಲ್ಲಿ 'ಮುದ್ದಣ' ಮಹಾಕವಿಯೊಬ್ಬನಾಗಿದ್ದನು. ಅವನು ಬರೆದ 'ಜೋಗುಳ'ವೆಂಬ ವಿವೇಚನಾತ್ಮಕವಾದ ಚಿಕ್ಕ ಪ್ರಬಂಧವು ಇಲ್ಲಿ ಉಲ್ಲೇಖನೀಯವಾಗಿದೆ. ಅಂತೆ, ಕನ್ನಡದಲ್ಲಿ ಇತರ ಭಾಷೆಗಳಿಂದ ಇತರರು ಆರಿಸಿ ಬರೆದಂತೆ, 'ಮುದ್ದಣ'ನೂ ಸಂಸ್ಕೃತದ 'ಅದ್ಭುತ ರಾಮಾಯಣ', ಪದ್ಮಪುರಾಣದಿಂದ 'ಶ್ರೀರಾಮ ಪಟ್ಟಾಭಿಷೇಕ' ಮತ್ತು 'ಶ್ರೀರಾಮಾಶ್ವಮೇಧ'ಗಳನ್ನು ಕನ್ನಡಿಸಿದ್ದನು. ಈ ಕೃತಿಗಳು ಇತರ ನಾಮಧೇಯಗಳಿಂದಲೇ ಬರೆಯಲಾಗಿದ್ದರೂ, ಇವೆಲ್ಲವೂ ನಂದಳಿಕೆಯ ಲಕ್ಷ್ಮೀ ನಾರಣಪ್ಪಯ್ಯನೇ ಬರೆದುದೆಂದು ಅವನ ಓರಗೆಯವರ ಬರೆಹಗಳಿಂದ ಪ್ರಸಿದ್ಧವಾಗಿದೆ. (ಪ್ರಬುದ್ಧ ಕರ್ಣಾಟಕ, ಮೈಸೂರು ಮತ್ತು 'ಮುದ್ದಣ' ಪ್ರಶಸ್ತಿ ಗ್ರಂಥ ನೋಡಿರಿ).

'ಮುದ್ದಣ'ನು ಮೊದಲಿಗೆ ವ್ಯಾಯಾಮ ವಿಭಾಗದ ಅಧ್ಯಾಪಕನಾಗಿದ್ದನು; ಕೊನೆಗೆ ಉಡುಪಿಯ ಕ್ರಿಶ್ಚನ್ ಹೈಸ್ಕೂಲಿನಲ್ಲಿ ಕನ್ನಡಭಾಷಾಧ್ಯಾಪಕನಾಗಿದ್ದನೆಂದು ತಿಳಿಯುತ್ತದೆ. ಆಂಗ್ಲ ವಿದ್ಯಾಭ್ಯಾಸದ ಪರಿಣತಿಯ ಪ್ರಮಾಣಪತ್ರವಿಲ್ಲದ ಕಾರಣ, ಕಲಾಶಾಲೆಯ ಅಧ್ಯಾಪಕನಾಗುವ ಪರಿಸ್ಥಿತಿ 'ಮುದ್ದಣ'ನಿಗೆ ತಪ್ಪಿತ್ತು. ಆ ಸ್ಥಾನ ಶ್ರೀ ಪಂಜೆಯವರಿಗೆ ದೊರಕಿತು! (ಇಂದಿನ ಕಾಲದಲ್ಲೂ ಈ ವಿಭೇದ ಕಲ್ಪನೆಯು ತಪ್ಪಿಲ್ಲ!)

'ಮುದ್ದಣ' ಮಹಾಕವಿಯಾಗಿಲ್ಲ; ಸತ್ಕವಿಯೆಂಬುದಕ್ಕೆ ಅಡ್ಡಿಯಿಲ್ಲವೆಂದು ವಿಮರ್ಶಕರ ವಾದವಿದೆ (ಡಾ। ರಂ. ಶ್ರೀ. ಮುಗಳಿ: ಕನ್ನಡ ಸಾಹಿತ್ಯ ಚರಿತ್ರೆ). ಅರ್ಥಾತ್, ಆತ ಸಂಸ್ಕೃತದ ಗ್ರಂಥಗಳ ಆಧಾರದಿಂದ ಬರೆದ–ಈ ಮೇಲೆ ಹೆಸರಿಸಿದ ಮೂರು ಕೃತಿಗಳಲ್ಲಿ 'ಮಹಾಕವಿತ್ವ'ದ ಪೂರ್ಣಾಂಶವಿಲ್ಲ; ಅಂಶವಿದೆಯೆಂದು ಆ ವಾದದ ಸಾರ. ಆದರೆ, ಆ ತೆರದಲ್ಲಿ ನೋಡಿದರೆ. ಪಂಪನಾಗಲೀ, ರನ್ನನಾಗಲೀ, ಕುಮಾರವ್ಯಾಸನಾಗಲೀ, ಕುಮಾರವಾಲ್ಮೀಕಿಯಾಗಲೀ 'ಮುದ್ದಣ'ನಾಗಲೀ ಮಹಾಕವಿಯಲ್ಲ; ಅಷ್ಟೇಕೆ, ಕವಿಯೇ ಅಲ್ಲ; ಕೇವಲ ಅನುವಾದಕಾರರೆಂದು ಹೇಳಬೇಕಾಗುತ್ತದೆ. ಈ ಒಕ್ಕಣ್ಣಿನ ಬಳಕೆಯನ್ನು ಕೈಬಿಟ್ಟು, ಅವರು ಮಾಡಿದ ಅವರ ಪ್ರತಿಭೆಯಲ್ಲಿ ಮೂಡಿದ ವೈಶಿಷ್ಟ್ಯವೇನೆಂದು ನಿಷ್ಪಕ್ಷಪಾತವಾಗಿ ಪರಿಶೀಲಿಸುವುದು ಅವಶ್ಯವಾಗಿದೆ! ಈ ಬಗೆತದಂತೆ. ಹಿಂದಿನ ಮಹಾಕವಿಗಳಂತೆ 'ಮುದ್ದಣ'ನೂ ಕನ್ನಡದ 'ಮಹಾಕವಿ'ಯೆನ್ನಲು ಸಂದೇಹವಿಲ್ಲ! ಪ್ರಕೃತ. 'ಮುದ್ದಣ' ಬರೆದ ೨ ಕೃತಿಯಲ್ಲಿ ಕಾಣುವ ಮಹಾಕಾವ್ಯದ ಬಗೆಗಳಲ್ಲಿ ಒಂದೆರಡನ್ನು ಸೂಚಿಸಬಯಸುವೆನು.

ಶ್ರೀರಾಮ ಪಟ್ಟಾಭಿಷೇಕವು ರಾವಣ ವಧೆಯಾದ ಮೇಲೆ, ಶ್ರೀರಾಮ ಅಲ್ಲಿಂದ ಮರಳಿದ್ದು ಅಯೋಧ್ಯೆಯಲ್ಲಿ ಆತನಿಗೆ ಪಟ್ಟಾಭಿಷೇಕವಾಯಿತೆಂಬುದನ್ನು ಒಳಗೊಂಡಿದೆ. ಈ ಚಿಕ್ಕ ಪದ್ಯಕೃತಿ 'ಪದ್ಮಪುರಾಣ'ದ 'ಪಾತಾಲಖಂಡ'ದಲ್ಲಿ 'ವಾತ್ಸ್ಯಾಯನ'ನು 'ಶೇಷನಿಗೆ ಹೇಳಿದ' (ಶೇಷ ರಾಮಾಯಣವೆಂದು ಹೆಸರುಳ್ಳ) ಮೂಲದಿಂದ ಪ್ರೇರಿತವು! ಆದರೆ, ಕೆಲವೆಡೆಗಳಲ್ಲಿ ಮೂಲಕ್ಕಿಂತ ಹೆಚ್ಚಿನ ಸೊಗಸುಂಟಾಗಿರುವುದನ್ನು ನಾವು ಕಾಣುತ್ತೇವೆ. ಸಮುದ್ರ ವರ್ಣನೆ, ಪ್ರಯಾಣಕಾಲದಲ್ಲಿ ವಿವಿಧ ವನಸ್ಥಲಗಳ ಉಲ್ಲೇಖ, ಶ್ರೀರಾಮ ಭರತರ ಸಮಾಗಮ, ರಾಮ ಕೌಸಲ್ಯೆಯರ ಸಂವಾದಗಳು ಮೊದಲಾದೆಡೆ ಮೂಲವು ಹೇಳದ—ಕವಿಯು ಬೇರೆ ಬೇರೆ ಕೃತಿಗಳ ಹಿನ್ನೆಲೆಯಿಂದ ಬರೆದ—ರಸಸ್ಯಂದಿ ವಿಷಯಗಳಿವೆ. (ಶ್ರೀ ಸುರತ್ಕಲ್ಲು ಸುಬ್ಬರಾವ್: 'ಮುದ್ದಣ'ನ ಶ್ರೀರಾಮ ಪಟ್ಟಾಭಿಷೇಕವೆಂಬ ಲೇಖನ. ವಿದ್ಯಾದಾಯಿನೀ ಹಳೆ ವಿದ್ಯಾರ್ಥಿ ಸಂಘದ 'ಕಾಣಿಕೆ' ನೋಡಿರಿ).

'ಶ್ರೀರಾಮಾಶ್ವಮೇಧ'ವು ಆ ಮೇಲಿನ ಪುರಾಣ ಭಾಗದ ಕತೆಯನ್ನು ಒಳಗೊಂಡು ಕನ್ನಡದಲ್ಲಿ ಬರೆದ ಗದ್ಯರೂಪದ ಮಹಾಕೃತಿಯಾಗಿದೆ. 'ಪದ್ಯಂ ವಧ್ಯಂ, ಗದ್ಯಂ ಹೃದ್ಯಂ' ಎಂಬ ಮುದ್ದಣ'ನ ವಾಕ್ಯವು ಇಬ್ಬಗೆಯಲ್ಲಿ ತಿಳಿಯಬರುತ್ತದೆ. ಈ ಮೊದಲಿಗೆ ರಾಮಾಯಣದ ಬಗೆಗೆ (ಇತರ ಮಹಾಕತೆಗಳ ಬಗೆಗೆ) ಬರೆದ ಕೃತಿಗಳೆಲ್ಲವೂ 'ಪದ್ಯ'ರೂಪದಲ್ಲಿವೆಯಲ್ಲದೆ, 'ಗದ್ಯ' ರೂಪದಲ್ಲಿಲ್ಲ; ಆ ಮೇರೆಗೆ, ಆ ಪದ್ಯ ಕೃತಿಗಳನ್ನು ಮೀರಿಸುವ (ವಧ್ಯವೆನ್ನುವ) ರೀತಿಯಲ್ಲಿ 'ಹೃದ್ಯ'ವಾದ 'ಗದ್ಯ'ದಲ್ಲಿ ಬರೆಯಬೇಕೆಂದು ಕವಿಯು ಸ್ವಾಶಯವನ್ನು (ತನ್ನೆಣಿಕೆಯನ್ನು) ಹೇಳಿಕೊಂಡಿದ್ದಾನೆ. ಇನ್ನೊಂದಾಗಿ. 'ಮುದ್ದಣ'ನ ಕೃತಿಗಳಲ್ಲಿ ಈ ಮೊದಲಿಗೆ ಬರೆದ 'ಶ್ರೀರಾಮ ಪಟ್ಟಾಭಿಷೇಕ'ವು 'ಪದ್ಯ'ರೂಪದಲ್ಲಿದೆ: ಆತನ 'ಗದ್ಯ' ಶೈಲಿಯು 'ಪದ್ಯ'ಕ್ಕಿಂತ 'ಹೃದ್ಯ'ವಾಗಿದೆಯೆಂದು ಸಮೀಪವರ್ತಿಗಳು-ಸಾಹಿತ್ಯಬಂಧುಗಳು-ಹೇಳಿದರೆಂದು ವಾಸ್ತವಿಕವಾದ ಆಶಯವು ಇಲ್ಲಿ ಕವಿಯಿಂದ ಸ್ವೀಕೃತವಾಗಿದೆ. ಇದರಿಂದ, 'ಮುದ್ದಣ'ನ ಪದ್ಯರೂಪಕ್ಕಿಂತಲೂ 'ಗದ್ಯನಿರೂಪಣೆ' ಬಲು ಸೊಗಸೆಂಬುದನ್ನು ನಾವೆಲ್ಲರೂ ಒಪ್ಪಬೇಕಾಗಿದೆ!

'ಶ್ರೀರಾಮಾಶ್ವಮೇಧ'ದಲ್ಲಿ ರಾವಣನ ಪ್ರಸ್ತಾವ ತುಸ ಬಂದಿದೆ; ಮೂಲದಷ್ಟು ಬಂದಿಲ್ಲ. ರಾಮನಲ್ಲಿ ಕೇವಲ ದೈವಿಕ ಸ್ವಭಾವಚಿತ್ರಕ್ಕಿಂತಲೂ ಅಮಾನುಷಿಕನಾಗಿ (ಮನುಷ್ಯೋತ್ತಮನಾಗಿ) ಚಿತ್ರಿತನಾಗಿದ್ದಾನೆಂಬುದು 'ಮುದ್ದಣ'ನ ಗೆಯ್ಮೆಯ ಮೇಲ್ಮೆ! ('ಮುದ್ದಣ'ನು ಕಾಲಾಧೀನನಾಗಿ ೧೯೭೬ರ ಫೆಬ್ರವರಿ ೧೬ಕ್ಕೆ ೭೫ ವರ್ಷಗಳು ಸಲ್ಲುವವು. ಈ ಸಂದರ್ಭದಲ್ಲಿ ಬೆಂಗಳೂರ ಚಾಮರಾಜ ಪೇಟೆಯ 'ಕನ್ನಡ ಸಾಹಿತ್ಯ ಕುಟೀರ'ದವರು ಶ್ರೀ ಬಿ. ನಾರಾಯಣ ನಾಯಕರ ಅಧ್ಯಕ್ಷತೆಯಲ್ಲಿ ರೂಪಿಸಿದ ಸಮಿತಿಯ ವತಿಯಿಂದ ಶ್ರೀ ಟಿ. ಕೇಶವ ಭಟ್ಟರ ಸಂಪಾದಕತ್ವದಲ್ಲಿ 'ಮುದ್ದಣ-ಪ್ರಶಸ್ತಿ ಗ್ರಂಥ'ವನ್ನು ಪ್ರಕಟಿಸುತ್ತಾರೆ. ಅದರಲ್ಲಿ ನಾಡಿನ ವಿದ್ವಾಂಸರು ಬರೆದ ಕವಿಯ-ಕೃತಿಗಳ ವಿಚಾರಪರ ಲೇಖನಗಳು ಪ್ರಕಟವಾಗಲಿವೆ.' ಶ್ರೀರಾಮಾಶ್ವಮೇಧದ ಪಾತ್ರಗಳು' ಎಂಬ ನನ್ನ ಲೇಖನ ಅದರಲ್ಲಿ ಕಾಣಬಹುದು.). ಮೈಸೂರಿನ ಆಸ್ಥಾನ ವಿದ್ವಾಂಸರಾದ ಶ್ರೀ ಸೋಸಲೆ ಅಯ್ಯಾಶಾಸ್ತ್ರಿಗಳು 'ಪದ್ಮಪುರಾಣ'ದ ಆಧಾರದಲ್ಲಿ (ಅಲ್ಲಿಯ ಶೃಂಗಾರಭಾವಗಳನ್ನು ಬಿಟ್ಟು) ಕನ್ನಡದ ವಾರ್ಧಿಕ ಷಟ್ಪದಿರೂಪ ಪದ್ಯಗಳಲ್ಲಿ ಬರೆದ 'ಶೇಷರಾಮಾಯಣ'ವು ಇಲ್ಲಿ ನೆನೆಯಬೇಕು. ಪರಂತು. 'ಮುದ್ದಣ'ನ ಕೃತಿಯ ಅನನ್ಯವಾದ ವೈಶಿಷ್ಟ್ಯಗಳಲ್ಲಿ ಒಂದೆರಡನ್ನು ಇಲ್ಲಿ ಸೂಚಿಸುವೆನು.

'ಮುದ್ದಣ – ಮನೋರಮೆ'ಯರೆಂಬ ಪಾತ್ರಗಳ ಕಲ್ಪನೆಯಿಂದ ಕನ್ನಡ–ಕತೆಯ ಬಗೆಗೆ ವಾಚಕರ ಜಿಜ್ಞಾಸೆಗಳಿಗೆ ಕವಿ ಉತ್ತರಿಸಿದ್ದಾನೆ. 'ಮನೋರಮೆ'ಯೆಂದರೆ ನಂದಳಿಕೆ ಲಕ್ಷ್ಮೀನಾರಣಪ್ಪನ ಖಾಸಾ ಹೆಂಡತಿಯೆಂದು ಕೆಲವರ ವಾದದಲ್ಲಿ ಹುರುಳಿಲ್ಲ. ಆಕೆಯು ಭದ್ರಾವತಿಯವಳು; ಕಮಲಮ್ಮನೆಂದು ನಿಜನಾಮ; ಆಕೆ ಲೋವರ್ ಸೆಕೆಂಡರಿ ಕಲಿತವಳು. ಶುಕ್ರವಾರದ ಹಾಡು. ಶನಿವಾರದ ಹಾಡು ಇತ್ಯಾದಿ ಕಲಿತವಳೆಂದು ಕವಿ ಪುತ್ರರಾದ ಶ್ರೀ ರಾಧಾಕೃಷ್ಣಯ್ಯನವರ ಪತ್ರದಿಂದ ತಿಳಿಯುತ್ತದೆ. (ಬೆಂಗಳೂರ ಕೆಂಪೇಗೌಡ ನಗರದ 'ಮಯೂರ ಪ್ರಕಾಶನ'ದವರು ಇತ್ತೀಚೆ ಪ್ರಕಟಿಸಿದ 'ಸಾಹಿತ್ಯ–ಸಂಶೋಧನೆ'ಯೆಂಬ ನನ್ನ ಬರೆಹಗಳ ಸಂಕಲನದಲ್ಲಿ ನೋಡಿರಿ).

'ಮುದ್ದಣ'ನ ಕೃತಿಯ ಇನ್ನೊಂದು ಮೇಲ್ಮೆಯೆಂದರೆ. ರಾಮ 'ಚಿನ್ನದ ಸೀತೆ'ಯೊಡನೆ ಕುಳಿತು, ಅಶ್ವಮೇಧವನ್ನು ಪ್ರಾರಂಭಿಸಿದನೆಂಬಲ್ಲಿಗೆ, 'ನಿಜಸೀತೆ'ಯೇನಾದಳೆಂದು 'ಮನೋರಮೆ'ಯ ಪಾತ್ರದಲ್ಲಿ ಪ್ರಶ್ನೆಯೊದಗಿಸಿ, ರಾಮನು ಲೋಕಾಪವಾದಕ್ಕಾಗಿ (ರಜಕನ ದೂರುನುಡಿಗಾಗಿ) ಸೀತೆಯನ್ನು ಕಾಡಿಗೆ ಬಿಟ್ಟು ಬರಲು ಲಕ್ಷ್ಮಣನಿಗೆ ಹೇಳಿದನು; ವಾಲ್ಮೀಕಿ ಆಕೆಯನ್ನು ಕರೆದೊಯ್ದನು; ಆಕೆ ಅವಳಿ ಮಕ್ಕಳನ್ನು ಹಡೆದಳೆಂಬೀ ಘಟನೆಗಳು ಪದ್ಮಪುರಾಣದಲ್ಲಿ ಕೊನೆಗೆ (ಲವಕುಶರ ಕಾಳಗದ ಮೊದಲಿಗೆ) ಹೇಳಿದ್ದಾರೆ; ಇದನ್ನು ಕವಿಯು ಈ ಸಂದರ್ಭಕ್ಕೆ ಹೊಂದಿಸಿ ಬರೆದಿದ್ದಾನೆ. ಪಾಠ ಸಮಯದಲ್ಲಿ ವಿಷಯ ಮುಂದೆ ಸಾಗಿದಾಗ ಆ ನಡುವಿನ ಭಾಗದ ತಿಳಿವಿಗೆ ವಿದ್ಯಾರ್ಥಿ ಪ್ರಶ್ನಿಸುವುದೂ; ಗುರುಗಳು ಆಗ ನಡುವಿನ ವಿಚಾರವನ್ನು ತಿಳಿಯಿಸುವುದೂ ಇಲ್ಲಿ

(೬ನೇ ಪುಟಕ್ಕೆ ಮುಂದುವರಿದಿದೆ)


(೫ನೇ ಪುಟದಿಂದ)

ನೆನೆಯಬಹುದಾಗಿದೆ. (ಮುದ್ದಣನೂ ಭಾಷಾ ಪಂಡಿತನಲ್ಲವೇ?)

ಶ್ರೀರಾಮನು ಕೈಕೊಂಡ ಅಶ್ವಮೇಧದ ಕುದುರೆಯೆಲ್ಲೆಡೆ ಸಂಚರಿಸಿತು. ಆಯಾ ಊರಿನ ವಿಚಾರಗಳನ್ನು ಸುಮಂತ್ರ ಸೇನಾಧ್ಯಕ್ಷನಾದ ಶತ್ರುಘ್ನನಿಗೆ ತಿಳುಹುವನು. ಆ ಕುದುರೆ ವಾಲ್ಮೀಕಿಯ ಆಶ್ರಮಕ್ಕೆ ಬಂದಿತು; ಅಲ್ಲಿದ್ದ ಲವನು ಅದನ್ನು ಕಟ್ಟಿದನು; ಶತ್ರುಘ್ನನೊಡನೆ ಹೋರಾಡಿದ ಲವನು ಸೋತನು; ಅಲ್ಲಿಗೆ ಕುಶನು ಆಗಮಿಸಿದನು; ಲವಕುಶರು ಶತ್ರುಘ್ನನನ್ನೂ ಸೇನೆಯನ್ನೂ ಸೋಲಿಸಿದರು. ಅವರು ಹನುಮತ್ಸುಗ್ರೀವರನ್ನು ಕಟ್ಟಿಕೊಂಡು, ಕುದುರೆಯನ್ನೊಳಗೊಂಡು ಸೀತೆಯಲ್ಲಿಗೈದಿದರು. ಆಕೆ ಅವರನ್ನೂ, ಕುದುರೆಯನ್ನೂ ಬಿಡಹೇಳಿದರು. ಅಂತೆ, ಶತ್ರುಘ್ನಾದಿಯರು ಊರಿಗೈದಿದರು. ಅಲ್ಲಿ ಶ್ರೀರಾಮನಿಗೆ ಯುದ್ಧವರ್ಣನೆಗಳನ್ನು ಸುಮಂತ್ರನೆಂದನು. ಆಗ ಲವಕುಶರ ವಿಚಾರ ಕೇಳಿದ ರಾಮ ಅವರನ್ನೂ, ಸೀತೆಯನ್ನೂ ಕರೆತರುವಂತೆ ಲಕ್ಷ್ಮಣನನ್ನು ಕಳುಹುವನು. ಸೀತೆ ಆಗ ಬರಲಿಲ್ಲ. ಲವಕುಶರು ಬಂದರು. ಮತ್ತೊಮ್ಮೆ ಸೀತೆಯ ಆಗಮನಕ್ಕೆ ಲಕ್ಷ್ಮಣನನ್ನು ಕಳುಹಿದಾಗ. ಆಕೆ ಬಂದಳು. ಸೀತಾರಾಮರು ಸುಖವಾಗಿ ಜತೆಗೊಂಡು ಯಾಗವನ್ನು ಪೂರೈಸಿದರೆಂದು ಪದ್ಮಪುರಾಣದಲ್ಲಿದೆ (೬೫-೬೮ ಅಧ್ಯಾಯ). 'ಮುದ್ದಣ'ನ ಗದ್ಯಕಾವ್ಯದಲ್ಲಿ ಈ ಘಟನೆ ಬೇರೆಯಾಗಿ ಬಳೆದಿದೆ. ಶತ್ರುಘ್ನ ಸೋತಾಗ ಭರತನು ಬಂದು ಹೋರಾಡುವನು. ಭರತ ಸೋತಾಗ ಶ್ರೀರಾಮ ಲಕ್ಷ್ಮಣರು ಬಂದು ಲವಕುಶರಲ್ಲಿ ಹೋರಾಡಿ ಸೋಲುವರು. ಆಗ ವಾಲ್ಮೀಕಿ ಚಿತ್ತಯಿಸಿ. 'ತಂದೆ ಮಕ್ಕಳ ಕಾಳಗ'ವನ್ನು ತಡೆದನು; ನಿಜಸಂಗತಿಯರಿತ ಶ್ರೀರಾಮ ಮಕ್ಕಳನ್ನೂ ಸೀತೆಯನ್ನೂ ಅಲ್ಲಿ ಪರಿಗ್ರಹಿಸಿದನೆಂದು ಈ ಕನ್ನಡ ಕೃತಿಯಲ್ಲಿದೆ. ಈ ಘಟನೆಯು ಈ ಕವಿಯ ಕೇವಲ ಕಲ್ಪನೆಯಾಗಿಲ್ಲ! ಮಹಾಕವಿಗಳು ತಮ್ಮ ಕೃತಿಗಳಲ್ಲಿ ಇತರ ಕವಿಗಳ-ಕೃತಿಗಳಲ್ಲಿ ಕಾಣುವ ಸದಂಶಗಳನ್ನು ಆರಿಸಿ, ತಮ್ಮ ಕೃತಿಗೆ ತಕ್ಕಂತೆ ಅಳವಡಿಸಿಕೊಳ್ಳುತ್ತಾರೆಂದು ಎಲ್ಲರಿಗೂ ತಿಳಿದಿದೆ. ಪಂಪ, ರನ್ನ, ಕುಮಾರವ್ಯಾಸ, ಕುಮಾರ ವಾಲ್ಮೀಕಿ ಇತ್ಯಾದಿ ಕವಿವರೇಣ್ಯರು ತಂತಮ್ಮ ಸತ್‌ಕೃತಿಗಳಿಗೆ ಇತರ ಕವಿಗಳ ಭಾವಗಳನ್ನು ಒಳಗೊಂಡಿದ್ದಾರೆಂಬುದು ಸತ್ಯಾಂಶವಾಗಿದೆ. ಅಂತೆ, 'ಮುದ್ದಣ'ನೂ ಈ ಭಾಗವನ್ನು ಜೈಮಿನಿ ಭಾರತದಿಂದ ಎರವಲಾಗಿ ಕೊಂಡಿದ್ದಾನೆ, ಚೆಲುವಾಗಿಸಿದ್ದಾನೆ;

"ಬಳಿಕ ವಾಲ್ಮೀಕಿಯಂ ಸತ್ಕರಿಸಿ, 'ಸೀತೆ ಭೂತಳವರಿಯೆ, ಪರಿಶುದ್ಧೆ', ಲೋಕಾಪವಾದಕ್ಕೆ ಕಳೆದೆನೆಂತಾದೊಡಂ ಪುತ್ರರಂ ಪಡೆದಳಿನ್ನರವರಿಸದೆನ್ನ ಬಳಿಗೆ ಕಳುಹೆಂದು, ಬೀಳ್ಕೊಂಡು ಸುತಸಹೋದರರೊಡನೆ ದಳಸಹಿತ ಹಯವರಂ ಬೆರಸಿ, ನಿಜಪುರಕೆ ಬಂದುಳಿದಿರ್ದ ಯಜ್ಞಮಂ ನಡೆಸಿದಂ, ಮೂಜಗಂ ಪೊಗಳಲ್ಕೆ ರಘುನಾಥನು" ಎಂದು ಕನ್ನಡದ ಮಹಾಕವಿ ಲಕ್ಷ್ಮೀಶನ ವಾಕ್ಯವನ್ನು ಇಲ್ಲಿ ನೋಡಬಹುದು! (ಲಕ್ಷ್ಮೀಶನ ಶ್ರೀರಾಮಾಶ್ವಮೇಧ: ಕೆ. ವೆಂಕಟರಾಯಾಚಾರ್ಯ—ಮಯೂರ ಪ್ರಕಾಶನ, ಬೆಂಗಳೂರು. ಪುಟ ೧-೪೪).

'ಮುದ್ದಣ' ರಚಿತ 'ಶ್ರೀರಾಮಾಶ್ವಮೇಧ'ವನ್ನು ಪರಿಕಿಸಿದರೆ ಅದೊಂದು ಮಹಾಕಾವ್ಯವೆನ್ನಲಡ್ಡಿಯಿಲ್ಲ. ಅಂತೆ. 'ಮುದ್ದಣ' ಮಹಾಕವಿಯೆನ್ನುವುದಕ್ಕೆ ಸಂಶಯವಿಲ್ಲ! ಇತಿ ಶಮ್!



'ಮುದ್ದಣ' ಮಹಾಕವಿಯ ಏಕಮಾತ್ರ ಸುಪುತ್ರರಾದ, ನಿವೃತ್ತ ಅಧ್ಯಾಪಕರಾದ ಶ್ರೀ। ಎನ್. ರಾಧಾಕೃಷ್ಣಯ್ಯನವರು. (ಪೇಪರ್ ಟೌನ್. ಭದ್ರಾವತಿ). ಇದೇ ಕಳೆದ ಬಾರಿ ವಿದ್ಯಾಮಂತ್ರಿಗಳಾದ ಶ್ರೀ। ಮಲ್ಲಿಕಾರ್ಜುನಸ್ವಾಮಿಯವರ ಅಧ್ಯಕ್ಷತೆಯಲ್ಲಿ, ಭದ್ರಾವತಿಯ ವಿದ್ಯಾಲಯವೊಂದರ ಸಮಾರಂಭದಲ್ಲಿ ಶ್ರೀ। ರಾಧಾಕೃಷ್ಣಯ್ಯನವರಿಗೆ ಗೌರವ ಸತ್ಕಾರ ಏರ್ಪಡಿಸಲಾಗಿದೆ. ೧೯೭೬ರ ಫೆಬ್ರವರಿ ತಾ. ೧೬ರಲ್ಲು, 'ಮುದ್ದಣ' ಪ್ರಶಸ್ತಿಗ್ರಂಥವೊಂದು ಬೆಂಗಳೂರ ಚಾಮರಾಜ ಪೇಟೆಯ 'ಕನ್ನಡ ಸಾಹಿತ್ಯ ಕುಟೀರ'ದವರ ವತಿಯಿಂದ ಪ್ರಕಟವಾಗಲಿದೆ. ತತ್ಸಂದರ್ಭದಲ್ಲಿ ಶ್ರೀಯುತರಿಗೆ ಗೌರವನಿಧಿ ಸಮರ್ಪಿಸುವ ಕಾರ್ಯಕ್ರಮವೂ ಏರ್ಪಡಿಸಲಾಗಿದೆ. ಶ್ರೀ। ಬಿ. ನಾರಾಯಣ ನಾಯಕ್ ಎಂ. ಎಲ್. ಸಿ., ಅವರು ಅಧ್ಯಕ್ಷರಾಗಿರುವ ಸಮಿತಿ ಈ ಬಗೆಗೆ ರಚನೆಯಾಗಿ ಕೆಲಸಗಳನ್ನು ನಡೆಸುತ್ತಿದೆ.

—ಕೆ. ವೆಂಕಟರಾಯಾಚಾರ್ಯ, ಸುರತ್ಕಲ್ಲು.

# ದಿವಂಗತ ಶ್ರೀಮತಿ ರಮಾರಾಣಿ ಜೈನ್

ಧರ್ಮಾತ್ಮರಾದ ಶ್ರೀಮತಿ ರಮಾರಾಣಿ ಜೈನ್ ನಮ್ಮೆಲ್ಲರ ನಡುವೆ ಈಗ ಇಲ್ಲ. ದಿಲ್ಲಿಯಲ್ಲಿರುವ ಅವರ ಗೃಹದಲ್ಲಿ ಜುಲೈ ೨೧, ೨೨ರ ರಾತ್ರಿಯಲ್ಲಿ ೨ ಗಂಟೆ ೧೦ ನಿಮಿಷ ಸಮಯದಲ್ಲಿ ಹೃದಯಸ್ತಂಭನದಿಂ[illegible]ರು ನಿಧನಹೊಂದಿದರು.

[illegible] ಉದ್ಯಮಿ ದಾನವೀರ ಶ್ರೀ। ಶಾಂತಿಪ್ರಸಾದ ಜೈನರ ಧರ್ಮಪತ್ನಿಯೂ ಮತ್ತು ಭಾರತೀಯ ಜ್ಞಾನಪೀಠದ ಸಂಸ್ಥಾಪಿಕೆ ಹಾಗೂ ಅಧ್ಯಕ್ಷೆ ಶ್ರೀಮತಿ ರಮಾಜಿ ಅವರು ೧೯೧೭ರಲ್ಲಿ ಕಲ್ಕತ್ತದಲ್ಲಿ ಜನಿಸಿದರು. ಬಾಲ್ಯದಲ್ಲಿಯೇ ಅವರನ್ನು ಅವರ ತಂದೆಯವರಾದ ಸೇಠ್ ರಾಮಕೃಷ್ಣ ಡಾಲಮಿಯಾರು ಕುಟುಂಬದ ಬಂಧುವಾದ ಸೇಠ್ ಜಮನಾಲಾಲ್‌ಜಿ ಬಜಾಜ್ ಅವರ ಹತ್ತಿರ ಕಳುಹಿಸಿದರು. ಅಲ್ಲಿಯ ಚೈತನ್ಯಪೂರ್ಣ ವಾತಾವರಣದಲ್ಲಿ ಅವರ ಶಿಕ್ಷಣವಾಯಿತು, ಕೇವಲ ಉಚ್ಚಾದರ್ಶಗಳಲ್ಲದೆ ಎಲ್ಲರೂ ಸಮಾನರೆಂಬ ಉದಾರ ಭಾವನೆ ಅವರಲ್ಲಿ ಬೆಳೆಯಿತು.

ಬಾಲ್ಯದಿಂದಲೇ ಸ್ವಭಾವತಃ ಧಾರ್ಮಿಕ ಭಾವನೆಯುಳ್ಳ ಅವರಿಗೆ ಸಾಹಿತ್ಯದಲ್ಲೂ ಕಲೆಯಲ್ಲೂ ಅನುರಾಗವುಂಟಾಯಿತು. ಗಂಭೀರ ಹಾಗೂ ಆಳವಾದ ಅಧ್ಯಯನವು ಅವರನ್ನು ಸುಸಂಸ್ಕೃತರನ್ನಾಗಿಯೂ ಮತ್ತು ಜ್ಞಾನಿಗಳನ್ನಾಗಿಯೂ ಮಾಡಿತು. ಜೈನಾಗಮ ನಿಗಮಗಳನ್ನು ಅಭ್ಯಸಿಸಿ ಅದರಲ್ಲಿರುವ ವಿಶೇಷವನ್ನು ಕಂಡೂ ಅದನ್ನು ಇನ್ನಷ್ಟು ಹೃದಯಂಗಮವಾಗುವಂತೆ ಮಾಡುವುದಕ್ಕಾಗಿ ಅವರು ಅನ್ಯ ಧಾರ್ಮಿಕ ಗ್ರಂಥಗಳನ್ನು ಅಧ್ಯಯನ ಮಾಡಿದರು. ಅವರ ಸಮಸ್ತ ಜೀವನವೂ ಧರ್ಮಕಾರ್ಯಗಳು ಸಾಹಿತ್ಯ ಅಧ್ಯಯನ ಹಾಗೂ ಎಲ್ಲರ ಸೇವಾಕಾರ್ಯಗಳಿಗಾಗಿ ವಿನಯೋಗವಾಯಿತು.

ಎಷ್ಟೇ ಸಣ್ಣ ಕಾರ್ಯವಾದರೂ ಅದನ್ನು ಎಷ್ಟು ತತ್ಪರತೆಯಿಂದ ಮಾಡುತ್ತಿದ್ದರೆಂದರೆ ಅವರ ಕಾರ್ಯವನ್ನು ನೋಡಿದವರೆಲ್ಲರೂ ಚಕಿತರಾಗುತ್ತಿದ್ದರು. ಆಶ್ಚರ್ಯದ ಮಾತೆಂದರೆ ಇತರರಿಗೂ ಸಹ ಅದೇ ರೀತಿ ದಕ್ಷತೆಯಿಂದ ಕೆಲಸವನ್ನು ಮಾಡಲು ಪ್ರೇರೇಪಿಸುತ್ತಿದ್ದರು. ಎಷ್ಟೇ ದೊಡ್ಡ ಧಾರ್ಮಿಕ ಅಥವಾ ಸಾಹಿತ್ಯ ಸಮಾರಂಭವಾಗಲೀ ಅಥವಾ ಸಣ್ಣ ಸಮಾರಂಭವಾಗಲೀ ಅವರು ಎಷ್ಟು ವ್ಯಾಪಕವಾಗಿ ಹೊಂದಿಕೊಳ್ಳುತ್ತಿದ್ದರೆಂದರೆ ಅದರ ಸಫಲತೆಗಾಗಿ ಬಹು ಶ್ರಮ ಪಡುತ್ತಿದ್ದರು. ಅನೇಕ ಯೋಜನೆಗಳು ಅವರ ಸಂಚಾಲನೆಯಲ್ಲಿ ಹಾಗೂ ಚತುರ ನಿರ್ದೇಶದನಲ್ಲಿ ಸಫಲತೆಯ ಶಿಖರವನ್ನು ತಲುಪಿದವು, ಮತ್ತು ಅವರಿಗೊಂದು ವಿಶಿಷ್ಟ ವ್ಯಕ್ತಿತ್ವವನ್ನು ತಂದುಕೊಟ್ಟವು.

ಭಾರತೀಯ ಜ್ಞಾನ ಪೀಠದ ಎಲ್ಲ ಶ್ರೇಯಸ್ಸು ಹಾಗೂ ದೇಶಾಂತರ ವ್ಯಾಪ್ತಿ ಖ್ಯಾತಿಯ ಹಾಗೂ ಪ್ರತಿಷ್ಠೆಯ ಎಲ್ಲ ಕೀರ್ತಿಯೂ ಅವರಿಗೆ ಸಲ್ಲಬೇಕು. ಈ ಅದ್ವಿತೀಯವಾದ ಸಾಂಸ್ಕೃತಿಕ ಸಂಸ್ಥೆಗೆ ಇವರು ಮಾತೃಸಂಸ್ಥಾಪಿಕೆ ಮಾತ್ರವಲ್ಲ, ಅದರ ಒಂದೊಂದು ದಿನದ ಕಾರ್ಯಕ್ಕೂ ಅದರ ಎಲ್ಲಾ ಪ್ರಗತಿಗೂ ಸೂತ್ರಧಾರಿಣಿಯಾಗಿದ್ದರು, ಮೂರು ದಶಕಗಳ ಹಿಂದೆ ೧೯೪೪ರಲ್ಲಿ ಶ್ರೀ। ಶಾಂತಿ ಪ್ರಸಾದ ಜೈನ್ ಹಾಗೂ ಶ್ರೀಮತಿ ರಮಾ ಜೈನ್ ಇವರು ವಾರಣಾಸಿಯಲ್ಲಿ ಈ ಸಂಸ್ಥೆಯನ್ನು ಸ್ಥಾಪಿಸಿದರು. ಲೋಕಹಿತಕಾರಿಯಾದ ಮೌಲಿಕ ಸಾಹಿತ್ಯದ ನಿರ್ಮಾಣದ ಘನ ಉದ್ದೇಶಕ್ಕಾಗಿ ವಿಶೇಷವಾದ ಮೂರ್ತಿದೇವಿ ಗ್ರಂಥಮಾಲೆಯನ್ನು ನಿಯೋಜಿಸಿದರು. ಈ ಗ್ರಂಥಮಾಲೆಯಲ್ಲಿ ಅಂತರ್ಗತ ಜೈನ ಶಾಸ್ತ್ರ ಪುರಾಣಗಳು ಮತ್ತು ಇತರ ಅನೇಕ ಅಮೂಲ್ಯವಾದ ಹಾಗೂ ಅಲಭ್ಯ ಗ್ರಂಥಗಳನ್ನು ಪ್ರಕಾಶಿಸಿದರು.

'ಜ್ಞಾನಪೀಠ ಸಾಹಿತ್ಯ ಪುರಸ್ಕಾರ ಯೋಜನೆ'ಯು ದೇಶದ ಗೌರವಕ್ಕೆ ಪಾತ್ರವಾಗಿದೆ. ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಭಾರತೀಯ ಭಾಷೆಯಲ್ಲಿ ರಚಿಸಲ್ಪಟ್ಟ ಸೃಜನಾತ್ಮಕ ಸಾಹಿತ್ಯಗಳಲ್ಲಿ ಸರ್ವಶ್ರೇಷ್ಠವಾದ ಸಾಹಿತ್ಯಕ್ಕೆ ಪ್ರತಿ ವರ್ಷವೂ ಒಂದು ಲಕ್ಷ ರೂಪಾಯಿಗಳ ಪುರಸ್ಕಾರವನ್ನು ಕೊಟ್ಟು, ಸನ್ಮಾನಿಸಲಾಗುತ್ತದೆ. ಶ್ರೀಮತಿ ರಮಾಜಿಯವರು ಎಷ್ಟೊಂದು ಪ್ರಬುದ್ಧ ಚೇತನರಾಗಿದ್ದರೆಂಬುದು ಈ ಪುರಸ್ಕಾರ ಯೋಜನೆಯಿಂದಲೇ ಪ್ರಕಟವಾಗುತ್ತದೆ. ಶ್ರೀಮತಿ ರಮಾಜಿಯವರು ಭಾರತೀಯ ಜ್ಞಾನಪೀಠದ ಅಧ್ಯಕ್ಷೆಯಾಗಿಯೂ, ಸಾಧು ಜೈನ ಟ್ರಸ್ಟಿಯ ಮೆನೇಜಿಂಗ್ ಟ್ರಸ್ಟಿಯಾಗಿಯೂ ಟ್ರಸ್ಟಿನಿಂದ ಲಕ್ಷಾಂತರ ರೂಪಾಯಿ ಛಾತ್ರವೃತ್ತಿಯಲ್ಲಿಯೂ ಕೊಡಲಾಗುತ್ತದೆ.

—೦—

ಹೊಗಳುಭಟನ ವಿಷಯ ಎಚ್ಚರಿಕೆ! ಅವನು ನಿಮಗೆ ಬರಿದಾದ ಸೌಟಿನಿಂದ ಉಣ್ಣಿಸುತ್ತಾನೆ.

—ಕೊಸಿನೊ ಡಿಗ್ರೆಗ್ರಿಯೋ.

ಸ್ವಾತಂತ್ರ್ಯವು ತೀರ ಬಳಿಯಲ್ಲಿ, ಕೈಗೆಟಕುವಷ್ಟು ಸನಿಯದಲ್ಲಿದ್ದರೆ—ವಯೋವೃದ್ಧನೂ ಧೀರ-ಶೂರನಾಗುವಂತೆ ಮಾಡುತ್ತದೆ.

—ಸೆನೆಕಾ.

ಎಲ್ಲ ತರದ ಸ್ವಾತಂತ್ರ್ಯಗಳಿಗಿಂತ ನನಗೆ, —ತಿಳಿದುಕೊಳ್ಳುವಂತೆ, ಧ್ಯಾನಿಸುವಂತೆ, ನಂಬುವಂತೆ ಮತ್ತು ನನ್ನ ಆತ್ಮಸಾಕ್ಷಿಗೆ ಸರಿಯಾಗಿ ನುಡಿವಂತೆ ಸ್ವಾತಂತ್ರ್ಯಕೊಡು.

—ಜೊನ್ ಮಿಲ್ಟನ್.

ಮಕ್ಕಳ ಕತೆ.

# ನ್ಯಾಯ ವಿಚಾರಣೆ

(ನಿಕೊಲಾಯಿ ಪೊಪೋವ್)

ಈ ಕಥೆ ಎಂದು ನಡೆಯಿತೋ ಯಾರಿಗೂ ಗೊತ್ತಿಲ್ಲ. ಇದು ನಡೆಯಲೇ ಇಲ್ಲವೆಂದೂ ಕೆಲವರು ಹೇಳುತ್ತಾರೆ. ಇರಲಿ,

ಬಹಳಷ್ಟು ಕಾಲದ ಹಿಂದೆ, ಒಂದು ದಿನ, ಕಾಡಡವಿಗಳಿಂದ, ಪೊದೆಗಳಿಂದ ಎಲ್ಲ ಪಕ್ಷಿಗಳೂ ಒಂದೆಡೆ ಸೇರಿ ಕೋಗಿಲೆಯ ನ್ಯಾಯ ವಿಚಾರಣೆ ನಡೆಸಿದವು.

ಜೋತುಬಿದ್ದ ರೆಂಬೆಯ ಮೇಲೇರಲು ಕೋಗಿಲೆಗೆ ಆಜ್ಞಾಪಿಸಲಾಯಿತು.

ಕಾಡಿನ ನಾಯಕನೆನಿಸಿಕೊಂಡ ಗ್ರೌಸ್ ಪಕ್ಷಿ, ಚುರುಕು ಕಿವಿಯ ರಾತ್ರಿಯ ರಾಣಿ ಗೂಬೆ, ಎರಡು ಹಾಡುಹಕ್ಕಿಗಳು ಹಾಗೂ ನ್ಯಾಯವಾದಿಗಳಲ್ಲೇ ಅತ್ಯಂತ ನೇರ ಸ್ವಭಾವದ ಕಪ್ಪು ಮರಕುಟಿಗ—ಹೀಗೆ ಪಕ್ಷಿ ಬಳಗದ ಗೌರವಾನ್ವಿತ ಮೇಧಾವಿ ನ್ಯಾಯವಾದಿಗಳು ನ್ಯಾಯಾಲಯದಲ್ಲಿ ತಮ್ಮ ಸ್ಥಾನಗಳನ್ನು ಅಲಂಕರಿಸಿದುವು.

"ಹೂಂ, ಹೇಳು, ನಿಜ ಹೇಳು!" ಎಂದು ಗ್ರೌಸ್ ಗಂಭೀರವಾಗಿ ಪ್ರಶ್ನಿಸಲಾರಂಭಿಸಿತು. "ಈ ಪರಿಯ ಜೀವನ ಏಕೆ ನಡೆಸುತ್ತಿದ್ದೀಯಾ? ಎಲ್ಲ ಪಕ್ಷಿಗಳೂ ನಿನ್ನ ವಿರುದ್ಧ ದೂರುತ್ತಿವೆ. ಅವು ನೂರಾರು ದೂರುಗಳನ್ನು ಸಲ್ಲಿಸಿವೆ. ಮನೆಮಾರು ಇಲ್ಲದವಳಾದ ಕೋಗಿಲೆಯೆ! ನಿನ್ನಿಂದಾಗಿ ಅದೆಷ್ಟು ಕುಟುಂಬಗಳು ಪರಿತಪಿಸುತ್ತಿವೆ, ನೋಡು. ನಿನ್ನದೇ ಆದ ಸ್ವಂತ ಗೂಡನ್ನು ಏಕೆ ಕಟ್ಟಿಕೊಂಡಿಲ್ಲ? ನಿನ್ನ ಮರಿಗಳನ್ನು ನೀನೇ ಏಕೆ ಪೋಷಿಸುತ್ತಿಲ್ಲ? ನಿನ್ನ ಮೊಟ್ಟೆಗಳನ್ನು ಬೇರೆ ಪಕ್ಷಿಗಳ ಗೂಡಿನಲ್ಲಿ ಯಾಕೆ ಇಡುತ್ತೀಯಾ? ನಿನ್ನ ಮರಿಗಳನ್ನು ನೀನೆ ಏಕೆ ಸಾಕುತ್ತಿಲ್ಲ? ನಿನ್ನ ಮರಿಗಳಾದರೋ ಕೆಟ್ಟ ತಿಂಡಿಪೋತಗಳು. ಮೊಟ್ಟೆಯಿಂದ ಹೊರಬರುವುದೇ ತಡ, ನಿಸ್ಸಹಾಯಕ ಸ್ಥಿತಿಯಲ್ಲಿರುವ ತಮ್ಮ ಸಾಕು-ಸೋದರ, ಸೋದರಿಯರನ್ನು ಗೂಡಿನಿಂದ ಹೊರ ಹಾಕಿ ಸಾಯಿಸುತ್ತವೆ........"

ಈ ಭಾಷಣವು ಎಲ್ಲ ಪಕ್ಷಿಗಳನ್ನೂ ಕೆರಳಿಸಿತು. ಸದ್ದು ಜೋರಾಯಿತು. "ಎಲ್ಲ ಕೋಗಿಲೆಗಳನ್ನೂ ಕೊಂದುಬಿಡಿ! "ಕಾಡಿನಲ್ಲಿ ಕೋಗಿಲೆಯ ಅಸಹ್ಯ ಕೂಗು ಮತ್ತೆ ಎಂದಿಗೂ ಕೇಳಿಸದಂತೆ ಮಾಡಿ!" ಎಂಬ ಕರೆಗಳು ಕೇಳಿಬರತೊಡಗಿದುವು.

ಇನ್ನು ಕೋಗಿಲೆಯ ಸರದಿ. ಅದು ಹೇಳಲಾರಂಭಿಸಿತು:

"ಘನ ಪಾಂಡಿತ್ಯವುಳ್ಳ ಮೇಧಾವಿ ನ್ಯಾಯಮೂರ್ತಿಗಳೆ! ನನ್ನ ಮೇಲೆ ಕರುಣೆ ಇರಲಿ. ತನ್ನ ಮರಿಗಳನ್ನೇ ತೊರೆದು ಬಿಡುವಂಥ ಹೃದಯಶೂನ್ಯ ತಾಯಿ ನಾನಲ್ಲ. ನಾನು ತುಂಬ ಅಸುಖಿ. ನಿಮ್ಮನ್ನು ಕಂಡರೆ ನನಗೆ ಅಸೂಯೆಯಾಗುತ್ತದೆ. ನೀವಾದರೋ ನಿಮ್ಮ ಬೆಚ್ಚಗಿನ ಗೂಡುಗಳನ್ನು ಕಟ್ಟಿಕೊಳ್ಳುತ್ತೀರಿ, ಅವುಗಳಲ್ಲಿ ಮೊಟ್ಟೆಗಳನ್ನಿಡುತ್ತೀರಿ ಮತ್ತು ನಿಮ್ಮ ಮರಿಗಳಿಗೆ ಕಾವು ಕೊಡುತ್ತೀರಿ. ಆದರೆ ನಾನು? ಮೊಟ್ಟೆಗಳನ್ನಿಟ್ಟಾಗ, ನಾನೂ ಕೂಡ ಅವುಗಳ ಮೇಲೆ ಕೂರಬೇಕು, ಅವುಗಳಿಂದ ಹೊರಬರುವ ಮರಿಗಳನ್ನು ನೋಡಿ ನಲಿಯಬೇಕು ಅನಿಸುತ್ತದೆ. ಆದರೆ ಹಾಗೆ ಮಾಡುವುದು ನನ್ನಿಂದಾಗದು. ಯಾಕೆಂದರೆ ನನ್ನ ಹೊಟ್ಟೆಯಲ್ಲಿ ಇನ್ನೊಂದು ಮೊಟ್ಟೆ ಬೆಳೆಯುತ್ತಿರುತ್ತದೆ. ಇನ್ನೇನು ಮೊಟ್ಟೆ ಇಡಬೇಕು ಎನ್ನುವುದರಲ್ಲೇ ನನ್ನ ಮೊದಲಿನ ಮೊಟ್ಟೆಗಳಿಂದ ಮರಿಗಳು ಹೊರಬಂದಿರುತ್ತವೆ. ದಯವಿಟ್ಟು, ನಾನೇನು ಮಾಡಬೇಕು, ನೀವೆ ಹೇಳಿ, ನನ್ನ ಮೊದಲಿನ ಪುಟ್ಟ ಮರಿಗಳಿಗಾಗಿ ಆಹಾರ ತರಲು ಮರದಿಂದ ಮರಕ್ಕೆ ಹಾರಾಡಬೇಕೊ ಅಥವಾ ಕಾವುಕೊಡಲು ಹೊಸ ಮೊಟ್ಟೆಗಳ ಮೇಲೆ ಕೂರಬೇಕೊ? ನನ್ನ ಮೊಟ್ಟೆಗಳನ್ನು ಬೇರೆ ತಾಯಂದಿರ ಗೂಡುಗಳಲ್ಲಿ ಇರಿಸುವುದೊಂದೇ ನನಗಿರುವ ಏಕೈಕ ಮಾರ್ಗ, ದೈವವು ಮಾತೃತ್ವದ ಸುಖವನ್ನು ನನ್ನಿಂದ ಕಸಿದುಕೊಂಡಿದೆ. ನನ್ನ ಮರಿಗಳನ್ನು ನೋಡಿಕೊಳ್ಳುವ ಕಾರ್ಯವನ್ನು ಬೇರೆ ತಾಯಂದಿರಿಗೆ ಒಪ್ಪಿಸಲೇಬೇಕಾಗಿದೆ. ನನಗೆ ಕೊರಗು ಅಥವಾ ನಾಚಿಕೆ ಏನೂ ಇಲ್ಲವೆಂದು ನೀವು ತಿಳಿದಿದ್ದರೆ ಅದು ನಿಮ್ಮ ತಪ್ಪು. ನಿಜ ಹೇಳಬೇಕೆಂದರೆ ನಾನು ನನ್ನ ಮಕ್ಕಳಿಗಾಗಿ ಬಹಳ ಹಲುಬುತ್ತಿರುತ್ತೇನೆ. ಕಾಡಿನಲ್ಲಿ ನೀವು ಕೇಳುವ ದುಃಖಭರಿತ ಕು ಕೂ ಎಂಬ ಕೂಗೇ ನನ್ನ ಶೋಕಗೀತೆ, ನನ್ನ ಮತ್ತು ನನ್ನ ಪತಿಯ ಶೋಕಗೀತೆ!"

ನ್ಯಾಯವಾದಿಗಳು ಪ್ರಕರಣವನ್ನು ಚರ್ಚಿಸಲು ಹೊರಟರು. ಗ್ರೌಸ್ ಪಕ್ಷಿಯು ತನ್ನ ವಾದವನ್ನು ಬದಲಿಸಲಿಲ್ಲ. ಗೂಬೆಯೂ ಅದರ ಪರವಾಗಿ ನಿಂತಿದ್ದಿತು. ಆದರೆ, ಕೋಗಿಲೆಯ ಮಾತಿನಿಂದ ಹಾಡು ಹಕ್ಕಿಗಳು ತತ್ತರಿಸಿದುವು.

ಶ್ರಮಜೀವಿ ಮರಕುಟಿಗ ಹೇಳಿತು:

"ಕೋಗಿಲೆ ತಪ್ಪಿತಸ್ಥಳಲ್ಲ; ಜಗತ್ತನ್ನೇ ಸುಂದರವಾಗಿಡುವ ಮರಗಳ ತೋಪುಗಳು ಮತ್ತು ಕಾಡುಗಳಲ್ಲಿ ವಿನಾಶಕಾರಿ ಕ್ರಿಮಿಗಳು ತುಂಬಿಕೊಂಡಿರುವುದು ನಿಮಗೆ ಗೊತ್ತಿರಲು ಸಾಕು. ಹಣ್ಣು-ಕಾಯಿ ಮತ್ತು ಕಾಳು-ಕಡ್ಡಿಗಳನ್ನೇ ತಿಂದು ಜೀವಿಸುವ ಹಕ್ಕಿಗಳೂ ಇವೆ. ಗಿಡಗಳನ್ನು ಸಾಯಿಸುವಂಥ ಕ್ರಿಮಿ-ಕೀಟಗಳನ್ನು ತಿನ್ನುವ ಗೋಜಿಗೆ ಅವು ಹೋಗುವುದಿಲ್ಲ. ಪಕ್ಷಿಗಳೇ, ನಿಜ ಹೇಳಿ. ಕಾಡುಗಳಿಗೆ ಕಡು ವೈರಿಯಾಗಿರುವ ಪತಂಗಗಳನ್ನು ನಿಮ್ಮಲ್ಲಿ ಯಾರು ತಿನ್ನುತ್ತೀರಿ? ಗ್ರೌಸ್ ಮಹಾಶಯರೇ! ನೀವು ತಿನ್ನುತ್ತೀರಾ? ಹೋಗಲಿ, ಗೂಬೆ? ಹೊಟ್ಟೆ ಬಿರಿಯುವಂತೆ ಹಣ್ಣು-ಕಾಯಿಗಳನ್ನು ತಿನ್ನುವ ಹಾಡು ಹಕ್ಕಿಗಳೆ! ನೀವಾದರೂ ತಿನ್ನುತ್ತೀರಾ?"

ನ್ಯಾಯವಾದಿಗಳ ಮುಖ ವಿವರ್ಣವಾಯಿತು. ನ್ಯಾಯ ತಕ್ಕಡಿ ನಿರಪರಾಧಿಯ ಕಡೆಗೆ ವಾಲಿತು. ಕೋಗಿಲೆ ಗೆದ್ದಿತು.

ವರ್ಷಗಳು, ಶತಮಾನಗಳು ಉರುಳಿ

(೮ನೇ ಪುಟಕ್ಕೆ ಮುಂದುವರಿದಿದೆ)

# ಭಾರತ ಮತ್ತು ಟಿಬೆಟ್ಟಿನ ಪುರಾತನ ವೈದ್ಯಕೀಯ ಸೂತ್ರಗಳು

(ಎ. ಸೊಕೊಲೊವ್)

**ಭಾರತ–ಟಿಬೆಟ್ ಔಷಧಿಗಳು ರಹಸ್ಯಗಳಿಂದ ಮತ್ತು ಅವುಗಳು ಬೀರುವ ಪವಾಡಸದೃಶ ಪರಿಣಾಮಗಳು ದಂತಕಥೆಗಳಿಂದ ಆವರಿಸಿದೆ. ಇದಕ್ಕೆ ಏನಾದರೂ ಆಧಾರವಿದೆಯೆ? ಪೌರಸ್ತ್ಯ ವೈದ್ಯರು–ಚಿಕಿತ್ಸಕರು ಶತಮಾನಗಳ ಹಿಂದೆ ಸೂಚಿಸಿದ ಔಷಧಿ-ಚಿಕಿತ್ಸೆಗಳು ಆಧುನಿಕ ಔಷಧ-ಚಿಕಿತ್ಸಾ ಸಾಧನಗಳ ಸಂಗ್ರಹವನ್ನು ಶ್ರೀಮಂತಗೊಳಿಸಬಲ್ಲುವೇ? ಈ ಪ್ರಶ್ನೆಗಳಿಗೆ ಉತ್ತರ ನೀಡುವುದು ವಿಜ್ಞಾನಿಗಳಿಗೆ ಬಿಟ್ಟಿದು.**

ಭಾರತ-ಟಿಬೆಟ್ ವೈದ್ಯಕೀಯ ಪರಂಪರೆಯ ಅಧ್ಯಯನ ನಡೆಸುವ ಸಲುವಾಗಿಯೇ ೧೯೬೮ರಲ್ಲಿ, ಸೋವಿಯೆತ್ ಒಕ್ಕೂಟದ ವಿಜ್ಞಾನಗಳ ಅಕಾಡೆಮಿಯ ಸೈಬೀರಿಯನ್ ಶಾಖೆಯ ಬುರ್‍ಯಾತ ವಿಭಾಗದ ಸಾಮಾಜಿಕ ವಿಜ್ಞಾನಗಳ ವಿಭಾಗವು ಪಿ.ಬಿ. ಬಲ್‌ದನ್‌ಹೆಪೊವ್, ಎಂ. ಎಸ್‌ಸಿ (ಇತಿಹಾಸ) ಅವರ ನೇತೃತ್ವದಲ್ಲಿ ಸಮಿತಿಯೊಂದನ್ನು ಸ್ಥಾಪಿಸಲಾಯಿತು.

ಸಮಿತಿಯ ಸದಸ್ಯರು ರಾಜ್ಯ ಹಾಗೂ ಖಾಸಗಿ ಪುಸ್ತಕ ಭಂಡಾರಗಳಲ್ಲಿ "ಶೋಧನೆ"ಗಳನ್ನು ಪ್ರಾರಂಭಿಸಬೇಕಾಯಿತು; ಕಪ್ಪು ವಾರ್ನಿಷ್ ಬಳಿದಿದ್ದ ಹಾಳೆಯ ಹಸ್ತಪ್ರತಿಯೊಂದು ದೊರೆಯಿತು. ಇದು ಹಾಳಾದ ಚಿತ್ರದ ನೆಗೇಟಿವ್‌ನಂತೆ ಕಾಣುತ್ತಿದ್ದಿತು. ಚಿನ್ನದ ಬಣ್ಣದಲ್ಲಿ ಬರೆಯಲಾಗಿದ್ದಿತು. ಒತ್ತಿ ಹೇಳಬೇಕಾಗಿದ್ದ ವಿಷಯಗಳಡಿಯಲ್ಲಿ ಹಲವು ಬಣ್ಣದ ಗೆರೆಗಳನ್ನು ಹಾಕಲಾಗಿದ್ದಿತು. ಇದರ ನಂತರ, ಕಾಲಬಾಧಿತವಾಗಿ ಹಳತಾದ ವಿಚಿತ್ರವಾದ ಸಂಸ್ಕೃತ ಲಿಪಿಯಲ್ಲಿ ಅಥವಾ ಮೇಲಿನಿಂದ ಕೆಳಗೆ ಹಳೆಯ ಮಂಗೋಲಿಯದ ಬರೆಹದಲ್ಲಿ ಬರೆಯಲಾದ ಹಸ್ತಪ್ರತಿ ದೊರೆಯಿತು. ದಾರುಮರದ ಪಟ್ಟಿಗಳಲ್ಲಿ ಅಲಂಕೃತವಾಗಿ ಬರೆದ ಹಾಳೆಗಳು ಹೇರಳವಾಗಿದೊರೆತವು.

ಇವುಗಳಲ್ಲಿ ಮುಖ್ಯವಾದ ಪ್ರತಿ ಎಂದರೆ, ನಾಲ್ಕು ಪಟ್ಟಿಗಳಲ್ಲಿ ಬರೆದ ಇಂಡೋ-ಟಿಬೆಟನ್ ವೈದ್ಯಕೀಯ ಸೂತ್ರ ದ್ಜುದ್‌ಷಿ-ಔಷಧಿಗಳ ಸಾರ, ಅಥವಾ ಎಂಟು ಮಂದಿಯ ರಹಸ್ಯ ಬೋಧನೆಯ ನಾಲ್ಕು ಮುಖ್ಯ ಅಂಶಗಳು ಎಂಬುದಾಗಿದೆ.

ಇದಕ್ಕೆ ಮೊದಲು ಈ ಗ್ರಂಥದ ರಹಸ್ಯಗಳನ್ನು ಬಯಲುಮಾಡಲು ಪ್ರಯತ್ನಿಸಲಾಗಿದೆ. ಆದರೆ ಅದು ತುಂಬ ಕಷ್ಟಕರವಾಗಿ ಕಂಡಿತು. ೧೪,೦೦೦ ಕಾವ್ಯಗಳ ಸಾಲನ್ನುಳ್ಳ ಈ ಗ್ರಂಥದ ಪ್ರತೀಯೊಂದು ಅಕ್ಷರವನ್ನೂ ಅರ್ಥೈಸಬೇಕಾಗಿದ್ದಿತು. ಪ್ರಾಚೀನ ಕಾಲದಲ್ಲಿ ವೈದ್ಯಕೀಯ ಚಿಕಿತ್ಸೆಯು ಕೇವಲ ಸೀಮಿತ ವಲಯದಲ್ಲೇ ಮೀಸಲಾಗಿದ್ದಿತು. ಅದನ್ನು ಅವರು ತಮ್ಮ ಸ್ವತ್ತೆಂದು ಎಚ್ಚರಿಕೆಯಿಂದ ಕಾದಿರಿಸಿಕೊಂಡಿದ್ದರು. ಔಷಧಿ ಇಲ್ಲವೆ ಚಿಕಿತ್ಸೆ ಪಡೆದ ಇಲ್ಲವೆ ಅರಿತ ಪ್ರತಿಯೊಬ್ಬನೂ ಅದರ ರಹಸ್ಯ ಕಾಪಾಡುವ ಪ್ರತಿಜ್ಞೆ ಕೈಗೊಳ್ಳಬೇಕಾಗಿದ್ದಿತು. ಅಂತೆಯೇ ಇಂಥ ಲಿಖಿತ ಹಸ್ತಪ್ರತಿಗಳು ಅನೇಕ ವೇಳೆ ರಹಸ್ಯವಾಗಿಯೇ ಉಳಿದುಬಿಡುತ್ತಿದ್ದವು; ಇಲ್ಲವೆ ವಿವರಗಳನ್ನು ಸಾಂಕೇತಿಕವಾಗಿ, ಗೂಢಾರ್ಥದಲ್ಲಿ ಸೂಚಿಸಲಾಗುತ್ತಿದ್ದಿತು.

ವೈಜ್ಞಾನಿಕ ಸಮಿತಿಯ ಐದಾರು ವರ್ಷಗಳ ಗಾಢಾಧ್ಯಯನವು ಸಾಕಷ್ಟು ಒಳ್ಳೆಯ ಫಲಿತಾಂಶಗಳನ್ನೇ ನೀಡಿದೆ. ದ್ಜುದ್‌ಷಿ–ಮತ್ತು ಭಾರತ-ಟಿಬೆಟನ್ ವೈದ್ಯಕೀಯ ಔಷಧಿಗಳ ಪ್ರಧಾನವಾದ ಅನೇಕ ಮೂಲ ಕೃತಿಗಳನ್ನು ರಷ್ಯನ್ ಭಾಷೆಗೆ ಅನುವಾದಿಸಲಾಗಿದೆ. ಪೌರಸ್ತ್ಯ ವೈದ್ಯರುಗಳು ಬಳಸುತ್ತಿದ್ದ ವೈದ್ಯಮೂಲಿಕೆಗಳ ವಿವರಗಳನ್ನು ನೀಡಲಾಗಿದೆ. ಯುನೆಸ್ಕೋ ಸೂಚನೆಯ ಮೇರೆಗೆ ದ್ಜುದ್‌ಷಿ ಗ್ರಂಥವನ್ನು ಸಚಿತ್ರ ಸಹಿತವಾದ ಪರಿಶಿಷ್ಟದೊಡನೆ ಅಚ್ಚಿಗೆ ಸಿದ್ಧಗೊಳಿಸಲಾಗಿದೆ. ಈ ಸಚಿತ್ರ ಪರಿಶಿಷ್ಟ ಒಂದು ರೀತಿಯಲ್ಲಿ ಭಾರತ-ಟಿಬೆಟ್ ವೈದ್ಯ ಚಿಕಿತ್ಸೆಯ ನಕ್ಷೆಯಾಗಿದೆ ಎನ್ನಬಹುದು. ಈ ತನಕ ದ್ಜುದ್‌ಷಿಯ ಒಂದೇ ಹಸ್ತಪ್ರತಿ ದೊರೆತಿರುವುದು. ಇದನ್ನು ಬುರ್‍ಯಾತಿಯಾದ ಉಲಾನ್ ಉದೆಯಲ್ಲಿರುವ ಎ. ಖಿಗಲೋವ್ ಸ್ಥಳೀಯ ಜನಪದ ವಸ್ತು ಸಂಗ್ರಹಾಲಯದಲ್ಲಿ ಪತ್ತೆಮಾಡಲಾಯಿತು. ಈ ಹಸ್ತಪ್ರತಿಯನ್ನು ಈ ಮೊದಲಿಗೆ ಯಾರೂ ಓದಿರಲಿಲ್ಲ ಇಲ್ಲವೆ

(೧೮ನೇ ಪುಟಕ್ಕೆ ಮುಂದುವರಿದಿದೆ)

ಟಿಬೆಟ್, ಮಂಗೋಲಿಯ, ಮತ್ತು ಬುರ್‍ಯಾತಿಯಾದ ವೈದ್ಯರುಗಳು ರಚಿಸಿದ ಮತ್ತು ಅನೇಕ ಚಿಕಿತ್ಸಾ ವಿವರಗಳು ಹಾಗೂ ಚಿಕಿತ್ಸಾ ಕೈಪಿಡಿಗಳ ಹಸ್ತಪ್ರತಿಗಳನ್ನು ಬುರ್‍ಯಾತಿಯ ರಕ್ಷಿಸಿಟ್ಟಿದೆ. ಜನಪದ ವೈದ್ಯರಲ್ಲಿ ತರಬೇತಿ ಪಡೆದ ಬುರ್‍ಯಾತಿಯಾ ವೈದ್ಯ–ಚಿಕಿತ್ಸಕರು ಇಂದಿಗೂ ಜೀವಿಸಿದ್ದಾರೆ. ಪ್ರಾಚೀನ ವೈದ್ಯಕೀಯದಲ್ಲಿ ಬಳಸುತ್ತಿದ್ದ ಅನೇಕ ಸಸ್ಯ-ಮೂಲಿಕೆಗಳು ಈ ಸ್ವಾಯತ್ತ ಗಣರಾಜ್ಯದಲ್ಲಿ ಕಂಡುಬರುತ್ತವೆ. ಈ ಮೊದಲಿಗೂ ಈ ಮೂಲಿಕೆಗಳ ಅಧ್ಯಯನ ನಡೆಸಲಾಗಿದ್ದಿತು. ಲೆನಿನ್‌ಗ್ರಾಡ್‌ನ ಪ್ರೊ। ಎ. ಜಿ. ಗಮ್ಮೆರ್‌ಮನ್ ಹಲವಾರು ದಶಕಗಳ ಕಾಲ ಇವುಗಳ ವೈದ್ಯಕೀಯ ಹಾಗೂ ರಾಸಾಯನಿಕ ಅಧ್ಯಯನಗಳನ್ನು ನಡೆಸಿದರು. ಆಕೆ ತನ್ನ ಅಧ್ಯಯನದ ಸಾರವನ್ನು ಟಿಬೆಟ್ ವೈದ್ಯಕೀಯದಲ್ಲಿ ಬಳಸುವ ಆಕರಗಳಾದ ಮೂಲಿಕೆಗಳ ಹೆಸರುಗಳ ಟಿಬೆಟನ್–ಲೆಟಿನ್–ರಷ್ಯನ್ ನಿಘಂಟು ಎಂಬ ಕೃತಿಯಲ್ಲಿ ವಿವರಿಸಿದ್ದಾರೆ. ಈ ಕೃತಿಯು ೧೯೬೩ರಲ್ಲಿ ಪ್ರಕಟವಾಯಿತು.

---

(೭ನೇ ಪುಟದಿಂದ)

ದುವು. ಕೆಲವು ಪಕ್ಷಿಗಳಿಗಷ್ಟೇ ಈ ನ್ಯಾಯ ವಿಚಾರಣೆಯ ನೆನಪುಂಟು,

ಕಾಡು ಬೆಳೆಯುತ್ತದೆ........ಹಕ್ಕಿಗಳು ಹಾಡುತ್ತವೆ........

ಅವುಗಳ ಮೂಲಕ ಕೋಗಿಲೆಯ ಖಿನ್ನ, ಶುಷ್ಕ ಕಂಠದ ಶೋಕಗೀತೆ ಕೇಳಿಬರುತ್ತದೆ........

—೦—

# ಬೆಳಕು ಮೂಡಿತು

(ಗಿರಿಜಾತನಯ)



ಆನಂದವನ್ನೀವ ಬೆಳಕನ್ನು ಇತರರು ಕಾಣದಂತೆ ಸ್ವಾರ್ಥಿ ಮನುಷ್ಯ, ತನ್ನ ಪುಟ್ಟ ಕೈಯನ್ನು ಅಡ್ಡವಾಗಿ ಹಿಡಿದು ಮರೆಸಲು ಇಚ್ಛಿಸುತ್ತಾನೆ. ಆದರೆ, ಬೆಳಕು! ಆ ಕ್ಷುದ್ರ ಮಾನವನ ಅಜ್ಞಾನಕ್ಕಾಗಿ ನಗುತ್ತ ಆ ಸಣ್ಣ ಕೈಯನ್ನು ಮೀರಿ ಕಿರಣಗಳನ್ನು ಪಸರಿಸುತ್ತ ನಗುನಗುತ್ತ, ಪ್ರಕಾಶವನ್ನು ಆನಂದಿಸಲು ಉತ್ಸುಕನಾಗಿರುವ ಭಾವುಕನನ್ನೂ ನಗಿಸಿ ಆನಂದವನ್ನೀಯುತ್ತದೆ.

ನನ್ನ ಚಿರಂಜೀವಿಗೆ ಅದೇ ತಾನೆ ಬ್ರಹ್ಮೋಪದೇಶ ನೆರವೇರಿಸಲ್ಪಟ್ಟಿತ್ತು. ನೆರೆಯೂರಿನಲ್ಲಿ ಶ್ರೀ ಸ್ವಾಮೀಜಿಯವರು ಮೊಕ್ಕಾಂ ಮಾಡಿದ್ದರು. ಸ್ವಾಮೀಜಿಯವರನ್ನು ನನ್ನ ಗೃಹಕ್ಕೆ ಬರಮಾಡಿಸಿಕೊಂಡು ಈ ಕಾರ್ಯಕ್ರಮ ನೆರವೇರಿಸುವ ಭಾಗ್ಯವಂತನಲ್ಲ ನಾನು ಎಂದೆನಿಸಿದರೂ, “ಮನೆಸಮೀಪಕ್ಕೆ ಬಂದ ಭಾಗೀರಥಿಯನ್ನು ಮೀಯಲು ಮನಬಾರದ ಹತಭಾಗ್ಯನೆನಿಸಬಾರದು” ಎಂಬ ಭಾವನೆಯಿಂದ ವಟುವನ್ನು ಸ್ವಾಮೀಜಿಯವರ ಸನ್ನಿಧಿಗೆ ಕರೆದುಕೊಂಡು ಹೋಗಿ, ಯತ್ಕಿಂಚಿತ್ “ಸುಧಾಮ ಸೇವೆ”ಯಿಂದ ಶ್ರೀಶ್ರೀಯವರ ಮಂಗಲ ಆಶೀರ್ವಾದ ಪಡೆದುಬರುವ ಇಚ್ಛೆಯಾಯಿತು.

ಈ ಇಚ್ಛೆಗನುಗುಣವಾಗಿ, ನನ್ನ ಇತಿಮಿತಿಗೆ ನಿಲುಕುವ ಅನುಕೂಲತೆಯನ್ನು ಹೊಂದಿಸಿಕೊಂಡು, ನನ್ನ ಮೇಲೆ ವಾತ್ಸಲ್ಯವಿರುವ ಅರ್ಚಕ ಬ್ರಾಹ್ಮಣರನ್ನು ಕೂಡಿಕೊಂಡು ಸ್ವಾಮೀಜಿಯವರಿದ್ದೆಡೆಗೆ ಹೋದೆ. ಶಿಷ್ಯವರ್ಗದವರಿಗೆ ದರ್ಶನವೀಯುವ ನಿಶ್ಚಿತ ಸಮಯಕ್ಕೆ ಹೆಚ್ಚು ವಿಳಂಬವಿಲ್ಲದ ಅವಕಾಶವೆಂದು ಕಂಡಿತು. ನಾನು ನಿಜವಾಗಿ ಭಾಗ್ಯವಂತ ಎಂದು ಆನಂದಭರಿತನಾದೆ.

ಉತ್ಸಾಹದಿಂದ, ಸ್ವಾಮೀಜಿಯವರು ಆಸೀನರಾಗಿರುವ ಮಹಡಿಯ ಮೆಟ್ಟಲುಗಳನ್ನೇರಿ, ಆ ಕೊಠಡಿಯ ದ್ವಾರದ ಬಳಿಗೆ ಬರುತ್ತಲೇ ಕರ್ಕಶದ ಧ್ವನಿಯಾಯಿತು. ಕಣ್ಣೆತ್ತಿ ನೋಡಿದರೆ ಪರಿವಾರದ ಟೊಣಪನೊಬ್ಬನು ತನ್ನ ಕೈ ಅಡ್ಡಹಿಡಿದು “ಏನು, ಸಂತೆಗೆ ನುಗ್ಗಿದಂತೆ ಬರುವಿರಲ್ಲ? ಒಂದಿಷ್ಟು ವಿಚಾರ ಬೇಡವೆ? ಸ್ವಾಮೀಜಿಯವರು ಗಣ್ಯವ್ಯಕ್ತಿಗಳೊಡನೆ ವಿಚಾರವಿನಿಮಯ ಮಾಡುತ್ತಿರುವರು. ದರ್ಶನಕ್ಕೆ ಸ್ವಲ್ಪ ಸಮಯವಿದೆ. ಮೇಲೆ ಕೊಠಡಿಗೆ ಪ್ರವೇಶಿಸಬಿಡಲಾಗುವುದಿಲ್ಲ” ಎಂದು ನಿಷ್ಠುರವಾಗಿ ಗುಡುಗಿತು ಆ ವ್ಯಕ್ತಿ.

ಸ್ವಾಮೀಜಿಯವರು ತೊಡಗಿರುವ ಮಹತ್ವದ ವಿಚಾರವಿನಿಮಯಕ್ಕೆ ಈ ಉಡಾಳ ದ್ವಾರಪಾಲಕನ ಕೂಗಾಟ ಸಹಾಯಕವೇ? ಅನುಕೂಲಕ್ಕಿಂತಲೂ ತ್ರಾಸದಾಯಕವಾಗಿ ತೋರಿತು. ಶಾಂತತೆ ಪಾಲನೆಗಿಂತಲೂ ಈ ಗದ್ದಲದಿಂದ, ಕೆಳಗೆ ದಾರಿಯಲ್ಲಿ ಹೋಗುವವರು “ಏನು ಜಗಳಾಟವಿದು?” ಎಂದು ತಲೆಯೆತ್ತಿ ಮೇಲೆ ನೋಡುತ್ತಾ ಸಾಗುತಿದ್ದರು. ಸ್ಥಾನಬಲದಿಂದ ಎರೆಹುಳು ನಾಗರಹಾವಿನ ಸ್ಥಾನಕ್ಕೆ ತನ್ನನ್ನು ತಾನೇ ತೇರ್ಗಡೆಗೊಳಿಸಿ ಬುಸುಗುಟ್ಟಲು ಮಾಡಿದ ದುರ್ಬಲಯತ್ನದ ಸಾಕ್ಷಿ ಚಿತ್ರವಿದು.

“ತುಸ ತಾಳ್ಮೆಯಿಂದ ನಿಲ್ಲೋಣ; ಬೇಸರಿಸಬೇಡ. ಈ ನಾಟಕದ ಒಂದು ಸೊಗಸು ನೋಡೋಣ. ನಿನಗೆ ಸ್ವಾಮೀಜಿಯವರ ದರುಶನಮಾಡಿಸಿ ಆಶೀರ್ವಾದ, ಫಲಮಂತ್ರಾಕ್ಷತೆ ಸಿಗುವಂತೆ ಮಾಡುವ ಹೊಣೆಗಾರಿಕೆ ನನ್ನದು!” ಎಂದು ನನ್ನೊಡನೆ ಬಂದಿದ್ದ ವೇದಮೂರ್ತಿಗಳು ಸಮಾಧಾನವಚನ ಹೇಳಿದರು. ತಾಳ್ಮೆಗೆಟ್ಟರೆ ಈ ಅರ್ಚಕರು ದೂರ್ವಾಸನ ಅವತಾರವೇ ಎಂದು ನನಗೂ ಗೊತ್ತು.

ಕೇವಲ ಹತ್ತಿಪ್ಪತ್ತು ನಿಮಿಷದೊಳಗೆ ನಾಟಕದ ದೃಶ್ಯ ಬದಲಾವಣೆಯಾಯಿತು. ತಾನು ಸ್ವಾಮೀಜಿಯವರ ನಿಕಟ ಸಂಪರ್ಕವಿರುವ ಶ್ರದ್ಧಾವಂತನೆಂದು ಡಾಂಭಿಕತನದಿಂದ ವರ್ತಿಸುವ ನಮ್ಮೂರ ವ್ಯಕ್ತಿಯ ಪ್ರವೇಶ. ದೇವರು ಮತ್ತು ಸ್ವಾಮೀಜಿಯವರ ಮೇಲೆ ಶ್ರದ್ಧಾಭಕ್ತಿ ಇರುವುದಕ್ಕಿಂತಲೂ ಮಠದ ಪರಿವಾರದ ಒಲವು ಸಂಪಾದನೆಗೆ ಯತ್ನಿಸುವ ಹವ್ಯಾಸ ಈ ಪರಿವಾರದವರಿಗೆ. ಬಂದವರು ಹಣವಂತರೆಂಬ ಕಾರಣದಿಂದಲೇ, ಹೊರಗೆ ಬಂದಾಗ ತಿಂಡಿ ತೀರ್ಥಗಳ ಉಪಚಾರ, ಮಠಕ್ಕೆ ಹೋದಾಗ ಸಂಭಾವನೆಯ ಪುರಸ್ಕಾರ–ಹೀಗಾಗಿ ಇವರನ್ನು ಕಾಣುತ್ತಲೇ ಮಹಾರಾಜರ ಆಗಮನದ ಸಮಯ ಪರಾಕು ಹೇಳುವಂತೆ ಈ ಗಣಗಳು “ರಾಘವಾ! ನೋಡು, ನಮ್ಮ ........ಇವರು ಬಂದರು. ಮೊದಲು ಕಾಫಿ ಕುಡಿಯಲು ಒಳಗೆ ಕರಕೊಂಡು ಹೋಗು!” ಎಂದು ಉಪಚರಿಸುವುದು. ಪ್ರಸಾದ ವಿತರಣೆಗೆ ಸಮಯ, ಬೇಕೆಂದು ಹಿಂದೆ ನಿಂತ ಶ್ರೀಮಂತ ಪ್ರತಿಷ್ಠಿತರನ್ನು ಬೆರಳೆತ್ತಿ ಶ್ರೀಶ್ರೀಗಳವರ ಸನಿಹಕ್ಕೆ ಕರೆದು ಪ್ರಸಾದ ಕೊಡಿಸುವುದು, ಪ್ರವಚನ ನಡೆಯುವಾಗ ಶ್ರದ್ಧೆಯಿಂದ ಕೇಳಲು ಮುಂದಿನ ಸಾಲಿನಲ್ಲಿ ಕುಳಿತ ಬಡಪಾಯಿಗಳನ್ನು ಹಿಂದೆ ತಳ್ಳಿ, ಶ್ರೀಮಂತಿಕೆಯ ಗತ್ತಿನಲ್ಲಿ ಬರುವ ಇವರನ್ನು ಕರತಂದು ಮುಂದಿನ ಸಾಲಿನಲ್ಲಿ ಕುಳ್ಳಿರಿಸುವುದು – ಈ ರೀತಿ ನಾಟಕವಾಡುವುದು ನಿತ್ಯದ ಪದ್ಧತಿ. ಹೀಗಾಗಿ ಭಯ

(೧೦ನೇ ಪುಟಕ್ಕೆ ಮುಂದುವರಿದಿದೆ)

## ಸ್ನಾತಕೋತ್ತರ ಪರೀಕ್ಷೆಯಲ್ಲಿ ದ್ವಿತೀಯ ರ್‍ಯಾಂಕ್



ಕುಮಾರಿ ಶೋಭಾ ಕಾಮತ್

ಕಳೆದ ಏಪ್ರಿಲ್–ಮೇ (1975) ಯಲ್ಲಿ ನಡೆದ ಎಂ. ಎಸ್. ಸಿ. (ಫೈನಲ್) (ಬಾಯೊಸಾಯನ್ಸಸ್) ಪರೀಕ್ಷೆಯಲ್ಲಿ ಮಂಗಳಗಂಗೋತ್ರಿ ವಿದ್ಯಾರ್ಥಿನಿ ಕುಮಾರಿ ಶೋಭಾಕಾಮತ್ ಸಮಗ್ರ ಮೈಸೂರು ವಿಶ್ವವಿದ್ಯಾನಿಲಯದಲ್ಲೇ ದ್ವಿತೀಯ ರ್‍ಯಾಂಕ್ ಪಡೆದು ಉತ್ತೀರ್ಣರಾಗಿರುವರು, ಈಕೆ ಮಂಗಳೂರು ರಥಬೀದಿಯ ಹೊಗೆಸೊಪ್ಪು ವ್ಯಾಪಾರಿ ಶ್ರೀ। ಮುಳ್ಕಿ ಮುಕುಂದ ಕಾಮತರ ಸುಪುತ್ರಿ.

---

(೯ನೇ ಪುಟದಿಂದ)

ಭಕ್ತಿಯಿಂದ ಬರುವ ಬಡಪಾಯಿಗಳಿಗೆ ಅಡೆತಡೆ, ಅಲಕ್ಷ್ಯ, ತಾತ್ಸಾರದ ಅನುಭವವನ್ನು ಮೌನವಾಗಿ ಸಹಿಸುವ ಪಾಡು. ಇಂಥ ಪವಿತ್ರ ಸ್ಥಾನದಲ್ಲಿಯೂ ಇಂತಹ ಕೊಳಚೆಗೆ, ಭೇದಭಾವಕ್ಕೆ ಅವಕಾಶವೇ ಎನ್ನುವ ಪ್ರಶ್ನೆ ಹೃದಯದಲ್ಲಿ ಏಷ್ಟೋ ಮಂದಿಗೆ ಮೂಡುತ್ತಿದೆಯೆ?

ಶ್ರೀಮಂತ ವ್ಯಕ್ತಿಯನ್ನು, ದ್ವಾರಪಾಲಕನಾಗಿ ನಿಂತ ವ್ಯಕ್ತಿ, ಸುಸ್ವಾಗತವಿತ್ತು ಕೈ ಹಿಡಿದು ಒಳಗೆ ಸಾಗಿಸುತ್ತಲೇ, ನಮ್ಮ ಅರ್ಚಕಮಹಾಶಯರ ತಾಳ್ಮೆಯ ಕಟ್ಟು ಒಡೆಯಿತು. "ಏನು! ಇಂತಹ ನಾಟಕದ ವ್ಯಕ್ತಿಗಳಿಗೆ ಸ್ವಾಮಿಜಿಯವರೊಡನೆ ಗಹನ ವಿಚಾರವಿನಿಮಯವಿರುವುದಾದರೆ, ನಾನು ಮಠದಲ್ಲಿ ಕಾಫಿ ಸೇವೆಗೆ ಬಂದವನಲ್ಲ. ಶ್ರೀ ಸ್ವಾಮಿಜಿಯವರಿಗೆ ಅರ್ಚಕ ಬ್ರಾಹ್ಮಣನಾದ ನಾನು ಅಪರಿಚಿತನಲ್ಲ. ಈ ಪವಿತ್ರ ಸ್ಥಳದಲ್ಲಿ ಗಲಭೆ, ಗದ್ದಲ ಸಲ್ಲದು ಎಂಬ ತಾಳ್ಮೆಯಿಂದ ಸುಮ್ಮನಿದ್ದೆ. ಸ್ವಾಮಿಜಿಯವರನ್ನು ಕಾಣಲು ನಿನ್ನಂತಹ ವ್ಯಕ್ತಿಯ ಪರವಾನಿಗೆ ಅಗತ್ಯವಿಲ್ಲ" ಎನ್ನುತ್ತ, ನನ್ನ ಕಡೆಗೆ ತಿರುಗಿ "ಬಾ ಒಳಗೆ!" ಎಂದು ನನ್ನನ್ನೂ ಮಟುವನ್ನೂ ಕೈಹಿಡಿದು ಒಳಗೆ ಪ್ರವೇಶಿಸಿದರು. ದ್ವಾರಪಾಲಕನು ಮರುಕ್ಷಣವೇ ಅದೃಶ್ಯ. ಕೋಣೆಯ ಒಳಗೆ ಹೂನಗೆಯ ಶಾಂತ ಮೂರ್ತಿ ಸ್ವಾಮಿಜಿಯವರು ಪ್ರತ್ಯಕ್ಷರಾದರು.

ಗುಡುಗು ಮಿಂಚಿನ ಬಳಿಕ ತುಂತುರು ಮಳೆಯಿಂದ ವಾತಾವರಣವು ನಿರ್ಮಲವಾಗುವಂತೆ ಶಾಂತತೆ ನೆಲಸಿತು. ಮುಗುಳು ನಗೆಯಿಂದ ಪ್ರೀತಿಯಿಂದ ತೊಂದರೆಯ ಕಾರಣ ವಿಚಾರಿಸಿದರು. ಚಿತ್ತಕ್ಕೆ ತಿಳಿಯಿತು ಎಂಬ ಭರವಸೆಯ ಸೂಚನೆಯು ಮೂಡಿ ತೋರಿತು. ಸುಪ್ರೀತಿಯ ಗೋಷ್ಠಿ ನಡೆಯಿತು. ನೆರೆದವರ ಮನಸ್ಸಿನ ಅಸಹನೆಯ ಬಿಗುಮಾನವು ಮಾಯವಾಯಿತು. ಭಕ್ತಿ ಶ್ರದ್ಧೆಯ ಗೆಲುವು ಮೂಡಿತು. ನಮ್ಮ ಸುಧಾಮ ಸೇವೆ ಸ್ವೀಕರಿಸಿ ಪಟುವಿಗೆ ಸೂಕ್ತ ಹಿತವಚನದ ಆಶೀರ್ವಾದ, ನಮಗೂ ಫಲ ಮಂತ್ರಾಕ್ಷತೆಯೂಾಯಿತು. ಊರಿಗೆ ಮರಳಿ ಬಂದೆವು.

★

ಮತ್ತೂ ನನ್ನ ತಲೆಯಲ್ಲಿ ವಿಚಾರಮಂಥನ ನಡೆಯುತಿತ್ತು. ಅವಿಚಾರದ ವ್ಯಕ್ತಿ ಸಮುದಾಯಕ್ಕೆ ಏಕೆ ಇಲ್ಲಿ ಆಶ್ರಯ ದೊರೆಯುವುದು? ಅನುಕಂಪದ ಆಶ್ರಯದ ಫಲವಾಗಿ ಸ್ವಾಮೀಜಿಯವರಿಗೂ ಮನಸ್ಸಿಗೆ ದಿನ ನಿತ್ಯ ಏಷ್ಟೊಂದು ತ್ರಾಸವಾಗಬಹುದು? ಆದರೂ ಸ್ವಾಮಿಜಿ ಶಾಂತ ಕ್ಷಮಾಶೀಲರಾಗಿರುವರಲ್ಲವೆ! ರಾತ್ರೆ ಇಡೀ ತಲೆಯಲ್ಲಿ ಘರ್ಷಣೆ. ಹೇಗೂ ರಾತ್ರೆ ಕಳೆಯಿತು. ಅರುಣೋದಯವಾಯಿತು.

ನಿತ್ಯದ ಕ್ರಮದಂತೆ ಪ್ರಾತಃಕಾಲದ ತಿರುಗಾಟಕ್ಕೆ ಹೊರಟೆನು, ಮತ್ತೂ ಮನಸ್ಸನ್ನು ಕೆದುಕುತಿದ್ದವು ಹಿಂದಿನ ದಿನದ ದೃಶ್ಯಗಳು. ಎಂದಿನಂತೆ ಪ್ರಕೃತಿಸೌಂದರ್ಯ ತಿಳಿಗಾಳಿಯ ಸೇವನೆಗೆ ಗುಡ್ಡದ ಬಳಿಯ ತಾವರೆಕೊಳದ ತಡಿಯಲ್ಲಿ ಕುಳಿತುಕೊಂಡೆನು.

ಬಾಲರವಿಯ ಎಳೆಬೆಳಕಿನ ಕಿರಣ ಪಸರಿಸಿ ಸೌಂದರ್ಯದ ಸೊಬಗನ್ನು ಹೆಚ್ಚಿಸುತಿತ್ತು. ಕೊಳದ ಕಡೆ ನೋಡುವಾಗ ಎಳೆ ಬಿಸಿಲಿಗೆ ಮೊಗ್ಗು ಬಿರಿದು ಅರಳುವ ಬಿಳಿಯ ಕಮಲದ ಶೋಭೆ ಮನಸ್ಸನ್ನು ಸೆರೆಹಿಡಿಯಿತು. ಅರಳುತ್ತಿರುವ ಕಮಲದ ಮೇಲೊಂದು ಕಪ್ಪು ಮರಿದುಂಬಿ ಝೇಂಕಾರದಿಂದ ಮಕರಂದಕ್ಕಾಗಿ ಸುತ್ತಿಸುಳಿಯುತಿತ್ತು. ಕಮಲವನ್ನು ಕಿತ್ತುಕೊಳ್ಳಲು ಅದಾರೋ ಒಬ್ಬನು ಯತ್ನಿಸುತಿದ್ದನು, ಫಕ್ಕನೆ ಕಮಲವು ಅಲುಗಾಡಿತು. ಬಿದಿಯ ಕೆಸರು ಕದಡಿ ಮೇಲಕ್ಕೇ ಬಂತು. ಬಡಪಾಯಿ ಕಪ್ಪೆಯೊಂದು ಪ್ರಾಣರಕ್ಷಣೆಯ ಭೀತಿಯಿಂದ ದೂರಕ್ಕೆ ನೆಗೆಯಿತು. ಆಹಾರ ತಪ್ಪಿದ ಅಸಹನೆಯಿಂದ ಕಮಲದ ಬುಡದಲ್ಲಿ ಹೆಡೆಎತ್ತಿ ನಾಗರಹಾವು ಬುಸುಗುಟ್ಟುತಿತ್ತು. ಕೀಳಲು ಯತ್ನಿಸುತಿದ್ದ ವ್ಯಕ್ತಿ ಕಂಗಾಲಾಗಿ ಹಿಂದಕ್ಕೆ ಹಾರಿ ಓಡಿತು.

ಅಹುದು; ಕೆಸರಿನಲ್ಲಿದ್ದೂ ಕಮಲಕ್ಕೆ ಕೆಸರಿನ ಸಂಪರ್ಕವಿಲ್ಲ. ದುಷ್ಟಜಂತುಗಳ ಮಧ್ಯದಲ್ಲಿದ್ದರೂ ಅರಳಿನಿಂತು ಸೌಂದರ್ಯ ಅನುಭವಿಸುವವರಿಗೆ ಆನಂದವನ್ನುಂಟುಮಾಡುತ್ತದೆ. ಪ್ರೀತಿಯಿಂದ ಸನಿಹಕ್ಕೆ ಬರುವವರಿಗೆ ಮಕರಂದ ಸುಧೆಯಿಂದ ತಣಿಸುತ್ತದೆ. ತಾವರೆಯ ನೈರ್ಮಲ್ಯಕ್ಕೆ ಕೆಸರು ಬೇಕು. ಶೋಭೆಯ ನಿಜವಾದ ಮೇಲ್ಮೆಗೆ ದುಷ್ಟಜಂತುಗಳ ಭೀತಿ ಬೇಕು. ಗುಲಾಬಿಯ ಸುವಾಸನೆ ಸೌಂದರ್ಯ, ಕೋಮಲತ್ವಕ್ಕೆ ಮುಳ್ಳು ರಕ್ಷೆಯಾಗಿರುವುದು ನಿಸರ್ಗ ನಿಯಮ. ಕೆಲವೊಂದು ಸಂದರ್ಭದಲ್ಲಿ ಅದನ್ನು ಪ್ರೀತಿಯಿಂದ ನೆಟ್ಟು ಬೆಳೆಸಿದ ತೋಟಗಾರನಿಗೂ ಮುಳ್ಳು ಚುಚ್ಚುವುದು. ಸತ್ಯದ ನಿಜರೂಪದ ಮಹತ್ವಕ್ಕೆ ಸುಳ್ಳು ಇರುವಂತೆ, ಬೆಳಕಿನ ಬೆಲೆ ತಿಳಿಯುವರೆ ಕತ್ತಲೆ, ನೈರ್ಮಲ್ಯದ ಅರಿವಾಗುವುದಕ್ಕೆ ಕೆಸರು, ಸುಖದ ಆನಂದಕ್ಕೆ ದುಃಖದ ಕಷ್ಟವು ಇರಲೇಬೇಕು. ಇದೇ ಸೃಷ್ಟಿಯ ಅಥವಾ ನಿಸರ್ಗದ ನಿಜವಾದ ಗುಟ್ಟು ಎಂಬ ತಿಳಿವಿನ ಬೆಳಕು ಮನಸ್ಸಿನಲ್ಲಿ ಮೂಡಿ ಬಂತು.

—೦—

# ವಿವೇಕಾನಂದ ವಾಣಿ

★



### ಎತ್ತಿನ ಕೊಂಬಿನ ಮೇಲೆ ಸೊಳ್ಳೆ

ಜೀವನದಲ್ಲಿ ಯಾವುದನ್ನೂ ಆಶಿಸಲೂ ಬೇಡಿ, ತ್ಯಜಿಸಲೂ ಬೇಡಿ. ಬಂದದ್ದನ್ನು ಸ್ವೀಕರಿಸಿ. ಯಾವುದರ ಪ್ರಭಾವಕ್ಕೂ ಬೀಳದೇ ಇರುವುದೇ ಸ್ವಾತಂತ್ರ್ಯ. ಸುಮ್ಮನೇ ಸಹಿಸುವುದು ಮಾತ್ರವಲ್ಲ, ನಾವು ನಿಸ್ಸಂಗರಾಗಿರಬೇಕು. ನೀವು ಆ ಎತ್ತಿನ ಕಥೆಯನ್ನು ಜ್ಞಾಪಿಸಿಕೊಳ್ಳಿ, ಒಂದು ಸೊಳ್ಳೆ ಬಹಳ ಹೊತ್ತು ಒಂದು ಎತ್ತಿನ ಕೊಂಬಿನ ಮೇಲೆ ಕುಳಿತುಕೊಂಡಿತು. ಆ ಮೇಲೆ ಸೊಳ್ಳೆಗೆ ಪಶ್ಚಾತ್ತಾಪವಾಯಿತು. "ಏನು ಹೋರಿರಾಯರೇ? ನಾನು ತುಂಬಾ ಹೊತ್ತು ನಿಮ್ಮ ಕೊಂಬಿನ ಮೇಲೆ ಕುಳಿತು ಕೊಂಡುಬಿಟ್ಟೆ! ಇದರಿಂದ ನಿಮಗೆ ತೊಂದರೆಯಾಗಿರಬೇಕು. ನಾನು ಇದಕ್ಕಾಗಿ ಕ್ಷಮೆಯನ್ನು ಬೇಡುತ್ತೇನೆ. ನಾನು ಇನ್ನು ಮೇಲೆ ಹೊರಟುಹೋಗುವೆನು" ಎಂದಿತು ಸೊಳ್ಳೆ. ಅದಕ್ಕೆ ಹೋರಿ, "ಓ, ಇದರಿಂದ ನನಗೇನೂ ತೊಂದರೆ ಆಗಲಿಲ್ಲ. ನೀನು ಬೇಕಾದರೆ ನಿನ್ನ ಬಳಗವನ್ನೆಲ್ಲ ಕರೆದು ಕೊಂಡು ಬಂದು ನನ್ನ ಕೊಂಬಿನ ಮೇಲೆ ವಾಸಮಾಡು. ಇದರಿಂದ ನೀನು ನನಗೆ ಏನು ಮಾಡಬಲ್ಲೆ?" ಎಂದಿತು.

●

### ಅಹಂಕಾರ ಭಾವನೆ

ಅಹಂಕಾರ ಭಾವನೆ ಇಲ್ಲದಿರುವಾಗಲೇ, ನಾವು ಅತ್ಯಂತ ಶ್ರೇಷ್ಠ ಕೆಲಸವನ್ನು ಮಾಡುವೆವು, ನಮ್ಮ ಅತ್ಯಂತ ಶ್ರೇಷ್ಠ ಪ್ರಭಾವವನ್ನು ಬೀರುವೆವು. ಎಲ್ಲ ಮಹಾಪುರುಷರಿಗೂ ಇದು ಗೊತ್ತು.

●

### ಪ್ರಪಂಚ ನನಗಾಗಿ! ನಾನು ಪ್ರಪಂಚಕ್ಕೆ ಅಲ್ಲ

ಪ್ರಪಂಚ ನನಗಾಗಿ ಇರುವುದು, ನಾನು ಪ್ರಪಂಚಕ್ಕಾಗಿ ಅಲ್ಲ. ಪಾಪ-ಪುಣ್ಯಗಳೆರಡೂ ನನ್ನ ಸೇವಕರು, ನಾವು ಅವರ ಸೇವಕರಲ್ಲ. ಇದ್ದ ಕಡೆಯೇ ಇರುವುದು ಮೂಢನ ಸ್ಥಿತಿ. ಮನುಷ್ಯನ ಸ್ವಭಾವವೇ ಪುಣ್ಯವನ್ನು ಅರಸಿ ಪಾಪದಿಂದ ಪಾರಾಗುವುದು.

●

### ಆಧ್ಯಾತ್ಮಿಕ ಮಹಾಗುರುಗಳ ಬಳಿಗೆ ಲೌಕಿಕ ವಿದ್ಯೆಯನ್ನು ಕಲಿಯಲು ಹೋಗಬೇಡಿ

ಶ್ರೀ ರಾಮಕೃಷ್ಣ ಪರಮಹಂಸರಲ್ಲಿದ್ದ ಪವಿತ್ರತೆ ಮಗುವಿನಲ್ಲಿರುವಂಥದು. ಅವರು ತಮ್ಮ ಜೀವಮಾನದಲ್ಲೆಲ್ಲ ಹಣವನ್ನು ಮುಟ್ಟಲಿಲ್ಲ. ಕಾಮಭಾವನೆ ಅವರಲ್ಲಿ ಸಂಪೂರ್ಣ ನಿರ್ನಾಮವಾಗಿತ್ತು. ಆಧ್ಯಾತ್ಮಿಕ ಮಹಾಗುರುಗಳ ಬಳಿಗೆ ಲೌಕಿಕ ವಿದ್ಯೆ ಕಲಿಯಲು ಹೋಗಬೇಡಿ. ಅವರು ತಮ್ಮ ಇಡೀ ಬಾಳನ್ನೇ ಆಧ್ಯಾತ್ಮಿಕ ವಿದ್ಯೆಗೆ ಅರ್ಪಣೆ ಮಾಡಿರುವರು. ಶ್ರೀ ರಾಮಕೃಷ್ಣ ಪರಮಹಂಸರಲ್ಲಿ ಮಾನವಭಾವನೆ ಸಂಪೂರ್ಣ ನಾಶವಾಗಿತ್ತು. ಅಲ್ಲಿ ದೇವರೊಬ್ಬನೇ ಇದ್ದನು. ಅವರು ಪಾಪವನ್ನು ಅಕ್ಷರಶಃ ನೋಡಲಾರದವರಾಗಿದ್ದರು. ಅವರ ಪರಿಶುದ್ಧವಾದ ಕಣ್ಣಿಗೆ ವ್ಯತ್ಯಾಸವೇ ಕಾಣುತ್ತಿರಲಿಲ್ಲ. ಇಂತಹ ಕೆಲವು ಪರಮಹಂಸರ ಪವಿತ್ರತೆಯೇ ಪ್ರಪಂಚವನ್ನು ಉದ್ಧಾರ ಮಾಡುತ್ತಿರುವುದು. ಅವರೆಲ್ಲಾ ಸತ್ತುಹೋದರೆ ಈ ಪ್ರಪಂಚ ಸರ್ವನಾಶವಾಗುವುದು. ಅವರು ಸುಮ್ಮನೇ ಇರುವುದರಿಂದಲೇ ಪ್ರಪಂಚಕ್ಕೆ ಒಳ್ಳೆಯದನ್ನು ಮಾಡುವರು; ಅದು ಅವರಿಗೇ ಗೊತ್ತಿರುವುದಿಲ್ಲ. ಅವರು ಸುಮ್ಮನೇ ಇರುವರು.

●

### ಜನನ–ಮರಣ

ಜನನ–ಮರಣಗಳೆರಡೂ ಒಂದೇ ವಸ್ತುವಿಗೆ ಇರುವ ಭಿನ್ನಭಿನ್ನ ಹೆಸರುಗಳು. ಇವೆರಡೂ ಒಂದೇ ನಾಣ್ಯದ ಎರಡು ಪಾರ್ಶ್ವಗಳಂತೆ. ಇವೆರಡೂ ಮಾಯೆ. ಒಂದು ವೇಳೆ ಬದುಕುವುದಕ್ಕೂ ಒಂದು ವೇಳೆ ಸಾಯುವುದಕ್ಕೂ ಹೋರಾಡುತ್ತಿದೆ. ನಾವಿದನ್ನು ವಿವರಿಸಲು ಸಾಧ್ಯವಿಲ್ಲ, ಇವುಗಳಾಚೆಯೇ ಆತ್ಮನ ನೈಜವಾದ ಸ್ವಭಾವ ಇರುವುದು. ನಾವು ಒಬ್ಬ ದೇವರನ್ನು ಒಪ್ಪಿಕೊಂಡರೂ ನಾವು ನಿಜವಾಗಿಯೂ ಬೇರೆಯಾಗಿರುವುದು ನಮ್ಮ ಆತ್ಮನಿಂದ. ನಾವು ಅದನ್ನೇ ನಮ್ಮಿಂದ ಹೊರಗಡೆ ಇದೆ ಎಂದು ಪೂಜಿಸುತ್ತಿರುವುದು. ಆದರೆ, ಸದಾಕಾಲದಲ್ಲಿಯೂ ಅದು ನಮ್ಮ ನಿಜವಾದ ಆತ್ಮನೇ ಆಗಿರುವುದು. ಅವನೊಬ್ಬನೇ ಏಕಮಾತ್ರ ದೇವರು.

●

### ಆತ್ಮಶ್ರದ್ಧೆ

ಎಂದಿಗೂ ಆತ್ಮಶ್ರದ್ಧೆಯನ್ನು ಕಳೆದುಕೊಳ್ಳಬೇಡ. ಈ ಪ್ರಪಂಚದಲ್ಲಿ ನೀನು ಏನನ್ನು ಬೇಕಾದರೂ ಸಾಧಿಸಬಲ್ಲೆ, ಎಂದಿಗೂ ದುರ್ಬಲನಾಗಬೇಡ. ಎಲ್ಲ ಶಕ್ತಿಯೂ ನಿನ್ನಲ್ಲಿರುವುದು.

●

### ಪ್ರೇಮ ಮತ್ತು ದೈನ್ಯದಿಂದಲೇ ಕೊಡಿರಿ

ನೀವೇನಾದರೂ ಒಳ್ಳೆಯದನ್ನು ಮಾಡಿದರೆ ಅದು ನಿಮಗೆ ಮಾತ್ರ. ಯಾರು ಸ್ವೀಕರಿಸುವನೋ ಅವನು ನಿಮಗಿಂತ ಮೇಲಿರುವನೆಂದು ಭಾವಿಸಿ. ನೀವು ಮತ್ತೊಬ್ಬನಿಗಿಂತ ಕೆಳಗೆ ಇರುವುದರಿಂದ ಅವನನ್ನು ಸೇವಿಸುವಿರಿ. ನೀವು ಮೇಲಿರುವುದರಿಂದ ಅವನಿಗೆ ಸಹಾಯಮಾಡುತ್ತಿರುವಿರಿ ಎಂದು ಎಂದಿಗೂ ಭಾವಿಸಬೇಡಿ. ಗುಲಾಬಿ ತನ್ನ ಪರಿಮಳವನ್ನು ನೀಡುವಂತೆ ಕೊಡಿ. ಕೊಡುವುದು ಅದರ ಸ್ವಭಾವ. ತಾನು ಕೊಡುತ್ತಿರುವೆ ಎಂದು ಅದು ಆಲೋಚಿಸುವುದೇ ಇಲ್ಲ.

●

### ಸ್ವಾತಂತ್ರ್ಯ ಮತ್ತು ಪರಮಪ್ರೀತಿ

ಸ್ವಾತಂತ್ರ್ಯ ಮತ್ತು ಪರಮಪ್ರೀತಿ ಎರಡೂ ಒಟ್ಟಿಗೇ ಹೋಗಬೇಕು. ಆಗ ಯಾವುದೂ ಬಂಧನಕಾರಿಯಾಗಲಾರದು. ದೇವರಿಗೆ ನಾವು ಏನನ್ನೂ ಕೊಡಲಾರೆವು. ಅವನೇ ನಮಗೆ ಎಲ್ಲವನ್ನೂ ಕೊಡುವನು. ಅವನೇ ಗುರುಗಳ ಗುರು. ಅವನು ನಮ್ಮ ಆತ್ಮನ ಆತ್ಮ, ಆತ್ಮನೇ ಆಗಿರುವನು. ಅವನನ್ನು ನಾವು ಪ್ರೀತಿಸುವುದರಲ್ಲಿ ಆಶ್ಚರ್ಯವೇನಿದೆ? ಮತ್ತಾರನ್ನು, ಮತ್ತಾವುದನ್ನು ನಾವು ಪ್ರೀತಿಸುವುದು?

●

### ನೀವೆಲ್ಲ ಒಂದು ಮನಸ್ಸಿನವರಾಗಿ

ಭವ್ಯ ಭರತಖಂಡವನ್ನು ನಾವು ಸೃಷ್ಟಿಸಬೇಕಾದರೆ, ಅದರ ರಹಸ್ಯವೆಲ್ಲ ಸಂಸ್ಥೆಯ ಸಂಘಟನೆ, ಶಕ್ತಿಸಂಗ್ರಹ ಮತ್ತು ಇಚ್ಛಾಶಕ್ತಿಯನ್ನು ಏಕತ್ರಮಾಡುವುದರಲ್ಲಿದೆ. ನನ್ನ ಕಣ್ಣಮುಂದೆ ಅಥರ್ವವೇದ ಸಂಹಿತೆಯ ಶ್ಲೋಕ ಒಂದು ಮನಸ್ಸಿಗೆ ಬರುವುದು.

"ಸಂಗಚ್ಛಧ್ವಂ ಸಂವದಧ್ವಂ ಸಂ ವೊ
ಮನಾಂಸಿ ಜಾನತಾಮ್ ।
ದೇವಾಭಾಗಂ ಯಥಾ ಪೂರ್ವೇ....॥

"ನೀವೆಲ್ಲ ಒಂದು ಮನಸ್ಸಿನವರಾಗಿ, ಒಂದು ಭಾವನೆಯವರಾಗಿ. ಪ್ರಾಚೀನಕಾಲದಲ್ಲಿ ಒಮ್ಮತದವರಾದುದರಿಂದ ದೇವತೆಗಳು ಬಲಿಯನ್ನು ಸ್ವೀಕರಿಸಲು ಸಾಧ್ಯವಾಯಿತು. ಮನುಷ್ಯರೂ ಏಕಮತದವರಾದುದರಿಂದಲೇ ದೇವತೆಗಳನ್ನು ಪೂಜಿಸಲು ಸಾಧ್ಯವಾಯಿತು." ಒಮ್ಮತವೇ ಸಮಾಜಶಕ್ತಿಯ ರಹಸ್ಯ. ದ್ರಾವಿಡ, ಆರ್ಯ, ಬ್ರಾಹ್ಮಣ, ಬ್ರಾಹ್ಮಣೇತರ ಎಂಬ ಪ್ರಶ್ನೆಯ ಮೇಲೆ ನೀವು ಹೋರಾಡಿದಷ್ಟೂ ಭವಿಷ್ಯ ಭಾರತ ನಿರ್ಮಾಣಕ್ಕೆ ಮಾಡಬೇಕಾದ ಶಕ್ತಿಸಂಗ್ರಹಕ್ಕೆ ದೂರವಾಗುವೆವು. ಇದನ್ನು ಗಮನದಲ್ಲಿಡಿ. ಭವಿಷ್ಯ ಭಾರತ ಸಂಪೂರ್ಣ ಇದರ ಮೇಲೆ ನಿಂತಿದೆ. ಈ ಇಚ್ಛಾಶಕ್ತಿಯನ್ನು ಸಂಗ್ರಹಿಸುವುದು ಏಕೀಭೂತ ಮಾಡುವುದು, ಶತಮುಖವಾಗಿ ಹರಿಯುತ್ತಿರುವುದನ್ನು ಏಕಮುಖವಾಗಿ ಮಾಡುವುದು—ಇದೇ ರಹಸ್ಯ.

ಬರುವ ಐವತ್ತು ವರ್ಷಗಳ ವರೆಗೆ ಈ ಜನನ, ಮಾತೃಭೂಮಿಯೇ ನಮ್ಮ ಆರಾಧನೆಯ ಇಷ್ಟದೇವವಾಗಬೇಕು. ಇನ್ನುಳಿದ ದೇವತೆಗಳೆಲ್ಲ ನಮ್ಮಿಂದ ಮರೆಯಾಗಲಿ. ಜಾಗ್ರತನಾಗಿರುವ ದೇವರು ಇದೊಂದೇ—ಅದು ನಮ್ಮ ಜನಾಂಗ. ಎಲ್ಲೆಲ್ಲೂ ಅವಳ ಕಿವಿಗಳೇ, ಅವಳೇ ಸರ್ವವ್ಯಾಪಿಯಾಗಿರುವಳು, ಇತರ ದೇವತೆಗಳೆಲ್ಲ ನಿದ್ರಿಸುತ್ತಿರುವರು. ನಮ್ಮ ಸುತ್ತಲೂ ಇರುವ ವಿರಾಟ ಮಹೇಶ್ವರನ ಆರಾಧನೆಯನ್ನು ತೊರೆದು ಕೆಲಸಕ್ಕೆ ಬಾರದ ಇತರ ದೇವರನ್ನು ಏಕೆ ಅರಸಿಕೊಂಡು ಹೋಗುವುದು? ನಾವು ಇದನ್ನು ಆರಾಧಿಸಿದರೆ ಇತರ ದೇವತೆಗಳನ್ನು ಆರಾಧಿಸಿದಂತೆ.

**(ವಿವೇಕಾನಂದರು, 1897ರಲ್ಲಿ ಮದರಾಸಿನಲ್ಲಿ ಮಾಡಿದ ಭಾಷಣದಿಂದ.)**

—೦—

● ವ್ಯಕ್ತಿಯೊಬ್ಬ ರಹಸ್ಯವಾಗಿ ಒಯ್ಯುತ್ತಿರುವ ಅಸ್ತ್ರಗಳನ್ನು ಪತ್ತೆಹಚ್ಚುವ ಲೋಹದ ಡಿಟೆಕ್ಟರ್ ಸಾಧನ ಫ್ರಿಸ್ಕೆಮ್ ('ಫ್ರಿಸ್ಕ್ ಎಮ್'). ಇದರ ತಯಾರಕರು ಡೆಲಾವೇರ್‌ನ ವಿಲ್ಮಿಂಗ್ಟನ್‌ನಲ್ಲಿರುವ ಇನ್‌ಫಿನಿಟಿಕ್ಸ್ ಇನ್‌ಕಾರ್ಪೊರೇಟೆಡ್, ಇದನ್ನು ವಿಮಾನ ನಿಲ್ದಾಣಗಳು, ಬಂದೀಖಾನೆಗಳು, ಮಿಲಿಟರಿ ಪ್ರದೇಶಗಳು, ಕೈಗಾರಿಕಾ ಸ್ಥಾವರಗಳು, ಬ್ಯಾಂಕ್‌ಗಳು, ಉಗ್ರಾಣಗಳು ಮತ್ತು ಸಶಸ್ತ್ರ ಆಗಂತುಕನೊಬ್ಬನಿಂದ ಅಪಾಯದ ಸಂಭವವಿರುವ ಇತರ ಯಾವುದೇ ಕಚೇರಿಗಳು ಮತ್ತು ಸ್ಥಾಪನೆಗಳಲ್ಲಿ ಬಳಸಬಹುದು ಎಂದು ಅಮೆರಿಕದ ತಯಾರಕರು ಹೇಳುತ್ತಾರೆ,

—೦—

## ಹರಕೆ

ಭೋಗಕ್ಕೆ ಮನಸೋತು
ವಿಕಟವಿಟಗಣದಂತೆ
ಆಗಿರುವದೀಗ ನಾಡು
ರೋಗಕ್ಕೆ ಮೈಸೋತು ಕೈಸಾಗದಾಗಿಹುದು
ಯೋಗಸ್ಥನಾಗಿ ಹಾಡು
ಯೋಗಸ್ಥನಾಗಿ ಗಡ ಹಾಡುಗಳ ಹಾಡುತ್ತ
ಕನ್ನಡಿಗರೊಡನೆ ಆಡು
ಯೋಗ–ಭೋಗದ ಭೂಮಿಯಾಗಿ
ಸಾಗುವ ಹಾಗೆ
ಕನ್ನಡದ ನಾಡ ಮಾಡು

—ಬೇಂದ್ರೆ.

—೦—

# ಸೋವಿಯತ್ ಭೂಶಾಸನಗಳು

## ಮತ್ತು

# ಸಾಮೂಹಿಕ ಕೃಷಿಕ್ಷೇತ್ರಗಳು

★



ರಷ್ಯದ ಝಾರ್‌ಷಾಹಿಯನ್ನು ಕೊನೆಗೊಳಿಸಿ, ವರ್ಗರಹಿತ ಸಮಾಜವೇ ಮಾನವ ಕುಲವನ್ನು ಅಭಿವೃದ್ಧಿಗೊಯ್ಯುವುದೆಂದು ಪ್ರತ್ಯಕ್ಷೀಕರಿಸಿದ, ಕಮ್ಯೂನಿಝಂನ ಮಹಾನಾಯಕ ವಿ. ಐ. ಲೆನಿನ್ (ಮೊಸ್ಕೋ, ಅಕ್ಟೋಬರ 1918).

ಸೋವಿಯೆತ್ ಒಕ್ಕೂಟದಲ್ಲಿ ಸಾಮೂಹಿಕ ಕೃಷಿಕ್ಷೇತ್ರಗಳಿಗೆ ಶಾಶ್ವತ ಬಳಕೆಗಾಗಿ ಭೂಮಿಯನ್ನು ಉಚಿತವಾಗಿ ಒದಗಿಸಲಾಗುತ್ತದೆ ಎಂಬುದಾಗಿ ಸೋವಿಯೆತ್ ಒಕ್ಕೂಟದ ಮೂಲ ಭೂಶಾಸನವು ಹೇಳುತ್ತದೆ. ಸಾಮಾನ್ಯ ರಾಜ್ಯ ಅವಶ್ಯಕತೆಗಳಿಗಾಗಿ ತುಂಡುನೆಲವನ್ನು ಅಥವಾ ಭೂವಿಭಾಗವನ್ನು ಬಳಸಿಕೊಳ್ಳಬೇಕಾದುದು ಅನಿವಾರ್ಯವಾದಾಗ ಶಾಸನವು ಆ ಬಗ್ಗೆ ಏನು ಹೇಳುತ್ತದೆ?

ಅನಿವಾರ್ಯ ಪ್ರಸಂಗಗಳಲ್ಲಿ ಮಾತ್ರ ರಾಜ್ಯವು, ಸಾಮೂಹಿಕ ಕೃಷಿಕ್ಷೇತ್ರಗಳು ಬಳಸುವ ಫಲವತ್ತಾದ ಭೂಮಿ, ಉಳುಮೆಯ ಹೊಲಗಳು ಅಥವಾ ಹುಲ್ಲುಗಾವಲುಗಳನ್ನು ಹಿಂದಕ್ಕೆ ತೆಗೆದುಕೊಳ್ಳಬಹುದಾಗಿದೆಯೆಂದು ಶಾಸನವು ಹೇಳುತ್ತದೆ. ಉದಾಹರಣೆಗೆ, ಗ್ರಾಮೀಣ ಪ್ರದೇಶದಲ್ಲಿ ಒಂದು ಹೆದ್ದಾರಿ ಅಥವಾ ರೈಲ್ವೆ ಮಾರ್ಗವನ್ನು ನಿರ್ಮಿಸಬೇಕಾದುದನ್ನೇ ತೆಗೆದುಕೊಳ್ಳಿ. ಇಂಥ ಪ್ರತಿಯೊಂದು ಸಂದರ್ಭದಲ್ಲೂ, ಕೆಲಸದ ಪ್ರಮಾಣಕ್ಕನುಗುಣವಾಗಿ ಸಂಬಂಧಪಟ್ಟ ಗಣರಾಜ್ಯದ ಸಚಿವ ಮಂಡಲಿಯ ಅಥವಾ ಸ್ಥಳೀಯ ಸೋವಿಯೆತ್ತಿನ ವಿಶೇಷ ಅನುಮತಿಯನ್ನು ಪಡೆಯಬೇಕಾದುದು ಅತ್ಯವಶ್ಯಕ. ಸಂಬಂಧಪಟ್ಟ ಸಾಮೂಹಿಕ ಕೃಷಿಕ್ಷೇತ್ರದ ಸದಸ್ಯರುಗಳ ಒಪ್ಪಿಗೆ ಪಡೆಯಬೇಕಾದುದು ಇನ್ನೊಂದು ಅವಶ್ಯಕ ಷರತ್ತು. ಸಾಮೂಹಿಕ ರೈತರ ಒಪ್ಪಿಗೆ ಸಿಗದಿದ್ದಲ್ಲಿ ಅವರ ಜಮೀನಿನಲ್ಲಿ ನಡೆಸುವ ಎಲ್ಲ ಕೆಲಸವನ್ನೂ ಅಕ್ರಮವೆಂದು ಪರಿಗಣಿಸಲಾಗುತ್ತದೆ.

ಒಂದು ಜಮೀನನ್ನು ಹಿಂದಕ್ಕೆ ಕೊಡಲು ಒಪ್ಪಿಗೆ ನೀಡುವ ಮೊದಲು ಸಾಮೂಹಿಕ ಕೃಷಿಕ್ಷೇತ್ರವು ತನ್ನ ಷರತ್ತುಗಳನ್ನು ಸೂಚಿಸುವುದು ಸಹಜವೆ.

ಸಾಮೂಹಿಕ ಕೃಷಿಕ್ಷೇತ್ರವು ಅಭಿವೃದ್ಧಿಪಡಿಸಲು ಯೋಗ್ಯವಾದ ಜಮೀನನ್ನು ಹೊಂದಿರದಿದ್ದರೆ ಸಂಬಂಧಪಟ್ಟ ಗಣರಾಜ್ಯದ ಸಚಿವ ಮಂಡಲಿ ಅಥವಾ ಪ್ರಾದೇಶಿಕ ಸೋವಿಯೆತ್ತು, ಪರಿಹಾರ ರೂಪದಲ್ಲಿ ಅದಕ್ಕೆ ಹೊಸ ಭೂಮಿಯನ್ನು ಒದಗಿಸುತ್ತದೆ. ಎಲ್ಲ ಸಂದರ್ಭಗಳಲ್ಲೂ ರಾಜ್ಯವೇ ಸಾಮೂಹಿಕ ಕೃಷಿಕ್ಷೇತ್ರಗಳಿಗೆ ಹೊಸ ಜಮೀನನ್ನು ಅಭಿವೃದ್ಧಿಪಡಿಸಲು ಹಣವನ್ನು ಒದಗಿಸುತ್ತದೆ.

ಜಮೀನುಗಳನ್ನು ವಶಪಡಿಸಿಕೊಳ್ಳುವ ಸ್ಥಾವರಗಳು ಅಥವಾ ಸಂಘ ಸಂಸ್ಥೆಗಳು ಕೃಷಿಕ್ಷೇತ್ರಗಳಿಗೆ ಉಂಟಾಗುವ ನಷ್ಟಗಳನ್ನು ಭರಿಸಿಕೊಡುತ್ತವೆ. ಬೆಳೆಗಳ ವೆಚ್ಚ, ಕೆಲಸದ ವೆಚ್ಚ (ಬಿತ್ತನೆ, ಫಲವತ್ಕಾರಿಗಳನ್ನು ಹಾಕುವಿಕೆ, ಸಸ್ಯಗಳನ್ನು ನೆಡುವಿಕೆ ಇತ್ಯಾದಿ), ಬೆಳೆಯ ಮೌಲ್ಯ ಎಲ್ಲವನ್ನೂ ಭರಿಸಲಾಗುತ್ತದೆ.

ಮೂಲ ಭೂಶಾಸನಕ್ಕನುಗುಣವಾಗಿ ಒಂದು ಜಮೀನನ್ನು ತಾತ್ಕಾಲಿಕ ಬಳಕೆಗೆ ತೆಗೆದುಕೊಂಡಾಗ ಸ್ಥಾವರಗಳು ಅಥವಾ ಸಂಘ ಸಂಸ್ಥೆಗಳು, ಉಂಟಾಗುವ ನಷ್ಟವನ್ನು ಭರಿಸಿಕೊಡಬೇಕಾಗುತ್ತದೆ. ಅಷ್ಟೇ ಅಲ್ಲ, ಕೆಲಸ ಪೂರ್ಣಗೊಂಡ ಒಂದು ವರ್ಷದ ನಂತರ ಅಂಥ ಜಮೀನನ್ನು ಸ್ವಂತ ವೆಚ್ಚದಿಂದಲೇ ಪುನಃ ಸಾಗುವಳಿಗೆ ತರಬೇಕಾಗುತ್ತದೆ ಕೂಡ. ಉದಾಹರಣೆಗೆ ಒಂದು ಹೊಲದ ಫಲವತ್ತಾದ ಮಣ್ಣಿನ ಪದರನ್ನು ಅಗೆದು ತೆಗೆದು ಅನಿಲಗೊಳವೆ ಮಾರ್ಗವನ್ನು ಹಾಕಲಾಗುತ್ತಿದೆಯೆಂದು ತೆಗೆದುಕೊಳ್ಳೋಣ. ಅನಿಲಗೊಳವೆ ಮಾರ್ಗಹಾಕುವ ಕೆಲಸವು ಪೂರ್ಣಗೊಂಡ ನಂತರ ನಿರ್ಮಾಣಕಾರರು ಅಲ್ಲಿ ಅಗೆದು ರಾಶಿಗೂಡಿಸಿದ ಮಣ್ಣನ್ನು ಪುನಃ ಭರ್ತಿ ಮಾಡಬೇಕಾಗುತ್ತದೆ.

ಈ ಎಲ್ಲ ಕಾರ್ಯವನ್ನೂ ವಿಭಾಗೀಯ ಸೋವಿಯೆತ್ತುಗಳ ಕಾರ್ಯಕಾರಿ ಸಮಿತಿಗಳಿಂದ ರಚಿಸಲ್ಪಟ್ಟ ವಿಶೇಷ ಆಯೋಗಗಳೇ ನಿಯಂತ್ರಿಸುತ್ತವೆ. ಹಲವಾರು ವಿಭಾಗಗಳು ಈ ವ್ಯಾಪ್ತಿಗೊಳಪಟ್ಟಿದ್ದರೆ ಅಂಥ ಸಂದರ್ಭದಲ್ಲಿ ಪ್ರಾದೇಶಿಕ ಅಧಿಕಾರಿಗಳು ಆಯೋಗವೊಂದನ್ನು ರಚಿಸುತ್ತಾರೆ. ಸಂಬಂಧಪಟ್ಟ ಸಾಮೂಹಿಕ ಕೃಷಿಕ್ಷೇತ್ರಗಳ ಪ್ರತಿನಿಧಿಗಳನ್ನು ಇಂಥ ಪ್ರತಿಯೊಂದು ಆಯೋಗದಲ್ಲಿ ಸೇರಿಸಿಕೊಳ್ಳಬೇಕಾಗುತ್ತದೆ.

ವಿಶೇಷ ಆಯೋಗಗಳ ಇಂಥ ನಿಯಂತ್ರಣದ ಫಲದಾಯಕತೆಯನ್ನು ಈ ಕೆಳಗಿನ ಸಂಗತಿಯಿಂದಲೇ ಕಂಡುಕೊಳ್ಳಬಹುದಾಗಿದೆ. ವೋಲ್ಗೊಗ್ರಾಡ್–ಮಾಸ್ಕೋ ಹೆದ್ದಾರಿಯ ನಿರ್ಮಾಣಕಾರ್ಯವನ್ನು ಕೈಕೊಂಡಿದ್ದಾಗ ಸಾಮೂಹಿಕ ರೈತರು ಕೆಲವು ಷರತ್ತುಗಳನ್ನು ಹಾಕಿದ್ದರು: ಅಗೆದು ರಾಶಿಗೂಡಿಸಿದ ಫಲವತ್ತಾದ ಮಣ್ಣನ್ನು ರಸ್ತೆಯ ಅಂಚಿನವರೆಗೂ ಪುನಃ ಸರಿಪಡಿಸಿದ ನಂತರವೇ ಪೂರ್ಣಗೊಂಡ ಹೆದ್ದಾರಿಯ ಪ್ರತಿಯೊಂದು ಭಾಗವನ್ನು ಸಾಗಾಟಕ್ಕೆ ಅಣಿಗೊಳಿಸಬೇಕೆಂಬುದೂ ಅವರು ಹಾಕಿದ ಷರತ್ತುಗಳಲ್ಲಿ ಒಂದು. ಅವರ ಈ ಬೇಡಿಕೆಯನ್ನು ಈಡೇರಿಸಿಕೊಡಲಾಯಿತು.

ಈ ರೀತಿ ರಾಜ್ಯದ ಸಂಸ್ಥೆಗಳು ಸಾರ್ವಜನಿಕ ಅವಶ್ಯಕತೆಗಳಿಗಾಗಿ ವೈಯಕ್ತಿಕ ಭೂವಿಭಾಗಗಳನ್ನು ಹಿಂದಕ್ಕೆ ತೆಗೆದುಕೊಳ್ಳುವ ಹಕ್ಕು ಪಡೆದಿರುವಂತೆಯೇ ಸಾಮೂಹಿಕ ಕೃಷಿಕ್ಷೇತ್ರಗಳು ತಮಗೆ ನೀಡಲಾದ ಜಮೀನಿನ ಮೇಲೆ ಹೊಂದಿರುವ ಹಕ್ಕನ್ನೂ ಕೂಡ ಸೋವಿಯತ್ ಶಾಸನವು ನಿಸ್ಸಂದಿಗ್ಧವಾಗಿ ಭದ್ರಪಡಿಸಿಕೊಟ್ಟಿದೆ. ಸೋವಿಯತ್ ಭೂಶಾಸನವನ್ನು ಉಲ್ಲಂಘಿಸುವ ಪ್ರತಿಯೊಂದು ಪ್ರಕರಣವೂ ವಿಶೇಷ ತನಿಖೆಗೆ ಗುರಿಯಾಗುತ್ತದೆ ಹಾಗೂ ಆ ಬಗ್ಗೆ ಆವಶ್ಯಕ ಕ್ರಮಗಳನ್ನು ಕೈಕೊಳ್ಳಲಾಗುತ್ತದೆ. ಅದಕಾರಣ, ಉಂಟಾಗುವ ನಷ್ಟಗಳನ್ನು ತಕ್ಷಣವೆ ಪರಿಹರಿಸಲಾಗುತ್ತದೆ ಹಾಗೂ ನಿಯಮದಂತೆ ಇಂಥ ಪರಿಹಾರವು ಸಾಮೂಹಿಕ ಕೃಷಿಕ್ಷೇತ್ರಗಳಿಗೆ ಪರವಾಗಿಯೇ ಇರುತ್ತದೆ.

—೦—

● ತುರ್ತು ರಕ್ಷಣಾಕಾರ್ಯಗಳು ಮತ್ತಿತರ ಪ್ರಥಮ ಚಿಕಿತ್ಸೆಗಳಲ್ಲಿ ಕೈ ಅಥವಾ ಕಾಲುಗಳ ಗಾಯಗಳಿಗೆ ಬಳಸಲು ಒಂದು ಹೊಸ ಸ್ಪ್ಲಿಂಟಿಂಗ್ (ಕಟ್ಟು ಹಾಕುವ) ವ್ಯವಸ್ಥೆ ಈಗ ಮಾರುಕಟ್ಟೆಗೆ ಬಂದಿದೆ. ಈ ವ್ಯವಸ್ಥೆಯು ಬಹಳ ಸರಳವಾಗಿದ್ದು ಗಾಯಾಳುವವರು ಇದನ್ನು ಸ್ವತಃ ಬಳಸಬಹುದು. ಎನ್‌ಸೇಸ್ ಎಂದು ಕರೆಯಲಾಗುವ ಈ ಸ್ಪ್ಲಿಂಟಿನ ಒಳಭಾಗದಲ್ಲಿ ಒಂದು ಅಂಟನ್ನು ಲೇಪಿಸಲಾಗಿದ್ದು ಅದು ತ್ವರಿತವಾಗಿ ಕೂಡಿಕೊಳ್ಳಲು ಸಾಧ್ಯವಾಗುವಂತೆ ಗಾಯದ ಪ್ರದೇಶವನ್ನು ಮುಚ್ಚಿ ಭದ್ರತೆ ಒದಗಿಸುವುದು. ಗಾಯಗೊಂಡ ಕೈ ಅಥವಾ ಕಾಲು ಇರುವ ಸ್ಥಿತಿಯಲ್ಲೇ ಇದನ್ನು ಅಂಟಿಸಬಹುದು.

——

# ಸಿಂಡಿಕೇಟ್ ಬೇಂಕಿನ ಸ್ವರ್ಣ ಮಹೋತ್ಸವ ಪುರವಣಿ



"ನ್ಯಗ್ರೋಧ ಬೀಜಂ ಸಿಡಿದು ಪೆರ್ಮರನಾಗದೇ?"—ಎಂದು ಸೋಮೇಶ್ವರ ಶತಕದ ಕವಿ ಬಹುಕಾಲದ ಹಿಂದೆ ಹಾಡಿದ್ದನು. ಸಿಂಡಿಕೇಟ್ ಬೇಂಕಿನ ಇತಿಹಾಸವು ವಿಶಾಲ ವಟವೃಕ್ಷದ ಇತಿಹಾಸ. ಸಾಸಿವೆಯಷ್ಟು ಚಿಕ್ಕ ಬೀಜದಲ್ಲಿ ಅಡಗಿದ್ದ ಮಹಾವೃಕ್ಷವೊಂದು ಮೊಳಕೆಯೊಡೆದು ಚಿಗುರಿ, ಸಸಿಯಾಗಿ ಸುತ್ತಮುತ್ತಲೂ ಶಾಖೆಗಳನ್ನು ಹರಡಿ ತೆಂಪನ್ನಿತ್ತ ಚರಿತ್ರ. ೧೯೨೫ನೇ ನವೆಂಬರ ೧೧ರಂದು ಉಡುಪಿಯ ಚಿಕ್ಕದೊಂದು ಕೊಠಡಿಯಲ್ಲಿ ಅದರ ಹುಟ್ಟು. "ಸಿಬಂಧಿ" ಎಂದರೆ ಒಬ್ಬನೇ; ಇಂದು, ೧೯೭೫ನ ನವೆಂಬರದಲ್ಲಿ ೧೪೦೦೦ರ ಸಿಬಂಧಿ. ೧೯೨೮ರಲ್ಲಿ ಪ್ರಪ್ರಥಮ ಶಾಖೆ—ಬ್ರಹ್ಮಾವರದಲ್ಲಿ; ಇಂದು ಶಾಖಾಸಂಖ್ಯೆ ದೇಶಾದ್ಯಂತ—ಲಕ್ಷದ್ವೀಪಗಳಲ್ಲಿ ಎರಡು ಸಹಿತ—೭೪೨ಕ್ಕೂ ಹೆಚ್ಚು. ಆರಂಭದ ಬಂಡವಾಲ ಕೇವಲ ರೂ. ೮೦೦೦; ಇಂದು ೪೪೨ ಕೋಟಿಗೂ ಹೆಚ್ಚು. ಇಂದು ದೇಶದಲ್ಲಿ ಸಿಂಡಿಕೇಟಿಗೆ ಎಂಟನೆಯ ಸ್ಥಾನ, ಮತ್ತು ಸಾಧನೆ-ಯಶಸ್ಸುಗಳಲ್ಲಿ ಅನೇಕ "ಪ್ರಥಮ"ಗಳು. ೧೯೨೮ರಲ್ಲಿ 'ಪಿಗ್ಮಿ'ಯಿಂದ ಬೆಳೆಯತೊಡಗಿ, ೧೯೭೫ರಲ್ಲಿ ಮಹೋನ್ನತ ಆಕಾರ ತಾಳಿದ ಈ ಸಂಸ್ಥೆಯ ರಮ್ಯಚರಿತ್ರವಿದು. ಇಂದು, ಉಲ್ಲಾಸಕರ ವಾತಾವರಣದಲ್ಲಿ ಸಿಂಡಿಕೇಟ್ ಬೇಂಕ್ ಸ್ವರ್ಣೋತ್ಸವವನ್ನಾಚರಿಸಿದೆ, ಬೇಂಕಿನ ಇತಿಹಾಸದಲ್ಲಿ ಮೂವರು ಚೆಯರ್ಮೇನರೂ ಒಂದೆಡೆ ಸೇರಿ, ರಾಜ್ಯದ ಮೂವರು ಸಚಿವರು, ಕೇಂದ್ರದ ಈರ್ವರು ಸಚಿವರು, ಉತ್ತರಪ್ರದೇಶದ ಓರ್ವ ಸಚಿವರು, ಗೋವೆಯ ಮುಖ್ಯಮಂತ್ರಿಗಳು. ರಿಸರ್ವ್ ಬೇಂಕ್ ಗವರ್ನರರೇ ಮೊದಲಾದವರು ಭಾಗಿಗಳಾಗಿ, ಅಕ್ಟೋಬರ ತಾ. ೧೯ ಮತ್ತು ೨೦ರಲ್ಲಿ ಮಣಿಪಾಲದಲ್ಲಿ ನೆರವೇರಿದ ಈ ಮಹೋತ್ಸವವು ಸತತಯತ್ನ, ದೂರದರ್ಶಿತ್ವದ, ಯೋಗ್ಯ ನಿದರ್ಶನದ ವಿಜಯದ ಮಹೋತ್ಸವ.



ದಿ। ಶ್ರೀ। ಉಪೇಂದ್ರ ಅನಂತ ಪೈ
ಸ್ಥಾಪಕರು:
ಕೆನರಾ ಇಂಡಸ್ಟ್ರಿಯಲ್ ಎಂಡ್
ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್



ಡಾ। ಟಿ. ಎಂ. ಎ. ಪೈ
ಸ್ಥಾಪಕ-ಅಧ್ಯಕ್ಷರು:
ಕೆನರಾ ಇಂಡಸ್ಟ್ರಿಯಲ್ ಎಂಡ್
ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್



ಶ್ರೀ। ಟಿ. ಎ. ಪೈ.
ಹಿಂದಿನ ಚೆಯರ್ಮೇನ್,
ಸಿಂಡಿಕೇಟ್ ಬೇಂಕ್



ಶ್ರೀ। ಕೆ. ಕೆ. ಪೈ.
ಚೆಯರ್ಮೇನ್ ಮತ್ತು
ಮೆನೇಜಿಂಗ್ ಡ್ಯಾರೆಕ್ಟರ್,
ಸಿಂಡಿಕೇಟ್ ಬೇಂಕ್

ಬ್ಯಾಂಕಿಂಗ್ ಸಂಸ್ಥೆಯ ಬೆಳವಣಿಗೆಯ ಇತಿಹಾಸದಲ್ಲಿ ಆ ಸಂಸ್ಥೆಯ ಆರ್ಥಿಕ ಫಲಿತಾಂಶಗಳ ಅಂಕೆ ಸಂಖ್ಯೆಗಳಿಗಿಂತ ಅದರ ಆದರ್ಶ ಹಾಗೂ ಧ್ಯೇಯೋದ್ದೇಶಗಳ ಸಾಧನೆ ಹೆಚ್ಚು ಗಮನಾರ್ಹವಾದುದು. ಮುಖ್ಯತಃ ಬ್ಯಾಂಕಿನ ಕಾರ್ಯಕ್ಷೇತ್ರವು ಆರ್ಥಿಕ ಹಾಗೂ ಹಣಕಾಸಿನ ವಿಚಾರದ್ದಾಗಿದೆ. ಆದರೆ ಬ್ಯಾಂಕು ರಾಷ್ಟ್ರದ ಸಾಮಾಜಿಕ ಆರ್ಥಿಕ ನೆಲೆಯನ್ನು ತನ್ನ ಕಾರ್ಯಕ್ಷೇತ್ರವಾಗಿ ಆಯ್ಕೆಮಾಡಿಕೊಂಡು ಅಲ್ಲಿ ಕ್ರಿಯಾತ್ಮಕ ಪಾತ್ರ ವಹಿಸುವುದಾದಲ್ಲಿ ಅದು ಕೇವಲ ಬ್ಯಾಂಕಿಂಗ್ ಕಾರ್ಯಾಚರಣೆಗೆ ಮೀಸಲಾಗಿರಬೇಕಾದ ಅವಶ್ಯಕತೆಯೇನೂ ಇಲ್ಲ. ಸಿಂಡಿಕೇಟ್ ಬ್ಯಾಂಕ್ ತನ್ನ ಹಲವಾರು ಉತ್ತಮ ಯೋಜನೆಗಳ ಮುಖಾಂತರ ಸಾಮಾಜಿಕ ಬದಲಾವಣೆಗಳಿಗೆ ತನ್ನದೇ ಆದ ವಿಶಿಷ್ಟ ಕೊಡುಗೆಗಳನ್ನು ನೀಡುತ್ತ ಬಂದಿದೆ. ಕೇವಲ ಹಣಕಾಸಿನ ವ್ಯವಹಾರ ಮಾತ್ರವಲ್ಲದೆ ವಾಣಿಜ್ಯ ಬ್ಯಾಂಕುಗಳು ವ್ಯಾಪಕವಾದ ಸಾಮಾಜಿಕ ಮತ್ತು ಆರ್ಥಿಕ ಉದ್ದೇಶಗಳನ್ನು ಹೊಂದಬೇಕು ಎನ್ನುವ ಧೋರಣೆ ಅಂಗೀಕೃತವಾಗುವುದಕ್ಕೆ ಮುಂಚಿತವೇ ಸಿಂಡಿಕೇಟ್ ಬ್ಯಾಂಕ್ ದುರ್ಬಲ ವರ್ಗದವರಿಗೆ ನೆರವು ನೀಡುವ ಉದ್ದಿಶ್ಯದಿಂದ ತನ್ನ ವಿಶೇಷ ಯೋಜನೆಗಳೊಂದಿಗೆ ಕಾರ್ಯೋನ್ಮುಖವಾಗಿವಾಗಿಬಿಟ್ಟಿತ್ತು. ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿತೀರದ ಪುಟ್ಟ ಊರು ಉಡುಪಿ ಇದರ ತಾಯಿನೆಲ. ೫೦ ವರ್ಷಗಳ ಹಿಂದೆ ಜನ್ಮತಾಳಿದ ಸಿಂಡಿಕೇಟ್ ಬ್ಯಾಂಕು ಇಂದು ರಾಷ್ಟ್ರದ ಎಂಟನೇ ಬೃಹತ್ ಬ್ಯಾಂಕು.

## ಹುಟ್ಟು

ಉಡುಪಿ ಮತ್ತು ಅದರ ಪರಿಸರದಲ್ಲಿ ಬಡ ನೇಕಾರರು ಆರ್ಥಿಕ ಮುಗ್ಗಟ್ಟಿನಿಂದ ಸಂಕಷ್ಟಗಳನ್ನು ಅನುಭವಿಸುತ್ತಿದ್ದ ಆ ಕಾಲದಲ್ಲಿ ಉಡುಪಿಯ ಪ್ರತಿಷ್ಠಿತ ವ್ಯಕ್ತಿ ಶ್ರೀ। ಉಪೇಂದ್ರ ಅನಂತ ಪೈ ಅವರು ಆ ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸುವಲ್ಲಿ ಕೈಕೊಂಡ ಪ್ರಯತ್ನಗಳ ಫಲವಾಗಿ ಸಿಂಡಿಕೇಟ್ ಬ್ಯಾಂಕ್ ಜನ್ಮತಾಳಿತು. ಸಣ್ಣ ಮಟ್ಟದಲ್ಲಿ ಆರಂಭವಾದ ಜಾಯಿಂಟ್ ಸ್ಟಾಕ್ ಬ್ಯಾಂಕ್ "ಕೆನರಾ ಇಂಡಸ್ಟ್ರಿಯಲ್ ಅಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್" ಎಂಬ ಹೆಸರಿನಲ್ಲಿ ೨೦ನೇ ಅಕ್ಟೋಬರ, ೧೯೨೫ರಲ್ಲಿ ರಿಜಿಸ್ಟರಾಯಿತು. ಶ್ರೀ। ಉಪೇಂದ್ರ ಅನಂತ ಪೈ, ಶ್ರೀ। ವಿ. ಎಸ್. ಕುಡ್ವ ಮತ್ತು ಡಾ। ಟಿ. ಎಂ. ಎ. ಪೈ ಈ ಮೂವರು ಸ್ಥಾಪಕ ಡೈರೆಕ್ಟರರಾಗಿದ್ದರು. ಸ್ಥಾಪಕ-ಅಧ್ಯಕ್ಷ ಡಾ। ಪೈ ಅವರ ನಾಯಕತ್ವದಲ್ಲಿ ಬ್ಯಾಂಕು ಮುಂದೆ ಪ್ರಗತಿ ಸಾಧಿಸಿತು.

## "ಪಿಗ್ಮಿ'ಯ ಜನನ

೧೯೨೫ ನವಂಬರ್ ತಿಂಗಳ ೧೧ನೇ ದಿನಾಂಕ ಉಡುಪಿಯಲ್ಲಿ ಸಣ್ಣ ಕೋಣೆಯೊಂದರಲ್ಲಿ ಒಬ್ಬ ನೌಕರನೊಂದಿಗೆ ಬ್ಯಾಂಕಿಂಗ್ ವ್ಯವಹಾರಗಳ ಆರಂಭ. ೧೯೨೮— ಬ್ಯಾಂಕಿನ ಇತಿಹಾಸದಲ್ಲಿ ಮುಂದೆ ಅತ್ಯಂತ ಜನಪ್ರಿಯವಾದ ನವ್ಯ ನೂತನ "ಪಿಗ್ಮಿ" ಉಳಿತಾಯ ಯೋಜನೆ ಬೆಳಕುಕಂಡ ವರುಷ. ಈ ಯೋಜನೆಯಿಂದಾಗಿ ಬ್ಯಾಂಕಿನ ಠೇವಣಿಯಲ್ಲಿ ಗಣನೀಯ ಹೆಚ್ಚಳ ಉಂಟಾಯಿತು. ಯೋಜನೆ ಅನುಷ್ಠಾನಕ್ಕೆ ಬರುತ್ತಲೇ ಸಣ್ಣ ವ್ಯಾಪಾರಿಗಳ ಹಾಗೂ ಕಡಿಮೆ ಆದಾಯದ ವರ್ಗದ ಜನತೆಯ ಗಮನವನ್ನು ಸೆಳೆಯಿತು.

ಬ್ಯಾಂಕಿಂಗ್ ಇತಿಹಾಸದಲ್ಲಿ ಸಣ್ಣ ಉಳಿತಾಯ ಯೋಜನೆಯ ಪ್ರಪ್ರಥಮ ಸ್ಥಾನ "ಪಿಗ್ಮಿ"ಗೆ ಸೇರಿತು. ಈ ಯೋಜನೆಯನ್ವಯ ಬ್ಯಾಂಕಿನಿಂದ ನೇಮಿಸಲ್ಪಟ್ಟ ಏಜೆಂಟ್ ಮನೆಯಿಂದ ಮನೆಗೆ ಹೋಗಿ "ಎರಡು ಆಣೆ"ಗಳಷ್ಟು ಉಳಿತಾಯ ಸಣ್ಣ ಮೊತ್ತವನ್ನು ಸಂಗ್ರಹಿಸುತ್ತಿದ್ದ. ಈ ಯೋಜನೆ

ಟೀಕೆಟಿಪ್ಪಣಿಗಳಿಗೆ ಆಸ್ಪದ ನೀಡಿತಲ್ಲದೆ ಅದೊಂದು ಬ್ಯಾಂಕಿಂಗ್ ವ್ಯವಹಾರಕ್ಕೆ ಸಲ್ಲದ್ದೆಂದೂ ಅಪವಾದಕ್ಕೀಡಾಗಿತ್ತು. ಆದರೆ ಇಂದು ದೈನಂದಿನ ಉಳಿತಾಯದ ಈ ಯೋಜನೆಯನ್ನು ಹೆಚ್ಚುಕಡಿಮೆ ಪ್ರತಿಯೊಂದು ಬ್ಯಾಂಕು ತನ್ನ ವ್ಯವಹಾರಗಳಲ್ಲಿ ಅಳವಡಿಸಿಕೊಂಡಿದೆ ಎಂಬುದು ಗಮನಾರ್ಹ. "ಪಿಗ್ಮಿ" ಉಳಿತಾಯ ಯೋಜನೆ ಪ್ರಥಮ ಬಾರಿಗೆ ಸಾಮಾನ್ಯ ಜನರಲ್ಲಿ ಉಳಿತಾಯದ ಪ್ರಜ್ಞೆ ಮೂಡಿಸಿತಲ್ಲದೆ ದೇಶದಲ್ಲಿ ಬ್ಯಾಂಕಿಂಗ್ ಬಗ್ಗೆ ಇದ್ದ ಮೂಲಭೂತ ಭಾವನೆಗಳನ್ನೇ ಬದಲಾಯಿಸಿತು.

"ಪಿಗ್ಮಿ" ಮತ್ತು ಅದೇ ತತ್ವಗಳನ್ನೊಳಗೊಂಡ "ಆದರ್ಶ" ಯೋಜನೆಗಳ ರೂಪದಲ್ಲಿ ಸಣ್ಣ ಉಳಿತಾಯದ ಕ್ರೋಢೀಕರಣಕ್ಕಾಗಿ ಬ್ಯಾಂಕು ೧೯೭೪ರಲ್ಲಿ ಭಾರತೀಯ ವರ್ತಕ ಸಂಘದ (Indian Merchants' Chamber) ಪ್ರಶಸ್ತಿಯನ್ನು ಗಳಿಸಿತು.

## ಪ್ರಥಮ ಶಾಖೆ

೧೯೩೭ರಲ್ಲಿ ಗ್ರಾಮೀಣ ಕೇಂದ್ರವಾದ ಬ್ರಹ್ಮಾವರದಲ್ಲಿ ಬ್ಯಾಂಕು ತನ್ನ ಪ್ರಥಮ ಶಾಖೆಯನ್ನು ತೆರೆಯುವುದರೊಂದಿಗೆ ಅದರ ಪ್ರಗತಿಗೆ ಹೊಸ ತಿರುವು ಕೊಟ್ಟಿತು. ಆ ಬಳಿಕ ಶಾಖೆ ವಿಸ್ತರಣ ಕಾರ್ಯಕ್ರಮ ಭರದಿಂದ ಸಾಗಿತು. ಜಿಲ್ಲೆಯಿಂದ ಹೊರಗೆ ಪ್ರಥಮ ಶಾಖೆಯನ್ನು ೧೯೩೯ರಲ್ಲಿ ನೆರೆಯ ಉತ್ತರ ಕನ್ನಡ ಜಿಲ್ಲೆಯ ಬೆಳೆಯುತ್ತಿರುವ ವ್ಯವಹಾರ ಕೇಂದ್ರವಾದ ಕುಮಟಾದಲ್ಲಿ ತೆರೆಯಲಾಯಿತು. ೧೯೪೬ರಿಂದ ೫೫ರ ತನಕದ ಅಂದರೆ ಬ್ಯಾಂಕಿನ ತೃತೀಯ ದಶಕದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಬ್ಯಾಂಕು ತನ್ನ ಶಾಖೆಗಳನ್ನು ವಿಸ್ತೃತವಾಗಿ ಹರಡುವುದರೊಂದಿಗೆ ಸಾಹಸಪೂರ್ಣ ಸಾಧನೆಗಳನ್ನು ಮಾಡಿತು. ಗ್ರಾಮೀಣ ಹಾಗೂ ನಗರಪ್ರದೇಶಗಳ ನಡುವೆ ಪರಿಣಾಮಕಾರಿಯಾದ ಸಂಪರ್ಕವೇರ್ಪಡಿಸುವ ನಿಟ್ಟಿನಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಶಾಖೆಗಳನ್ನು ತೆರೆಯುವುದು ಅನಿವಾರ್ಯ ಹಾಗೂ ಆವಶ್ಯಕವೆಂದು ಅದು ಮನಗಂಡಿತ್ತಲ್ಲದೆ, ದೇಶದ ಆರ್ಥಿಕತೆಗೆ ಗ್ರಾಮೀಣ ರಂಗವೂ ತನ್ನ ಕೊಡುಗೆಯನ್ನು ನೀಡಲು ಅದೊಂದು ಪ್ರಬಲ ಮಾಧ್ಯಮವಾಗಬಹುದೆಂದು ಯೋಚಿಸಿತ್ತು.

ಸಂಪ್ರದಾಯಶೀಲ ಮನೋವೃತ್ತಿಯ ಆಗಿನ ಬ್ಯಾಂಕಿಂಗ್ ವ್ಯವಹಾರಗಳ ಮೇಲೆ ಇದು ಗಮನಾರ್ಹ ಪರಿಣಾಮಗಳನ್ನು ಮಾಡಿತು. ಗ್ರಾಮೀಣ ಜನತೆಯ ಏಳಿಗೆಗಾಗಿ ಮಾಡಿದ ಈ ಪ್ರಯೋಗವು ಅವರ ಆರ್ಥಿಕ ಬೆಳವಣಿಗೆಗೆ ಅತ್ಯಂತ ಸಹಕಾರಿಯಾಯಿತು. ಈಗಲೂ ಬ್ಯಾಂಕಿನ ಚಟುವಟಿಕೆಗಳಲ್ಲಿ ಗ್ರಾಮೀಣ ಆರ್ಥಿಕತೆಗೆ ನೆರವು ಮುಂದುವರಿಯುತ್ತಿರುವುದು ಉಲ್ಲೇಖನೀಯ. ಈ ವ್ಯವಸ್ಥೆಯೇ ರಾಷ್ಟ್ರೀಕರಣದ ಬಳಿಕವೂ ಗ್ರಾಮೀಣಪ್ರದೇಶಗಳು ಬ್ಯಾಂಕುಗಳಿಗೆ ಮುಖ್ಯ ಕಾರ್ಯಕ್ಷೇತ್ರವಾಗಬೇಕೆನ್ನುವುದು ಅಂಗೀಕೃತ ನೀತಿಯಾಯಿತು. ಆರಂಭದಿಂದಲೂ ಗ್ರಾಮೀಣ ಪ್ರದೇಶಗಳ ಪ್ರಾಮುಖ್ಯತೆಯನ್ನು ಅರಿತುಕೊಂಡ ಸಿಂಡಿಕೇಟ್ ಬ್ಯಾಂಕಿಗೆ ಶಾಖೆಗಳನ್ನು ತೆರೆಯುವುದು ಹೊಸ ಕಾರ್ಯಕ್ರಮವೇನೂ ಆಗಿರಲಿಲ್ಲ. ಬ್ಯಾಂಕಿನ ೭೪೦ ಶಾಖೆಗಳ ಪೈಕಿ ೫೦೦ ಶಾಖೆಗಳು ಗ್ರಾಮೀಣ ಪ್ರದೇಶಗಳಲ್ಲಿರುವುದು ಇದಕ್ಕೊಂದು ಸ್ಪಷ್ಟ ನಿದರ್ಶನ. ಆದ್ದರಿಂದಲೇ, ತನ್ನ ಗ್ರಾಮೀಣ ಶಾಖೆಗಳು ಗ್ರಾಮೀಣ ಆರ್ಥಿಕತೆಯನ್ನು ಪರಿವರ್ತಿಸುವಲ್ಲಿ ಕಾರಣಕರ್ತವಾಗಿವೆ ಎಂಬುದು ಬ್ಯಾಂಕು ಹೆಮ್ಮೆಪಟ್ಟುಕೊಳ್ಳಬಹುದಾದ ವಿಚಾರ. ಬ್ಯಾಂಕಿನ ಪ್ರಧಾನ ಕಚೇರಿಯೂ ಕರ್ನಾಟಕ ರಾಜ್ಯದ ಗ್ರಾಮೀಣ ಪ್ರದೇಶದ ಮಣಿಪಾಲದಲ್ಲಿ ಇರುವುದು ಉಲ್ಲೇಖನೀಯ.

೧೯೪೩ರಲ್ಲಿ ಬ್ಯಾಂಕನ್ನು ಸೇರಿದ ಶ್ರೀ ಟಿ. ಎ. ಪೈ ಅವರು ಮುಂದೆ ಬ್ಯಾಂಕಿನ ಅಧ್ಯಕ್ಷ ಮತ್ತು ಮೆನೇಜಿಂಗ್ ಡೈರೆಕ್ಟರ್ ಆಗಿ ಬ್ಯಾಂಕನ್ನು ಮುನ್ನಡೆಸಿದರು. ಅವರ ನಾಯಕತ್ವದಲ್ಲಿ ಬ್ಯಾಂಕು ಅಪೂರ್ವ ಯಶಸ್ಸನ್ನು ಸಾಧಿಸಿತಲ್ಲದೆ ಅನೇಕ ಕ್ಷೇತ್ರಗಳಲ್ಲಿ ಅಗ್ರಗಣ್ಯ ಎನ್ನಿಸಿಕೊಂಡಿತು.

ಬ್ಯಾಂಕಿನ ಈಗಿನ ಅಧ್ಯಕ್ಷ ಹಾಗೂ ಮೆನೇಜಿಂಗ್ ಡೈರೆಕ್ಟರ್ ಶ್ರೀ ಕೆ. ಕೆ. ಪೈ ಅವರು ಮುಂಬಯಿಯಲ್ಲಿ ಸಬ್-ಮ್ಯಾನೇಜರ್ ಆಗಿ ಸೇರಿದರು. ತನ್ನ ಆಡಳಿತ ಸಾಮರ್ಥ್ಯ ಹಾಗೂ ಕ್ರಿಯಾಶೀಲತೆಯಿಂದ ಅವರು ಶೀಘ್ರದಲ್ಲಿ ಡೆಪ್ಯುಟಿ-ಮ್ಯಾನೇಜರ್ ಹುದ್ದೆಗೆ ಏರಿದರು. ಬಳಿಕದ ಪ್ರತಿಯೊಂದು ಹಂತದಲ್ಲೂ ಅವರು ದಕ್ಷ ಆಡಳಿತಗಾರರಾಗಿ ಬ್ಯಾಂಕನ್ನು ಮುನ್ನಡೆಸುತ್ತಿದ್ದಾರೆ. ಅವರ ಆಡಳಿತದ ಅವಧಿಯಲ್ಲೇ ಬ್ಯಾಂಕಿಗೆ ಮೂರು ರಾಷ್ಟ್ರೀಯ ಪ್ರಶಸ್ತಿಗಳು ಲಭಿಸಿದ್ದು ಬ್ಯಾಂಕು ಇದು "ಜನಸಾಮಾನ್ಯನ ನಿಜವಾದ ಮಿತ್ರ" ಎಂದು ಅನ್ನಿಸಿಕೊಂಡು ಕೀರ್ತಿಯ ಮೇರುವನ್ನು ತಲಪಿರುವುದು ಅವರ ಅರ್ಹ ನಾಯಕತ್ವಕ್ಕೊಂದು ಶ್ರೇಷ್ಠ ನಿದರ್ಶನ.

## ಮಹಿಳೆಯರಿಗೆ ಉದ್ಯೋಗ

ಮಹಿಳೆಯರಿಗೆ ಉದ್ಯೋಗ ಅವಕಾಶವನ್ನು ಕಲ್ಪಿಸಿದ ಪ್ರಥಮ ಬ್ಯಾಂಕುಗಳಲ್ಲಿ ಈ ಬ್ಯಾಂಕು ಒಂದು. ೧೯೪೨ರಿಂದ ಈಚೆಗೆ ಮಹಿಳೆಯರಿಗೆ ಉದ್ಯೋಗ ಅವಕಾಶಗಳನ್ನು ನೀಡಲು ಬ್ಯಾಂಕು ಆರಂಭಿಸಿತು. ಇದು ಕೇವಲ ಮಹಿಳೆಯರ ಸ್ಥಾನವನ್ನು ಉತ್ತಮ ಪಡಿಸುವುದರಲ್ಲಿ ನೆರವಾದದ್ದು ಮಾತ್ರವಲ್ಲದೆ ಅವರು ಹಣಕಾಸಿನ ವ್ಯವಹಾರಗಳಲ್ಲಿ ಸಾಕಷ್ಟು ಅರಿತುಕೊಳ್ಳಲು ಹೊಸ ದಾರಿ ಕಲ್ಪಿಸಿತು. ಮಹಿಳೆಯರಿಂದಲೇ ನಡೆಸಲ್ಪಡುವ ಶಾಖೆಗಳನ್ನು ತೆರೆಯುವುದರೊಂದಿಗೆ ಬ್ಯಾಂಕಿಂಗ್ ಇತಿಹಾಸದಲ್ಲಿ ಸಿಂಡಿಕೇಟ್ ಬ್ಯಾಂಕ್ ಹೊಸ ಅಧ್ಯಾಯವನ್ನು ಆರಂಭಿಸಿತು.

ಬ್ಯಾಂಕಿನ ಇಂಥ ಮಹಿಳಾ ಶಾಖೆಯೊಂದು ಬೆಂಗಳೂರಿನ ಶೇಷಾದ್ರಿಪುರದಲ್ಲಿ ೧೯೬೨ರಲ್ಲಿ ಆರಂಭವಾಯಿತು, ಬ್ಯಾಂಕಿಂಗ್ ಪ್ರಪಂಚದಲ್ಲಿ ಇದು ಆರಂಭದಲ್ಲಿ ಕುತೂಹಲ ಕೆರಳಿಸಿದ್ದರೂ ಬ್ಯಾಂಕಿನ ಕಾರ್ಯಾಚರಣೆಗೆ ಇದು ಮತ್ತಷ್ಟು ಯಶಸ್ಸು ನೀಡಿತು. ಮುಂದೆ ಬ್ಯಾಂಕು ಇಂಥ ೧೧ ಶಾಖೆಗಳನ್ನು ತಿರುವನಂತಪುರ (೧೯೬೨), ಹೈದರಾಬಾದ್ (೧೯೬೩), ಮದರಾಸು (೧೯೬೩). ದೆಹಲಿ (೧೯೬೪), ಮೈಸೂರು (೧೯೬೬), ಕಲ್ಕತ್ತ (೧೯೬೯), ಮಡಿಕೇರಿ (೧೯೬೯), ಮುಂಬಯಿ (೧೯೬೯), ಕೊಯಮುತ್ತೂರು (೧೯೭೦), ಎರ್ನಾಕುಲಂ (೧೯೭೫)ರಲ್ಲಿ ಆರಂಭಿಸಿತು. ಇದಲ್ಲದೆ ನಗರ ಕೇಂದ್ರಗಳಲ್ಲಿನ ಹೆಚ್ಚಿನ ಶಾಖೆಗಳಲ್ಲಿ ಪರಿಣತ ಮಹಿಳೆಯರಿಂದಲೇ ಸೇವಿಂಗ್ಸ್ ಬ್ಯಾಂಕ್ ಕೌಂಟರುಗಳು ನಡೆಸಲ್ಪಡುತ್ತಿವೆ.

ಮಹಿಳಾ ನೌಕರರು ಯಾರಿಗೂ ಕಡಿಮೆ ಇಲ್ಲ ಎಂಬುದನ್ನು ಸಾಧಿಸಿದರಲ್ಲದೆ ಬ್ಯಾಂಕಿನ ಪ್ರಧಾನ ಕಚೇರಿ ಹಾಗೂ ಶಾಖೆಗಳಲ್ಲಿ ಅವರು ಹಿರಿಯ ಹುದ್ದೆಗಳನ್ನು ಪಡೆದಿದ್ದಾರೆ. ಇಂದು ದೇಶಾದ್ಯಂತವಿರುವ ಬ್ಯಾಂಕಿನ ೭೪೦ ಶಾಖೆಗಳಲ್ಲಿ ಸುಮಾರು ೩,೦೦೦ ಮಹಿಳೆಯರು ಬ್ಯಾಂಕಿನ ಉದ್ಯೋಗದಲ್ಲಿದ್ದಾರೆ.

## ಕೃಷಿರಂಗಕ್ಕೆ ನೆರವು

ಕೃಷಿಕರನ್ನು ಬಹಳಷ್ಟು ಅಲಕ್ಷಿಸಿದ ಕಾಲದಲ್ಲಿ ಸಿಂಡಿಕೇಟ್ ಬ್ಯಾಂಕು ಅವರಿಗೆ ನೆರವು ನೀಡಲು ಮುಂದೆ ಬಂದಿತು. ೧೯೬೪ರ ಆದಿಯಲ್ಲಿ ಕೇವಲ ಕೃಷಿ ಉದ್ದೇಶಗಳಿಗಾಗಿಯೇ ಮುಂಗಡಗಳನ್ನು ನೀಡಲು ಮತ್ತು ವೈಜ್ಞಾನಿಕ ಕೃಷಿಯನ್ನು ಪ್ರೋತ್ಸಾಹಿಸಲು ಕೃಷಿ ಆರ್ಥಿಕ ನೆರವಿನ ವಿಭಾಗವನ್ನು ರಚಿಸಲಾಯಿತು. ಕೃಷಿ ಸಾಲ ನೀತಿಯಲ್ಲಿ ಮೂಲಭೂತ ಬದಲಾವಣೆಗಳನ್ನು ಮಾಡಲು ಅದು ನಿರ್ಣಯಿಸಿತು. ಕೃಷಿಕರು ಪ್ರಾಮಾಣಿಕ ಹಾಗೂ ವಿಶ್ವಾಸಾರ್ಹರು ಎಂಬುದೇ ಬ್ಯಾಂಕು ಅವರಿಗೆ ಸಾಲ ನೀಡಲು ಮುಂಬರಲು ಕಾರಣ, ಅಂತೆಯೆ ಅವರಿಗೆ ಆಹಾರಧಾನ್ಯಗಳ ಉತ್ಪಾದನೆ, ಪಂಪ್ ಸೆಟ್ ಖರೀದಿ ಮತ್ತು ಸಣ್ಣ ಭೂ ಅಭಿವೃದ್ಧಿಗಾಗಿ ಅಲ್ಪಾವಧಿ ಹಾಗೂ ಮಧ್ಯಾವಧಿ ಸಾಲಗಳನ್ನು ನೀಡಲಾಯಿತು. ಕೃಷಿ ಆರ್ಥಿಕ ಪೂರೈಕೆಯಲ್ಲಿ ಬ್ಯಾಂಕು ಕೃಷಿಕನ ಮಿತ್ರ ಹಾಗೂ ಮಾರ್ಗದರ್ಶಕವಾಯಿತು. ಕೃಷಿಯ ಕುರಿತು ವಿಶೇಷ ಮಾಹಿತಿ ಪಡೆದ ಕೃಷಿ ಪದವೀಧರರ ಮುಖಾಂತರ ಕೃಷಿಯ ಬಗ್ಗೆ ಜನರಿಗೆ ಸಲಹೆ ಮತ್ತು ತಾಂತ್ರಿಕ ನೆರವನ್ನು ಅದು ನೀಡಲಾರಂಭಿಸಿತು. ಕೃಷಿ ಕ್ಷೇತ್ರದಲ್ಲಿ ಬ್ಯಾಂಕು ಜನಪ್ರಿಯವಾಗುವುದರೊಂದಿಗೆ ಆ ಕ್ಷೇತ್ರದಲ್ಲಿ ಅಗ್ರಸ್ಥಾನ ಮತ್ತು ನಾಯಕತ್ವವನ್ನು ಪಡೆಯಿತು. ಕೃಷಿಚಿಕಿತ್ಸಾಲಯ, ಕೃಷಿ ವಿಚಾರವಿನಿಮಯ ಕೇಂದ್ರ, ಭಾವೀ ಕೃಷಿಕರ ಕೇಂದ್ರ ಮುಂತಾದ ಕೃಷಿ ವಿಸ್ತರಣಾಘಟಕಗಳನ್ನು ಸ್ಥಾಪಿಸುವುದರಲ್ಲಿ ಬ್ಯಾಂಕಿನ ಆಶ್ರಯದ ಸಿಂಡಿಕೇಟ್ ಕೃಷಿ ಪ್ರತಿಷ್ಠಾನವು ಪ್ರಥಮದ್ದಾಗಿದೆ. ಕೃಷಿಕರ ಜೀವನಮಟ್ಟದ ಸುಧಾರಣೆಗೆ ಮತ್ತು ಅವರ ಪ್ರಗತಿಗೆ ಬ್ಯಾಂಕಿನ ಕೊಡುಗೆ ಅಪಾರ.

ಇಂದು ಕೃಷಿ ಸಾಲ ಖಾತೆಗಳ ಅಂಕೆ ಸಂಖ್ಯೆಗಳಲ್ಲಿ ಎಲ್ಲ ರಾಷ್ಟ್ರೀಕೃತ ಬ್ಯಾಂಕುಗಳ ಪೈಕಿ ಸಿಂಡಿಕೇಟ್ ಬ್ಯಾಂಕಿಗೆ ಪ್ರಥಮ ಸ್ಥಾನ ಸಲ್ಲುತ್ತದೆ. ಕೃಷಿಕ್ಷೇತ್ರದಲ್ಲಿ ಅದ್ವಿತೀಯ ಸೇವೆ ಸಲ್ಲಿಸಿದುದಕ್ಕಾಗಿ ಬ್ಯಾಂಕಿಗೆ ಭಾರತೀಯ ವಾಣಿಜ್ಯ, ಕೈಗಾರಿಕಾ ಚೇಂಬರುಗಳ ಒಕ್ಕೂಟದ (Federation of Indian Chambers of Commerce) ೧೯೭೪ರ ಸಾಲಿನ ಪ್ರಶಸ್ತಿ ದೊರೆತಿದೆ.

## ರಾಷ್ಟ್ರೀಕರಣ

ಭಾರತದ ಬ್ಯಾಂಕಿಂಗ್ ಇತಿಹಾಸದಲ್ಲಿ ಚರಿತ್ರಾರ್ಹ ದಿನವಾದ ಜುಲೈ ೧೯, ೧೯೬೯ರಂದು ಭಾರತ ಸರಕಾರ ದೇಶದ ೧೪ ದೊಡ್ಡ ಬ್ಯಾಂಕುಗಳನ್ನು ರಾಷ್ಟ್ರೀಕರಿಸಿತು. ಇವುಗಳಲ್ಲಿ ಸಿಂಡಿಕೇಟ್ ಬ್ಯಾಂಕು ಒಂದು. ರಾಷ್ಟ್ರೀಕರಣದ ಮುಂಚೆಯೇ ಬ್ಯಾಂಕು ರಾಷ್ಟ್ರೀಕರಣದ ಧ್ಯೇಯೋದ್ದೇಶಗಳನ್ನು ತನ್ನ ವ್ಯವಹಾರ ನಿಯಮವಾಗಿ ಪಾಲಿಸುತ್ತ ಬಂದದ್ದರಿಂದ ಹೆಚ್ಚಿನ ಉತ್ಸಾಹದಿಂದ ಮುಂದಿನ ಪ್ರಗತಿ ಸಾಧಿಸುವುದು ಸಾಧ್ಯವಾಯಿತು.

ರಾಷ್ಟ್ರೀಕರಣದ ನಂತರದ ಅವಧಿಯಲ್ಲಿ ಬ್ಯಾಂಕು ಸಾಧಿಸಿದ ಪ್ರಗತಿ ಗಣನೀಯ. ಠೇವಣಿಗಳ ಸಂಗ್ರಹ, ಸಾಲವಿತರಣೆ, ಶಾಖಾವಿಸ್ತರಣೆ ಇವುಗಳಲ್ಲಿ ಬ್ಯಾಂಕು ಸರ್ವತೋಮುಖ ಪ್ರಗತಿಯನ್ನು ಸಾಧಿಸಲು ಸಾಧ್ಯವಾಯಿತು.

ಬ್ಯಾಂಕಿನ ಶಾಖೆಗಳ ಸಂಖ್ಯೆಯು ಬ್ಯಾಂಕ್ ರಾಷ್ಟ್ರೀಕರಣವಾದಂದಿದ್ದ ೩೦೬ರಿಂದ ಇಂದಿಗೆ ೭೪೦ಕ್ಕೆ ಮಿಕ್ಕಿದೆ. ಈ ಶಾಖೆಗಳ ಜಾಲವನ್ನು ಎರಡುಪಟ್ಟು ಗೊಳಿಸುವಲ್ಲಿ ಬ್ಯಾಂಕು ತನ್ನ ಚಟುವಟಿಕೆಗಳನ್ನು ಒರಿಸ್ಸಾ, ಮಧ್ಯಪ್ರದೇಶ, ರಾಜಸ್ತಾನ, ಹರ್‍ಯಾನ ಮತ್ತು ಉತ್ತರ ಪ್ರದೇಶಗಳನ್ನು ಸೇರಿದಂತೆ ಹೊಸ ರಾಜ್ಯಗಳಿಗೆ ವಿಸ್ತರಿಸಿತು. ಬ್ಯಾಂಕಿಂಗ್ ಸಂದೇಶವನ್ನು ಬ್ಯಾಂಕು ಅರಬ್ಬೀ ಸಮುದ್ರ ಮತ್ತು ಬಂಗಾಳಕೊಲ್ಲಿಯ ಬಹುದೂರದ ದ್ವೀಪಗಳಿಗೂ ಕೊಂಡೊಯ್ದಿತು. ರಾಷ್ಟ್ರೀಕರಣದ ವೇಳೆಯಲ್ಲಿದ್ದ ಬ್ಯಾಂಕಿನ ಠೇವಣಿಯ ಮೊತ್ತವು ೧೨೭ ಕೋಟಿ ರೂ.ಗಳಿಂದ ಇಂದು ೪೫೦ ಕೋಟಿ ರೂ.ಗಳಿಗೂ ಮಿಕ್ಕಿದೆ. ರಾಷ್ಟ್ರೀಕರಣದ ವೇಳೆಯಲ್ಲಿ ನೀಡಲಾಗಿದ್ದ ಬ್ಯಾಂಕಿನ ಮುಂಗಡಗಳ ಮೊತ್ತವೂ ಸಹ ೯೧ ಕೋಟಿ ರೂ.ಗಳಿಂದ ಈಗ ೩೩೦ ಕೋಟಿ ರೂ.ಗಳಿಗೂ ಮಿಕ್ಕಿದೆ.

ಜನಸಾಮಾನ್ಯನ ಸೇವೆಯು, ಸಿಂಡಿಕೇಟ್ ಬ್ಯಾಂಕಿನ ಮೂಲಭೂತ ಆದರ್ಶವಾಗಿದೆ. ಜನಸಾಮಾನ್ಯರಿಗೆ ಸಣ್ಣ ಸಾಲಗಳನ್ನು ನೀಡುವ ನೀತಿ ಬ್ಯಾಂಕಿನ ಹುಟ್ಟಿನಿಂದ ಅನೂಚಾನವಾಗಿ ನಡೆದುಬಂದಿದೆ. ಸುಮಾರು ೬.೫ ಲಕ್ಷ ಗ್ರಾಹಕರಲ್ಲಿ ಸಣ್ಣ ಪ್ರಮಾಣದ ಸಾಲಗಾರರು ಸಣ್ಣ ವ್ಯಾಪಾರಿಗಳು ಗ್ರಾಮೀಣ ಮತ್ತು ಪಟ್ಟಣದ ಉಪನಗರಗಳಲ್ಲಿನ ಕೆಳಗಿನ ಆದಾಯದ ವರ್ಗದವರಾಗಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಚಿನ್ನಾಭರಣಗಳ ಭದ್ರತೆಯಲ್ಲಿ ಕೇವಲ ರೂ. ೨೫/-ರಷ್ಟು ಸಾಲ ನೀಡುವುದನ್ನು ಇಂದಿಗೂ ಬ್ಯಾಂಕು ಮುಂದುವರಿಸುತ್ತಿದೆ. ಒಟ್ಟು ಸಾಲ ಪಡೆದವರಲ್ಲಿ ಶೇಕಡಾ ೬೮ಕ್ಕೂ ಮಿಕ್ಕಿ, ರೂ. ೧೦೦೦/-ಕ್ಕೂ ಕಡಿಮೆ ಹಣ ಪಡೆದವರಾಗಿದ್ದಾರೆ, ಶೇಕಡಾ ೨೭ರಷ್ಟು ಜನ ರೂ.೧೦೦೦/-ದಿಂದ ರೂ.೧೦,೦೦೦/- ವರೆಗೆ ಸಾಲ ಪಡೆದವರಾಗಿರುತ್ತಾರೆ. ಶೇಕಡಾ ಒಂದಕ್ಕೂ ಕಡಿಮೆ ಮಂದಿ ಒಂದು ಲಕ್ಷಕ್ಕೆ ಮಿಕ್ಕಿದ ಸಾಲ ಪಡೆದಿದ್ದಾರೆ. ಬ್ಯಾಂಕಿನ ಸಾಲ ನೀತಿ, ಈ ರೀತಿ ವಿಶಾಲ ತಳಹದಿಯ ಮೇಲೆ ಬಹು ಅಂಶ ಜನಸಾಮಾನ್ಯನಿಗೆ ವಿಳಾಸಲಾಗಿದೆ,

## ಆದ್ಯತಾರಂಗಗಳು

ಅತ್ಯಂತ ಪ್ರಾಧಾನ್ಯತೆಯುಳ್ಳ ಕೆಲವೊಂದು ರಂಗಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಸಾಲದ ನೆರವು ನಿರಂತರವಾಗಿ ಹರಿಯಗೊಡುವಲ್ಲಿ ಬ್ಯಾಂಕುಗಳು ಮಹತ್ವದ ಪಾತ್ರವನ್ನು ವಹಿಸಬೇಕೆಂದು ೬೦ರ ದಶಕಾಂತ್ಯದಲ್ಲಿ ಆರ್ಥಿಕತಜ್ಞರು ತೀರ್ಮಾನಿಸಿ, ಬ್ಯಾಂಕುಗಳು ಈ ದಿಸೆಯಲ್ಲಿ ಹೆಚ್ಚು ಕಾಳಜಿಯಿಂದ ಸಾಲ ನೀಡಬೇಕೆಂದು ನಿರ್ದೇಶನ ನೀಡಲಾಯಿತು. ಸಿಂಡಿಕೇಟ್ ಬ್ಯಾಂಕಿನ ಸಾಲವಿತರಣೆಯಲ್ಲಿ ಈ ರಂಗಗಳು ಪ್ರಾರಂಭದಿಂದಲೂ ಆದ್ಯತೆ ಪಡೆದಿದ್ದುದರಿಂದ ಅವುಗಳಿಗೆ ನೀಡುವ ಮುಂಗಡಗಳ ಪ್ರಮಾ

ಣವನ್ನು ಇನ್ನೂ ಹೆಚ್ಚುಗೊಳಿಸಲು ಅನುವು ಮಾಡಿಕೊಟ್ಟಂತಾಯಿತು. ಆದ್ಯತಾರಂಗಗಳಿಗೆ ನೀಡಲಾಗುವ ಮುಂಗಡಗಳಲ್ಲಿ ಅತಿ ಹೆಚ್ಚು ಶೇಕಡವನ್ನು ಸಿಂಡಿಕೇಟ್ ಬ್ಯಾಂಕು ಹೊಂದಿರುವುದು ಹೆಮ್ಮೆಯ ವಿಚಾರವಾಗಿದೆ. ಬ್ಯಾಂಕಿನ ಒಟ್ಟು ಮುಂಗಡಗಳಲ್ಲಿನ (ರಫ್ತುಸಹಿತ) ಸುಮಾರು ಶೇಕಡಾ ೪೮ ರಷ್ಟು ಮುಂಗಡಗಳನ್ನು ಆದ್ಯತಾರಂಗಗಳಿಗೆ ನೀಡಲಾಗಿದೆ. ಕೃಷಿರಂಗಕ್ಕೆ ಸಾಲ ಸೌಲಭ್ಯವನ್ನು ಒದಗಿಸುವಲ್ಲಿ ಬ್ಯಾಂಕು ಸರ್ವಪ್ರಥಮವಾಗಿದ್ದು, ಕೃಷಿ ಮುಂಗಡವು ಬ್ಯಾಂಕಿನ ಒಟ್ಟು ಮುಂಗಡಗಳಲ್ಲಿ ಶೇಕಡಾ ೧೦ರಷ್ಟು ಆಗುತ್ತದೆ. ಸಣ್ಣ ಕೈಗಾರಿಕೆಗಳಿಗೆ ನೀಡಲಾದ ಮುಂಗಡಗಳು ಒಟ್ಟು ಮುಂಗಡಗಳಲ್ಲಿ ಸುಮಾರಾಗಿ ಶೇಕಡಾ ೧೪ರಷ್ಟಾಗುತ್ತವೆ. ಇನ್ನಿತರ ಆದ್ಯತಾರಂಗಗಳಲ್ಲಿ ಸಣ್ಣ ವ್ಯವಹಾರ ಮತ್ತು ಚಿಲ್ಲರೆ ವ್ಯಾಪಾರಿಗಳು ಬ್ಯಾಂಕಿನ ಆರ್ಥಿಕ ನೆರವಿನಲ್ಲಿ ಪ್ರಮುಖ ಸ್ಥಾನ ಪಡೆಯುತ್ತಾರೆ. ಬ್ಯಾಂಕು ಆದ್ಯತಾರಂಗಗಳಲ್ಲಿ (ರಫ್ತುಸಹಿತ) ೩.೨ ಲಕ್ಷ ಸಾಲದ ಖಾತೆಗಳ ಮುಖಾಂತರ ೧೪೫.೫ ಕೋಟಿ ರೂ.ಗಳಷ್ಟು ಮುಂಗಡವನ್ನು ನೀಡಿದೆ.

ಬ್ಯಾಂಕು ದೇಶದಲ್ಲಿ ಸ್ವೋದ್ಯೋಗಿಗಳ ಅಭಿವೃದ್ಧಿಗೆ ಸಲ್ಲಿಸಿದ ಶ್ರೇಷ್ಠ ಸೇವೆಗಾಗಿ ೧೯೭೫ರಲ್ಲಿ ಯುವ ಉದ್ಯಮಿಗಳ ರಾಷ್ಟ್ರೀಯ ಕೂಟ (National Alliance of Young Entrepreneurs) "ಲಘು ಉದ್ಯೋಗ ಸಹಕಾರಿ ಪ್ರಶಸ್ತಿ"ಯನ್ನು ಗಳಿಸಿದೆ. ಬ್ಯಾಂಕು ತನ್ನ ಅಸಾಧಾರಣ ಸೇವೆಗಾಗಿ ಗಳಿಸಿದ ಮೂರನೇ ರಾಷ್ಟ್ರೀಯ ಪ್ರಶಸ್ತಿ ಇದಾಗಿದೆ.

### ಡಿಫರೆನ್ಸಿಯಲ್ ರೇಟ್ಸ್ ಆಫ್ ಇಂಟರೆಸ್ಟ್ ಯೋಜನೆ

ಡಿಫರೆನ್ಸಿಯಲ್ ರೇಟ್ಸ್ ಆಫ್ ಇಂಟರೆಸ್ಟ್ ಯೋಜನೆಯನ್ವಯ ಬ್ಯಾಂಕು ಮಾಡಿರುವ ಪ್ರಗತಿಯೂ ಗಮನಾರ್ಹವಾದುದು. ಸುಲಭ ಬಡ್ಡಿ ದರದಲ್ಲಿ ಸಮಾಜದ ದುರ್ಬಲ ಜನತೆಗೆ ಸಾಲ ದೊರೆಯುವಂತಾಗಬೇಕೆಂಬ ಏಕೈಕ ಉದ್ದೇಶದೊಡನೆ ಈ ಯೋಜನೆಯನ್ನು ಜಾರಿಗೊಳಿಸಲಾಯಿತು. ಜನಸಾಮಾನ್ಯರ ಆವಶ್ಯಕತೆಯನ್ನು ಪೂರೈಸುವಲ್ಲಿ ಸಿಂಡಿಕೇಟ್ ಬ್ಯಾಂಕು ತಾನು ಹೊಂದಿದ ಅನುಭವದ ಬಲದಿಂದ ಈ ಯೋಜನೆಯ ಪ್ರಯೋಜನವನ್ನು ಸಮಾಜದ ದುರ್ಬಲವರ್ಗದ ಬಹುಸಂಖ್ಯೆಯ ಜನರಿಗೆ ಮುಟ್ಟಿಸಿತು. ಈ ಯೋಜನೆಯನ್ವಯ ಎಲ್ಲ ರಾಷ್ಟ್ರೀಕೃತ ಬ್ಯಾಂಕುಗಳು ನೀಡಿದ ಮುಂಗಡದಲ್ಲಿ ಅತಿ ಹೆಚ್ಚು ಪ್ರಮಾಣದ ಮುಂಗಡವನ್ನು ನೀಡಿದ ದಾಖಲೆ ಸಿಂಡಿಕೇಟ್ ಬ್ಯಾಂಕಿನದು. ಈ ಯೋಜನೆಯಲ್ಲಿ ೩೦,೦೦೦ ಖಾತೆಗಳಿದ್ದು ಬ್ಯಾಂಕು ೧೨೪ ಲಕ್ಷ ರೂ.ಗಳ ಮುಂಗಡವನ್ನು ನೀಡಿದೆ.

### 'ಪ್ರಥಮ' ಬ್ಯಾಂಕ್

ಗ್ರಾಮೀಣ ಆರ್ಥಿಕತೆಯ ಅಭಿವೃದ್ಧಿಯಲ್ಲಿ ತನ್ನ ಸಕ್ರಿಯಪಾತ್ರ ವಹಿಸುವುದರೊಂದಿಗೆ "ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಸುಗ್ರೀವಾಜ್ಞೆ ೧೯೭೫"ರನ್ವಯ ಗ್ರಾಮೀಣ ಬ್ಯಾಂಕನ್ನು ಸ್ಥಾಪಿಸಿ ಈ ಕಾರ್ಯ ಕೈಕೊಂಡ ಪ್ರಥಮ ಐದು ಬ್ಯಾಂಕುಗಳಲ್ಲಿ ಸಿಂಡಿಕೇಟ್ ಒಂದೆನಿಸಿದೆ. ಗ್ರಾಮೀಣ ಆರ್ಥಿಕತೆಯ ಬೆಳವಣಿಗೆಯನ್ನು ಹೆಚ್ಚಿಸುವಲ್ಲಿ ಕೇಂದ್ರ ರಾಜ್ಯ ಸರಕಾರಗಳ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಾಶ್ರಯದ ಪ್ರತ್ಯೇಕ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಬೆಳವಣಿಗೆಯನ್ನು ಪೋಷಿಸಲು ಭಾರತ ಸರಕಾರ ನಿರ್ಧರಿಸಿತು. ಈ ದಿಸೆಯಲ್ಲಿನ ಪ್ರಥಮ ಹೆಜ್ಜೆಯಾಗಿ ಸಾರ್ವಜನಿಕ ರಂಗದಲ್ಲಿನ ಐದು ಬ್ಯಾಂಕುಗಳು ಭಾರತದಲ್ಲಿ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳನ್ನು ಆರಂಭಿಸಿದುವು. ಸಿಂಡಿಕೇಟ್ ಬ್ಯಾಂಕಿನಾಶ್ರಯದ ಗ್ರಾಮೀಣ ಬ್ಯಾಂಕಾದ "ಪ್ರಥಮ ಬ್ಯಾಂಕ್" ನವೇಗಾವ್‌ನ ಸಾದತ್‌ನಲ್ಲಿ ಮತ್ತು ರಜಬ್‌ಪುರದಲ್ಲಿ ಶಾಖೆಗಳನ್ನು ತೆರೆಯಲಾಯಿತು. ಜಿಲ್ಲೆಯ ಇವೆರಡು ಕೇಂದ್ರಗಳಲ್ಲಿ ಈ ತನಕ ಬ್ಯಾಂಕ್ ಸೌಕರ್ಯವಿರಲಿಲ್ಲ. ಸಿಂಡಿಕೇಟ್ ಬ್ಯಾಂಕಿನ ದಕ್ಷ ಮಾರ್ಗದರ್ಶನದ ಹಿನ್ನೆಲೆಯಲ್ಲಿ ಮತ್ತು ಬೆಂಬಲದೊಡನೆ ನೂತನ ಗ್ರಾಮೀಣ ಬ್ಯಾಂಕಿಗೆ ಆ ಜಿಲ್ಲೆಯ ಕೃಷಿ ಆರ್ಥಿಕತೆಯ ಬೆಳವಣಿಗೆಯಲ್ಲಿ ಮತ್ತು ವಿಶೇಷತಃ ಕಾರ್ಮಿಕರು ಹಾಗೂ ಸಮಾಜದ ಇತರ ದುರ್ಬಲವರ್ಗದವರ ಕಲ್ಯಾಣದಲ್ಲಿ ಹೆಚ್ಚಿನ ಸಾಧನೆಮಾಡುವುದು ಸಾಧ್ಯವಾದೀತೆಂದು ಆಶಿಸಲಾಗಿದೆ.

### ಉಪಸಂಹಾರ

ಕಳೆದ ಅರ್ಧ ಶತಕದಲ್ಲಿ ಸಿಂಡಿಕೇಟ್ ಬ್ಯಾಂಕಿನ ಬೆಳವಣಿಗೆಯು ಎಲ್ಲ ವಿಷಯಗಳಲ್ಲೂ ಅಸಾಮಾನ್ಯವಾಗಿದೆ. ಗ್ರಾಮೀಣ ಸಮಾಜದ ಬಹುದೊಡ್ಡ ವರ್ಗಕ್ಕೆ ಬ್ಯಾಂಕಿನ ನೆರವು ನೀಡುವ ಮತ್ತು ಉಳಿತಾಯದ ಹವ್ಯಾಸವನ್ನು ಉತ್ತೇಜಿಸುವಲ್ಲಿ ಸಿಂಡಿಕೇಟು ಬ್ಯಾಂಕು ಗಮನಾರ್ಹ ಪಾತ್ರವನ್ನು ವಹಿಸಿದ್ದು ಆಧುನಿಕ ಬ್ಯಾಂಕಿಂಗ್ ವ್ಯವಸ್ಥೆಯ ಪ್ರಯೋಜನಗಳಿಂದ ಜನತೆ ವಂಚಿತರಾಗುವುದನ್ನು ಅದು ತಪ್ಪಿಸಿದೆ. ತನ್ನ ಹಲವಾರು ಯೋಜನೆಗಳ ಮೂಲಕ ಕೃಷಿಕ ಜನಾಂಗಕ್ಕೆ ನೆರವನ್ನೀಯುವಲ್ಲಿ ಅದು ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಿದೆ. ಗಾತ್ರದಲ್ಲಿ ಬೃಹದಾಕಾರದಲ್ಲಿ ಬೆಳೆದಿದ್ದರೂ ಸಾಮಾನ್ಯ ಮನುಷ್ಯನ ಬ್ಯಾಂಕಾಗಿಯೇ ಮುಂದುವರಿಯುತ್ತಿದೆ. ಸಾಹಸದ ಮತ್ತು ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ಬ್ಯಾಂ

(ಪುಟ ೪ಕ್ಕೆ)

ಈ ಕೆಳಗಿನ ತುಲನಾತ್ಮಕ ಅಂಕಿ ಅಂಶಗಳು ರಾಷ್ಟ್ರೀಕರಣದ ಬಳಿಕದ ಆರು ವರ್ಷಗಳಲ್ಲಿ ನಮ್ಮ ಬ್ಯಾಂಕು ಸಾಧಿಸಿದ ಪ್ರಗತಿಯ ಚಿತ್ರವನ್ನು ನೀಡುತ್ತವೆ.

| ಖಾತೆಗಳ ಪ್ರಗತಿ (ಜುಲೈ ೧೯೬೯ರಿಂದ ಆಗಸ್ಟ್ ೧೯೭೫ರ ವರೆಗೆ) | ಶೇಕಡಾವಾರು ಹೆಚ್ಚಳ |
|---|---|
| ಠೇವಣಿಗಳು | |
| ರೂ. ೧೨೬.೮೬ ಕೋಟಿಯಿಂದ ರೂ. ೪೪೨.೧೫ ಕೋಟಿಗೆ .... | ೨೪೯ |
| ಮುಂಗಡಗಳು | |
| ರೂ. ೯೦.೩೬ ಕೋಟಿಯಿಂದ ರೂ. ೩೨೫.೪೮ ಕೋಟಿಗೆ .... | ೨೬೦ |
| ಠೇವಣಿ ಖಾತೆಗಳು | |
| ೧೩.೨೮ ಲಕ್ಷದಿಂದ ೪೦ ಲಕ್ಷಕ್ಕೆ .... .... | ೨೦೧ |
| ಮುಂಗಡ ಖಾತೆಗಳು | |
| ೨.೬೨ ಲಕ್ಷದಿಂದ ೬.೫ ಲಕ್ಷಕ್ಕೆ .... .... | ೧೪೮ |
| ಶಾಖೆಗಳು | |
| (ಸಪ್ಟಂಬರ ೩೦, ೧೯೭೫ರ ವೇಳೆಗೆ) .... ೩೦೬ರಿಂದ ೭೪೧ಕ್ಕೆ .... | ೧೪೨ |

## ಈ ಆರು ವರ್ಷಗಳಲ್ಲಿ ನಾವು ಸಾಧಿಸಿದ ಪ್ರಗತಿ

ಆದ್ಯ ಉತ್ಪನ್ನ ಮೂಲ ಕ್ಷೇತ್ರಗಳಿಗೆ ಸಿಂಡಿಕೇಟ್ ಬೇಂಕ್ ನೀಡಿದ ಮುಂಗಡ

| ಕ್ಷೇತ್ರಗಳು | ಜುಲೈ ೧೯೬೯ರ ವೇಳೆಗೆ | | ಆಗಸ್ಟ್ ೧೯೭೫ರ ವೇಳೆಗೆ | |
|---|---|---|---|---|
| | ಖಾತೆಗಳ ಸಂಖ್ಯೆ | ಮೊಬಲಗು ರೂ. ಕೋಟಿ | ಖಾತೆಗಳ ಸಂಖ್ಯೆ | ಮೊಬಲಗು ರೂ. ಕೋಟಿ |
| ಕೃಷಿ .... | ೪೦,೪೪೩ | ೯.೬೯ | ೧,೮೯,೩೩೦ | ೪೧.೦೮ |
| ಸಣ್ಣ ಕೈಗಾರಿಕೆಗಳು .... | ೫,೯೩೨ | ೧೧.೧೪ | ೧೬,೦೦೧ | ೪೨.೦೨ |
| ಸಾರಿಗೆ ಚಾಲಕರು .... | ೧,೪೫೦ | ೨.೬೭ | ೬,೭೦೭ | ೧೬.೭೬ |
| ಚಿಲ್ಲರೆ ವ್ಯಾಪಾರ .... | ೧೭,೮೨೩ | ೪.೪೩ | ೪೦,೯೪೩ | ೧೫.೮೮ |
| ಅಧ್ಯಯನ ಸಾಲಗಳು .... | ೭,೯೩ | ೨೭.೬೪ | ೩,೪೮೦ | ೭೯.೦೦ |
| ಸ್ವೋದ್ಯೋಗಿಗಳಿಗೆ ಮತ್ತು ವೃತ್ತಿನಿರತರಿಗೆ .... | ೫,೩೨೦ | ೭೨.೪೭ | ೩೦,೩೧೨ | ೫೯೨.೦೦ |
| ಸಣ್ಣ ವ್ಯಾಪಾರ .... | ೩,೪೫೫ | ೩೪.೮೬ | ೨೪,೭೯೮ | ೩೮೩.೦೦ |
| ರಫ್ತು ವ್ಯಾಪಾರ .... | ೪೬೬ | ೫.೯೦ | *೧,೫೭೨ | *೧೯.೩೦ |

*ಇವು ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ನೀಡಿದ ರಫ್ತು ಮುಂಗಡವನ್ನು ಹೊರತುಪಡಿಸಿದೆ.

ಡಿಫರೆನ್ಸಿಯಲ್ ರೇಟ್ ಆಫ್ ಇಂಟರೆಸ್ಟ್ ಯೋಜನೆಯಲ್ಲಿ ಮುಂಗಡ

ಖಾತೆಗಳ ಸಂಖ್ಯೆ ೩೦,೨೪೫. ಬಾಕಿಯಿರುವ ಮೊಬಲಗು ರೂ. ೧೨೪.೦೮ ಲಕ್ಷ

ಈ ಆರು ವರ್ಷಗಳಲ್ಲಿ

೧೪,೬೨೭ ಪಂಪ್ ಸೆಟ್‌ಗಳು, ೨,೭೦೮ ಟ್ರಾಕ್ಟರ್‌ಗಳು, ೨,೭೦೪ ಡಗ್‌ವೆಲ್‌ಗಳು, ೨೮,೯೦೬ ಹೈನ ಪಶುಗಳು, ೪,೪೫೯ ಟ್ಯಾಕ್ಸಿಗಳು, ೫,೯೮೮ ಟ್ರಕ್ಕುಗಳು, ೩,೭೯೧ ರಿಕ್ಷಾಗಳು ಇವುಗಳ ಖರೀದಿಗೆ ಬ್ಯಾಂಕು ಆರ್ಥಿಕ ನೆರವು ನೀಡಿದೆ.

ಸ್ವೋದ್ಯೋಗಿಗಳಿಗೆ ಮತ್ತು ಸಣ್ಣ ಸಾಲಗಾರರಿಗೆ ನೀಡಿದ ಮುಂಗಡದ ಪರಿಣಾಮವಾಗಿ ೧,೬೦,೦೦೦ಕ್ಕೂ ಹೆಚ್ಚಿನ ಮಂದಿ ನೆರವನ್ನು ಪಡೆಯುವಂತಾಯಿತು.

ಶಾಖೆಗಳ ವಿಂಗಡನೆ
(ಸೆಪ್ಟೆಂಬರ್, ೧೯೭೫ರಲ್ಲಿದ್ದಂತೆ)

| ಶಾಖೆಗಳ ವರ್ಗೀಕರಣ | ಶಾಖೆಗಳ ಸಂಖ್ಯೆ | ಶೇಕಡಾವಾರು |
|---|---|---|
| ಗ್ರಾಮೀಣ ಶಾಖೆಗಳು | ೨೬೯ | ೩೬ |
| ಪಟ್ಟಣ-ಉಪನಗರಗಳಲ್ಲಿ | ೨೩೦ | ೩೧ |
| ನಗರಗಳಲ್ಲಿ | ೧೧೧ | ೧೫ |
| ಬಂದರು/ಮಹಾನಗರಗಳಲ್ಲಿ | ೧೩೧ | ೧೮ |
| ಒಟ್ಟು | ೭೪೧ | ೧೦೦ |

# ಸಂಭ್ರಮದ ಸ್ವರ್ಣೋತ್ಸವ ಆರಂಭ

ಅಕ್ಟೋಬರ ತಾ. ೧೯ನೇ ರವಿವಾರ ಪೂರ್ವಾಹ್ನ ಘಂಟೆ ೯ಕ್ಕೆ, ಮಣಿಪಾಲದಲ್ಲಿ. ಸಿಂಡಿಕೇಟಿನ ಸ್ವರ್ಣೋತ್ಸವವು, "ಸ್ವರ್ಣೋತ್ಸವ ಸ್ಮಾರಕ ಭವನ"ದ ಉದ್ಘಾಟನಾ ಕಾರ್ಯಕ್ರಮದಿಂದ ಆರಂಭವಾಯಿತು. ವೇದಘೋಷದ ನಂತರ, ಪ್ರಾರ್ಥನೆಗೀತೆಯಾಗಿ, ಬೇಂಕಿನ ಚೆಯರ್ಮೆನ್-ಮೆನೇಜಿಂಗ್ ಡೈರೆಕ್ಟರರಾಗಿರುವ ಶ್ರೀ। ಕೆ. ಕೆ. ಪೈಯವರು ಅತಿಥಿಗಳನ್ನು ಸ್ವಾಗತಿಸುತ್ತ, ಬೇಂಕಿನ ರಮ್ಯ ಇತಿಹಾಸವನ್ನು ವಿವರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು, ಬೇಂಕಿನ ಪ್ರಥಮ ಚೆಯರ್ಮೆನ್ ಹಾಗೂ ಎಕೆಡಮಿ ಒಫ್ ಜನರಲ್ ಎಜ್ಯುಕೇಶನಿನ ಅಧ್ಯಕ್ಷ ಮತ್ತು ರಿಜಿಸ್ಟ್ರಾರರಾಗಿರುವ ಡಾ। ಟಿ. ಎಂ. ಎ. ಪೈಯವರು ವಹಿಸಿದ್ದರು.

## ಸ್ಮಾರಕಭವನ ಉದ್ಘಾಟನೆ

ಕರ್ನಾಟಕದ ಲೋಕೋಪಯೋಗೀ ಸಚಿವ ಶ್ರೀ। ಎಚ್. ಎಂ. ಚನ್ನಬಸಪ್ಪನವರು, ಭವ್ಯ ಸ್ವರ್ಣೋತ್ಸವ ಸ್ಮಾರಕ ಮಂದಿರವನ್ನು ಉದ್ಘಾಟಿಸುತ್ತ, ಪ್ರತಿಯೊಂದು ಕ್ಷೇತ್ರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಅಸಾಮಾನ್ಯ ಪ್ರಗತಿ ಸಾಧಿಸಿದ ಮತ್ತು ಭಾರತದ ನಕಾಶೆಯಲ್ಲಿ ಗಣನೀಯ ಸ್ಥಾನ ಪಡೆದ ಜಿಲ್ಲೆಯೆಂದೂ, ಇಲ್ಲಿಯ ಸ್ಫೂರ್ತಿ-ಸಾಧನಗಳು ಅಖಿಲ ಭಾರತಕ್ಕೇ ಮಾರ್ಗದರ್ಶನಮಾಡಬಲ್ಲಂಥವೆಂದೂ. ಜಿಲ್ಲೆಯ ಪ್ರತಿಭಾಸಂಪನ್ನರ ಸಾಹಸ–ಸತತಯತ್ನ–ಸಫಲತೆಗಳನ್ನು ಹಾರ್ದಿಕವಾಗಿ ಪ್ರಶಂಸಿಸಿದರು. "ಉಳ್ಳವರು ದೇಗುಲವನು ಕಟ್ಟುವರಯ್ಯಾ...." ಎಂಬ ಬಸವ ವಚನವನ್ನುದ್ಧರಿಸಿ ಶ್ರೀ। ಚನ್ನಬಸಪ್ಪನವರು, "ನಿನ್ನ ಕಾಲುಗಳೇ ಕಂಭ, ಶರೀರವೇ ದೇವಾಲಯ...." ಮುಂತಾಗಿ ಸರಳವಾಗಿ ತಿಳಿಸಿ, "ಡಾ। ಮಾಧವ ಪೈಗಳವರ ಹೃದಯ ದೇಗುಲವೇ ಅಂತಹುದು—ಅವರೊಬ್ಬ ಪವಾಡಪುರುಷರು; ಮಣಿಪಾಲವು ಆರ್ಥಿಕ, ಶೈಕ್ಷಣಿಕಕ್ಷೇತ್ರಗಳಲ್ಲಿ ಒಂದು ಪ್ರಯೋಗಶಾಲೆ" ಎಂದರು. "ಶ್ರೀ। ಟಿ. ಎ. ಪೈಗಳವರು ಆರ್ಥಿಕತಜ್ಞತೆ, ಅಸಾಮಾನ್ಯ ಚೈತನ್ಯ, ವಿಶಾಲಹೃದಯ ಮತ್ತು ಮನೋಭಾವದಿಂದ ಭಾರತ ಮಟ್ಟಕ್ಕೇರಿದುದು ನಮಗೆಲ್ಲ ಹೆಮ್ಮೆಯ ವಿಷಯ"ವೆಂದರು. "ಮಹಾ ಆಕಾರವನ್ನು ತಾಳುತ್ತಿದ್ದ ಸಿಂಡಿಕೇಟ್ ಬೇಂಕನ್ನು, ಇಂದಿನ ಚೆಯರ್ಮೆನ್ ಮತ್ತು ಮೆನೇಜಿಂಗ್ ಡೈರೆಕ್ಟರರಾಗಿ ಶ್ರೀ। ಕೆ. ಕೆ. ಪೈಯವರು ಬೃಹದಾಕಾರಕ್ಕೆ ವಿಸ್ತರಿಸುವುದರಲ್ಲಿ ವಹಿಸಿದ ಪಾತ್ರವೂ ಬೃಹತ್ತರವಾದುದು"—ಎಂದು, ಶ್ರೀ। ಕೆ. ಕೆ. ಪೈಯವರ ಅಸಾಧಾರಣ ಕಾರ್ಯಚತುರತೆ, ಪರಿಶ್ರಮ, ಸಾಹಸಗಳನ್ನು ಕೊಂಡಾಡಿದರು.

ಅನಂತರ, ಸ್ವರ್ಣೋತ್ಸವ ಸ್ಮಾರಕ ಭವನದ ವಿವಿಧ ಕಂಟ್ರಾಕ್ಟರುಗಳಿಗೆ ಉಡುಗೊರೆಗಳನ್ನೀಯಲಾಯಿತು.

ಈ ಸಮಾರಂಭದ ಅಧ್ಯಕ್ಷತೆ ವಹಿಸಿದ ಡಾ। ಟಿ. ಎಂ. ಎ. ಪೈಗಳವರು ಅಧ್ಯಕ್ಷಸ್ಥಾನದಿಂದ ಮಾತಾಡುತ್ತ, — "ಚಿಕ್ಕ ಮನುಷ್ಯನೊಬ್ಬನು ಬೆಳೆದು ದೊಡ್ಡ ಮನುಷ್ಯನಾಗಿರುವನು' ಎಂಬುದೇ ಸಿಂಡಿಕೇಟ್ ಬೇಂಕಿನ ಇತಿಹಾಸ. ಕೇವಲ ೮೦೦೦ ರೂಪಾಯಿಗಳಿಂದ ಆರಂಭವಾದ ಒಂದು ಸಂಸ್ಥೆಯು ಇಂದಿನ ಈ ಔನ್ನತ್ಯಕ್ಕೇರಿದೆ ಎಂಬುದು ನಂಬಿಕೆಗೆ ಮೀರಿದುದೆಂದೆಬಹುದು. ಈ ಬೆಳವಣಿಗೆ ಮತ್ತು ಮಹೋನ್ನತೆಯಿಂದೆ. ರಾಷ್ಟ್ರೀಕರಣದ ನಂತರ ಬೇಂಕು ಶೀಘ್ರ ಮಾರುಗಾಲು ಹಾಕಿ ಮುನ್ನಡೆವುದು ಸಂತೋಷಕರವಹುದು ಈ ಬೇಂಕಿನ ಪ್ರಧಾನ ಕಛೇರಿಯು ಗ್ರಾಮೀಣ ಪ್ರದೇಶದಲ್ಲಿರುವುದು ಈ ಸಂಸ್ಥೆಯ ಗಣನೀಯ ವೈಶಿಷ್ಟ್ಯ........"ಎಂದು ಹೇಳುತ್ತ ಅಧ್ಯಕ್ಷರು ಸಿಂಡಿಕೇಟ್ ಬೇಂಕಿನ ಈ ಅದ್ಭುತ ಪ್ರಗತಿಯು ಭಾರತದ ಉಳಿದ ಕಡೆಗಳಿಗೆ ಮಾದರಿಯಾಗಲೆಂದಾಶಿಸಿದರು.

ಡಾ। ಟಿ. ಎಂ. ಎ. ಪೈಗಳವರಿಂದ ಅಧ್ಯಕ್ಷಭಾಷಣವಾದ ನಂತರ, ಸಿಂಡಿಕೇಟಿನ ಜನರಲ್ ಮೆನೇಜರ್ ಶ್ರೀ। ಎಚ್. ಎನ್. ರಾವ್‌ರವರು ಧನ್ಯವಾದಗಳನ್ನಿತ್ತರು.

## ವಿಚಾರಗೋಷ್ಠಿ

ಪೂರ್ವಾಹ್ನ ೧೧ಕ್ಕೆ, "ಆರ್ಥಿಕ ಪ್ರಗತಿಗಾಗಿ ಬೇಂಕಿಗ್ ಅಭಿವೃದ್ಧಿ" ಎಂಬ ವಿಷಯದ ಮೇಲೆ, ಕೇಂದ್ರದ ಉದ್ದಿಮೆ ಸಚಿವ ಶ್ರೀ। ಟಿ.ಎ. ಪೈಯವರು ವಿಚಾರಗೋಷ್ಠಿಯನ್ನು ಉದ್ಘಾಟಿಸುತ್ತ, ಇಂದಿನ ಬದಲಾದ ಸ್ಥಿತಿಯಲ್ಲಿ ಬೇಂಕುಗಳೂ 'ಕ್ಲಾಸ್ ಬೇಂಕಿಂಗ್ ಸ್ವರೂಪವನ್ನು ಮಾಸ್ ಬೇಂಕಿಂಗ್' ಸ್ವರೂಪವಾಗಿ ಪರಿವರ್ತಿಸಿ, ತಾವೂ ಜನಸಾಮಾನ್ಯದಲ್ಲಿ ಒಂದಾಗಬೇಕೆಂದೂ ಕರೆಯಿತ್ತರು. ದೇಶದಲ್ಲಿ ಉಳಿತಾಯದ ಪ್ರಮಾಣವು ಇಳಿಮುಖವಾಗಿದೆಯೆನ್ನುತ್ತ ಶ್ರೀ। ಟಿ.ಎ. ಪೈಗಳವರು "ಜನತೆಯಲ್ಲಿ ಉಳಿತಾಯದ ಪ್ರೇರಣೆಯನ್ನುಂಟುಮಾಡಲು ಬೇಂಕ್‌ಗಳು ವಿಫಲವಾಗಿವೆ, ಸತತ ಒತ್ತಾಯದ ಹೊರತು ಜನಸಾಮಾನ್ಯದಲ್ಲಿ ಉಳಿತಾಯದ ಅಭ್ಯಾಸವು ಬೆಳೆಯಲಾರದು. ಉಳಿತಾಯವೆಂಬುದು ಒಬ್ಬನ ಆವಶ್ಯಕ ವೆಚ್ಚಗಳಲ್ಲಿ ಮೊದಲನೇ ಅಂಶವಾಗಿರತಕ್ಕದು" ಎಂದರು. ಬೇಂಕಿಂಗ್ ಸೌಲಭ್ಯವಿಲ್ಲದ ಸ್ಥಳಗಳಲ್ಲಿ ಶಾಖೆಗಳನ್ನು ತೆರೆದು ಎಲ್ಲ ವರ್ಗಗಳ ಜನರಿಗೆ ಬೇಂಕಿಂಗ್ ಸವಲತ್ತು ಸಿಗುವಂತೆ ಮಾಡುವುವು ಬೇಂಕುಗಳ ಮೇಲಿರುವ ಎರಡು ಮುಖ್ಯ ಹೊಣೆಗಾರಿಕೆಗಳು........"ಎಂದರು.

ವಿಚಾರಗೋಷ್ಠಿಯಲ್ಲಿ ಭಾಗವಹಿದವರಲ್ಲಿ, ಕೇಂದ್ರ ಅರ್ಥಖಾತೆಯ ಬೇಂಕಿಂಗ್ ವಿಭಾಗದ ಜತೆಕಾರ್ಯದರ್ಶಿ ಡಾ। ಟಿ. ಎನ್. ಸಕ್ಸೇನವರು ತಮ್ಮ ಪ್ರಬಂಧವನ್ನೋದುತ್ತ, 'ಬೇಂಕ್ ಶಾಖೆಗಳ ಹೆಚ್ಚಳಕ್ಕೂ ಬೇಂಕ್ ಸಿಬಂಧಿ ವರ್ಗಗಳ ಸೇವಾಮಟ್ಟ ಸುಧಾರಣೆಗೂ ತಕ್ಕ ಸಂಬಂಧವಿಲ್ಲ' ವೆಂದು ಸೂಚಿಸಿದರು.

ಮುಂಬಯಿ ವಿಶ್ವವಿದ್ಯಾಲಯದ ಅರ್ಥಶಾಸ್ತ್ರದ ಪ್ರೊಫೆಸರ್ ಡಾ। ಪಿ. ಆರ್. ಬ್ರಹ್ಮಾನಂದ, ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಒಫ್ ಮೆನೇಜ್‌ಮೆಂಟಿನ ಡೈರೆಕ್ಟರ್ ಪ್ರೊ। ಎನ್. ಎಸ್. ರಾಮಸ್ವಾಮಿ ಮತ್ತು ಸಿಂಡಿಕೇಟ್ ಬೇಂಕಿನ ಅರ್ಥಶಾಸ್ತ್ರಜ್ಞ ಡಾ। ಎನ್. ಕೆ. ತಿಂಗಳಾಯ— ಇವರು ವಿಚಾರಗೋಷ್ಠಿಯಲ್ಲಿ ಭಾಗವಹಿಸಿ. ಉಪನ್ಯಾಸಗಳನ್ನಿತ್ತರು.

ವಿಚಾರಗೋಷ್ಠಿಯ ನೇತೃತ್ವ ವಹಿಸಿದ ರಾಜ್ಯದ ಅರ್ಥಸಚಿವ ಶ್ರೀ। ಎಂ. ವೈ. ಘೋರ್ಪಡೆಯವರು ಸಮಾರೋಪ ಭಾಷಣಮಾಡುತ್ತ, "ವಾಣಿಜ್ಯ ಬೇಂಕುಗಳು ಮತ್ತು ಸಹಕಾರಿ ಸಂಸ್ಥೆಗಳು ಗ್ರಾಮೀಣ ಪ್ರದೇಶಗಳಿಗೆ ತಮ್ಮ ಕಾರ್ಯ ವಿಸ್ತರಿಸುವಂತೆ ನಮ್ಮ ಆರ್ಥಿಕ ಸಂಸ್ಥೆಗಳು ತಕ್ಕ ಪುನರ್ವ್ಯವಸ್ಥೆಯಿಂದ ಸಜ್ಜಾಗಿ ಕಾರ್ಯನಿರತರಾಗಬೇಕೆಂದೂ, ಗ್ರಾಮಗಳ ಜನರಿಗೆ ಬೇಂಕಿಂಗ್ ವ್ಯವಹಾರವು ಸುಲಭವಾಗುವಂತೆ ಬೇಂಕಿಂಗ್ ವ್ಯವಹಾರವು ಪ್ರಾದೇಶಿಕ ಭಾಷೆಯಲ್ಲೇ ಆಗಬೇಕೆಂದೂ, ಗ್ರಾಮೀಣ ಬಡಜನರಿಗೆ ಆರ್ಥಿಕ ನೆರವು ನೀಡುವಲ್ಲಿ ಈಗ ಲಭ್ಯವಿರುವ ಅರ್ಥವ್ಯವಸ್ಥೆಯನ್ನೆಲ್ಲ ಪೂರ್ಣ ಮಟ್ಟದಲ್ಲಿ ಬಳಸಬೇಕೆಂದೂ,

(ಪುಟ ೫ಕ್ಕೆ)



ಕರ್ನಾಟಕ ರಾಜ್ಯದ ಸಾರ್ವಜನಿಕ ಕಾಮಗಾರಿ ಸಚಿವ ಶ್ರೀ। ಎಚ್. ಎಂ. ಚನ್ನಬಸಪ್ಪನವರು, ತಾ. ೧೯–೧೦–೭೫ರಂದು, ಮಣಿಪಾಲದಲ್ಲಿ ಸಿಂಡಿಕೇಟ್ ಬೇಂಕಿನ ಸ್ವರ್ಣ ಮಹೋತ್ಸವ ಜ್ಯುಬಿಲಿ ಸ್ಮಾರಕ ಸಭಾಮಂದಿರವನ್ನು ಉದ್ಘಾಟಿಸುತ್ತಿದ್ದಾಗ. (ಅವರೊಂದಿಗೆ ಇರುವವರು—ಎಡದಿಂದ ಬಲಕ್ಕೆ: ಶ್ರೀ। ಕೆ. ಸಿ. ಪೈ, ಶ್ರೀ। ಕೆ. ಕೆ. ಪೈ ಶ್ರೀ। ಎಮ್. ವೈ. ಘೋರ್ಪಡೆ, ಡಾ। ಟಿ. ಎಂ. ಎ. ಪೈ, ಟಿ. ಎ. ಪೈ ಮತ್ತು ಶ್ರೀಮತಿ ಮನೋರಮಾ ಮಧ್ವರಾಜ್‌ರವರು.)

---

(೩ನೇ ಪುಟದಿಂದ)

ಕಿಂಗ್ ಕ್ಷೇತ್ರದ ಹಲವು ರಂಗಗಳಲ್ಲಿ ಅದು ಸರ್ವಪ್ರಥಮವೆನಿಸಿದೆ. ಈ ಬ್ಯಾಂಕು ಅಳವಡಿಸಿಕೊಂಡ ಹಲವು ಉತ್ತಮ ಯೋಜನೆಗಳನ್ನು ಈಗ ಇತರ ಬ್ಯಾಂಕುಗಳು ಅಳವಡಿಸಿಕೊಂಡಿವೆ. ಸಮಾಜದ ದುರ್ಬಲ ವರ್ಗದವರಿಗೆ ನೆರವೀಯುವ ಹೆಚ್ಚಿನ ಆರ್ಥಿಕ ಯೋಜನೆಗಳು ಒಂದಲ್ಲ ಒಂದು ರೀತಿಯಲ್ಲಿ ಕಳೆದ ಕೆಲವು ದಶಕಗಳಿಂದಲೇ ಈ ಬ್ಯಾಂಕು ಜಾರಿಗೊಳಿಸಿತ್ತು ಎಂಬುದು ನಮ್ಮಲ್ಲಿ ತೃಪ್ತಿಮೂಡಿಸಿದೆ.

ಜನಕೋಟಿಯ ಸೇವೆಯನ್ನು ಇನ್ನಷ್ಟು ಉತ್ತಮರೀತಿಯಲ್ಲಿ ಕೈಗೊಳ್ಳುವಲ್ಲಿ ಸಿಂಡಿಕೇಟ್ ಬ್ಯಾಂಕಿನ ಅಧಿಕಾರಿ ಮತ್ತು ಸಿಬ್ಬಂದಿ ವರ್ಗ ಪಣತೊಟ್ಟಿದೆ.

## ರಾಷ್ಟ್ರೀಕರಣದ ಬಳಿಕ ಸಿಂಡಿಕೇಟ್ ಬ್ಯಾಂಕಿನ ಸಾಧನೆಗಳು–ಕೊಡುಗೆಗಳು

ಬ್ಯಾಂಕ್ ರಾಷ್ಟ್ರೀಕರಣದ ಮೊದಲಲ್ಲೂ ಬಳಿಕವೂ ನಾಡಿನ ಆರ್ಥಿಕ ಅಭಿವೃದ್ಧಿ ಮತ್ತು ಬೆಳವಣಿಗೆಯಲ್ಲಿ ಸಿಂಡಿಕೇಟ್ ಬ್ಯಾಂಕಿನ ಕೊಡುಗೆ ಅಪಾರವಾದುದೆಂದು ಎಲ್ಲಾ ವಲಯಗಳಿಂದ ಪ್ರಶಂಸಿಸಲ್ಪಟ್ಟಿದೆ. ಸಣ್ಣ ಉಳಿತಾಯದ ಕ್ಷೇತ್ರದಲ್ಲಿ ಕೃಷಿ ಆರ್ಥಿಕ ನೆರವಿನ ರಂಗದಲ್ಲಿ ಹಾಗೂ ಸಣ್ಣ ಪ್ರಮಾಣದ ಉದ್ದಿಮೆ ಮತ್ತು ಸ್ವೋದ್ಯೋಗ ಕ್ಷೇತ್ರಗಳಲ್ಲಿ ಸಿಂಡಿಕೇಟ್ ಬ್ಯಾಂಕು ಮಾಡಿದ ಆದ್ಯ ಪ್ರವರ್ತಕ ಕಾರ್ಯಗಳು ಅದನ್ನು ನಾಡಿನ ಪ್ರಮುಖ ಬ್ಯಾಂಕಿಂಗ್ ಸಂಸ್ಥೆಗಳ ಪಂಕ್ತಿಯ ಗಣ್ಯ ಸ್ಥಾನದಲ್ಲಿ ನಿಲ್ಲಿಸಿವೆ.

ರಾಷ್ಟ್ರೀಕರಣದ ಬಳಿಕ ವರ್ಷಗಳಲ್ಲಿ ಜನಸಾಮಾನ್ಯರ ಹೆಮ್ಮೆಯ ಸಂಸ್ಥೆಯೆಂದು ಕರೆಸಿಕೊಳ್ಳುವುದರೊಂದಿಗೆ ಸಿಂಡಿಕೇಟ್ ಬ್ಯಾಂಕು ಈ ಅವಧಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿನ ಜನರ ಉತ್ಪನ್ನಮೂಲ ಪ್ರಯತ್ನಗಳಿಗೆ ಆರ್ಥಿಕ ನೆರವನ್ನು ನೀಡುವಲ್ಲಿ ತನ್ನ ಪರಿಶ್ರಮವನ್ನು ಇಮ್ಮಡಿಗೊಳಿಸಿದೆ. ರಾಷ್ಟ್ರೀಕೃತ ಬ್ಯಾಂಕುಗಳ ಮುಂದಿರಿಸಿದ ಸಾಮಾಜಿಕ ಧ್ಯೇಯೋದ್ದೇಶಗಳನ್ನು ಕೈಗೂಡಿಸುವಲ್ಲಿ ನಮ್ಮ ಬ್ಯಾಂಕು ಪಟ್ಟ ಶ್ರಮ, ಸಾಧಿಸಿದ ಸಿದ್ಧಿ ನಮ್ಮಲ್ಲಿ ತೃಪ್ತಿಯನ್ನು ಮೂಡಿಸಿದೆ.

ರಾಷ್ಟ್ರೀಕರಣದ ಬಳಿಕ ನಾವು ೪೩೫ ಶಾಖೆಗಳನ್ನು ತೆರೆದೆವು. ೧೯೬೯ರ ವೇಳೆಗೆ ಬ್ಯಾಂಕಿಂಗ್ ಸೌಲಭ್ಯಗಳಿಲ್ಲದ ೧೨೧ ಸ್ಥಳಗಳಲ್ಲಿ ಶಾಖೆಗಳನ್ನು ಹೊಂದಿದ್ದೆವು. ೧೯೭೫ರ ವೇಳೆಗೆ ಬ್ಯಾಂಕಿಂಗ್ ಸೌಲಭ್ಯಗಳಿಲ್ಲದ ೨೫೯ ಸ್ಥಳಗಳಲ್ಲಿ ಶಾಖೆಗಳನ್ನು ಹೊಂದಿರುವೆವು.

—೦—



ತಾ. ೨೦-೧೧-೭೫ರಂದು—ಸಿಂಡಿಕೇಟ್ ಬೇಂಕಿನ ಸ್ವರ್ಣಮಹೋತ್ಸವಕ್ಕೆ ಆಗಮಿಸಿದ, ಮುಖ್ಯ ಅತಿಥಿಗಳಾದ ಶ್ರೀ। ಎನ್. ಡಿ. ತಿವಾರಿ, ಶ್ರೀ। ಸಿ. ಸುಬ್ರಹ್ಮಣ್ಯಂ (ಕೇಂದ್ರದ ಅರ್ಥಸಚಿವರು) ಮತ್ತು ಶ್ರೀಮತಿ ಶಶಿಕಲಾ ಕಾಕೋಡ್ಕರ್(ಗೋವೆಯ ಮುಖ್ಯಮಂತ್ರಿ) ಇವರನ್ನು ಸಿಂಡಿಕೇಟಿನ ಚೆಯರ್ಮೇನ್ ಶ್ರೀ। ಕೆ. ಕೆ. ಪೈಯವರು ವೇದಿಕೆಗೆ ಕರೆದೊಯ್ಯುವಾಗ.





"ರಿಸರ್ವ್ ಬೇಂಕ್ ಒಫ್ ಇಂಡಿಯ"ದ ಗವರ್ನರ್ ಶ್ರೀ। ಕೆ. ಆರ್. ಪುರಿಯವರು, ಸ್ವರ್ಣಮಹೋತ್ಸವ ಸ್ಮಾರಕ ಅಂಕವನ್ನು ಬಿಡುಗಡೆಗೊಳಿಸಿ, ಕರ್ನಾಟಕದ ರಾಜ್ಯಪಾಲ ಶ್ರೀ। ಮೋಹನಲಾಲ ಸುಖಾದಿಯಾರವರಿಗೆ ಒಂದು ಪ್ರತಿಯೊಪ್ಪಿಸುವಾಗ. (ಎಡದಲ್ಲಿ ನಿಂತು ನೋಡುವವರು ಚೆಯರ್ಮೇನ್ ಶ್ರೀ। ಕೆ. ಕೆ. ಪೈಯವರು.)


(೪ನೇ ಪುಟದಿಂದ)

ಅದರೊಂದಿಗೇ ನಮ್ಮ ಮುಂಗಡ ಪಾವತಿಗಳ ವಿಧಾನದಲ್ಲೂ ತಕ್ಕ ಬದಲಾವಣೆಗಳಾಗಬೇಕೆಂದೂ" ಅಭಿಪ್ರಾಯಪಟ್ಟರು. ಹಾಗೆಯೇ, ಒಂದು ಸಾಲ ನೀಡುವುದರಿಂದ ಎಷ್ಟರ ಮಟ್ಟಿಗೆ ಉದ್ಯೋಗಾವಕಾಶ ವುಂಟಾಗುವುದು ಮತ್ತು ಉತ್ಪಾದನೆ ಎಷ್ಟು ಹೆಚ್ಚುವುದು ಎಂಬುದನ್ನೂ ಗಮನಿಸತಕ್ಕದು—ಎಂದು ಶ್ರೀ। ಘೋರ್ಪಡೆ ಸೂಚಿಸಿದರು.

ಡಾ। ಬ್ರಹ್ಮಾನಂದರು ತಮ್ಮ ಉಪನ್ಯಾಸದಲ್ಲಿ ಹಣದುಬ್ಬರವನ್ನು ತಡೆಯಲು ಇಂದಿನ ಬಿಗಿ ಹಣಕಾಸು ನೀತಿಯೇ ಮುಂದುವರಿಯಬೇಕೆಂದು ಅಭಿಪ್ರಾಯಪಟ್ಟರು.

## ಟ್ರೆವೆಲರ್ಸ್ ಚೆಕ್ಸ್ ಬಿಡುಗಡೆ

ತಾ. ೨೦ನೇ ಸೋಮವಾರ ಪೂರ್ವಾಹ್ನ, ಸ್ವರ್ಣೋತ್ಸವದ ಸ್ಮರಣಾರ್ಥ ಐವತ್ತು ಗೋಲ್ಡನ್ ಮೊಹರ್ ಸಸಿಗಳನ್ನು ನೆಡುವ ಕಾರ್ಯಕ್ರಮವು, ಪೂರ್ವಾಹ್ನ ೧೧ಕ್ಕೆ ನಡೆದು, ೧೧.೩೦ಕ್ಕೆ, ಸೇರಿದ ಸಭೆಯಲ್ಲಿ ಕರ್ನಾಟಕದ ರಾಜ್ಯಪಾಲ ಶ್ರೀ। ಮೋಹನಲಾಲ ಸುಖಾದಿಯಾರವರು ಸಿಂಡಿಕೇಟ್ ಟ್ರೆವೆಲ್ಲರ್ಸ್ ಚೆಕ್‌ಗಳನ್ನು ಉದ್ಘಾಟಿಸುತ್ತ, "ರಾಷ್ಟ್ರೀಕರಣದ ಮೊದಲು ನಮ್ಮ ಬೇಂಕುಗಳು ಎಲ್ಲ ವರ್ಗದ ಜನರಿಂದ ಹಣ ಸಂಚಯ ಮಾಡುತಿದ್ದರೂ, ಆ ಹಣದ ಪ್ರಯೋಜನವು ಕೆಲವು ಸೀಮಿತ ವರ್ಗಕ್ಕೆ ಮಾತ್ರ ಲಭಿಸುತಿತ್ತು. ಈಗ ಬೇಂಕಿನ ಸ್ವರೂಪವೇ ಬದಲಾಯಿಸಿದೆ; ವ್ಯವಸಾಯಕ್ಕೆ, ಇಂಜಿನಿಯರರಿಗೆ, ಡಾಕ್ಟರರಿಗೆ—ವಿದ್ಯಾವಂತ ನಿರುದ್ಯೋಗಿಗಳಾದವರಿಗೆ ಆರ್ಥಿಕ ಸವಲತ್ತು ದೊರೆಯುವಂತೆ ಮಾಡುವುದು ಬೇಂಕುಗಳ ಪ್ರಧಾನ ಕರ್ತವ್ಯವಾಗಿದೆ. ಬೇಂಕುಗಳು ಗ್ರಾಮಾಂತರ ಪ್ರದೇಶಗಳಿಗೂ ಪ್ರವೇಶಿಸಿವೆ. ಇದು ಶೀಘ್ರತಮ ಆರ್ಥಿಕ ಅಭಿವೃದ್ಧಿಗಾಗಿ—" ಎಂದರು.



ಕರ್ನಾಟಕದ ರಾಜ್ಯಪಾಲ ಶ್ರೀ। ಮೋಹನಲಾಲ ಸುಖಾದಿಯಾರವರು, ಸಿಂಡಿಕೇಟ್ ಬೇಂಕಿನ ಐವತ್ತು ವರ್ಷಗಳ ಪ್ರಗತಿಪರ ಸೇವೆಯ ಸವಿನೆನಪಿಗಾಗಿ ನೆಡುವ ೫೦ ಗೋಲ್ಡ್ ಮೊಹರ್ ಸಸಿಗಳಲ್ಲಿ ಮೊದಲನೆಯದನ್ನು ನೆಡುತ್ತಿರುವರು. (ತಾ. ೨೦-೧೧-೭೫.)

"ಗ್ರಾಮೀಣ ಜನರನ್ನು ಬಡ್ಡಿ ಸಾಹುಕಾರರು ತಮ್ಮ ಮುಷ್ಟಿಯಲ್ಲಿ ಹಿಡಿದು ನರಳಿಸುತ್ತಿದ್ದುದಕ್ಕೀಗ ಕೊನೆಗಾಲ ಬಂದಿದೆ. ಜನಸಾಮಾನ್ಯಕ್ಕೆ ಬೇಂಕುಗಳು ಆರ್ಥಿಕ ನೆರವು ನೀಡಿ, ಹೊಸ ಮನ್ವಂತರವನ್ನು ತರುತ್ತಿವೆ; ಸರ್ವಜನಕ್ಕೂ ಈ ಹೊಸ ಆರ್ಥಿಕ ಹೊಸ ವ್ಯವಸ್ಥೆಯು ಫಲನೀಡುವಂತೆ ಸುಯೋಜಿತ ಕಾರ್ಯಕ್ರಮ ಹಾಕಿ ಮುಂದುವರಿಯಬೇಕು. ಗ್ರಾಮೀಣ ಪ್ರದೇಶದಲ್ಲಿ ಕೇಂದ್ರ ಕಛೇರಿ ಹೊಂದಿದ ಬೇಂಕು ಸಿಂಡಿಕೇಟ್ ಮಾತ್ರ. ಬಹುಶಃ ಗ್ರಾಮೀಣ ಪ್ರಪಂಚದಲ್ಲಿ ಮುಖ್ಯ ಕಛೇರಿಯಿರಿಸಿದ ಬೇಂಕು ಪ್ರಪಂಚದಲ್ಲಿ ಕೂಡ ಇದೊಂದೇ. ಸಿಂಡಿಕೇಟು ದೇಶದ ಇತರ ಆರ್ಥಿಕ ಸಂಸ್ಥೆಗಳಿಗೂ ಆದರ್ಶವಾಗಿದೆ. ಈ ಅಪೂರ್ವ ಸಾಧನೆಗೆ ಪೈಬಂಧುಗಳು ಕಾರಣರಾಗಿದ್ದಾರೆ. ಜಾಗರೂಕತೆಯ ಯೋಜನೆ ಮತ್ತು ಅರ್ಪಣಾಭಾವವು ಏನನ್ನು ಎಷ್ಟನ್ನು ಸಾಧಿಸಬಹುದು ಎಂಬುದಕ್ಕೆ ಇದು ನಿದರ್ಶನ"— ಎಂದರು.

## ಸಂಸ್ಮರಣ ಸಂಚಿಕೆಯ ಬಿಡುಗಡೆ

ಸ್ವರ್ಣಮಹೋತ್ಸವದ ಸಂಸ್ಮರಣ ಸಂಚಿಕೆಯನ್ನು ಬಿಡುಗಡೆಮಾಡುತ್ತ, ರಿಸರ್ವ್ ಬೇಂಕಿನ ಗವರ್ನರ್ ಶ್ರೀ। ಕೆ. ಆರ್. ಪುರಿಯವರು, "ಗ್ರಾಮೀಣ ವ್ಯವಸ್ಥೆಗೆ ದೃಢತೆ, ದೇಶದ ವರಮಾನವು ಹೆಚ್ಚಾಗಿ ಬಡವರ್ಗಕ್ಕೇ ದೊರೆವಂಥ ವಿತರಣಾ ವ್ಯವಸ್ಥೆ, ಆವಶ್ಯಕ ವಸ್ತುಗಳ ವಿತರಣಾ ವ್ಯವಸ್ಥೆಯಲ್ಲಿ ಸುಧಾರಣೆ—ಒಟ್ಟಿನಲ್ಲಿ ಗ್ರಾಮೀಣ ಜನರ ಆರ್ಥಿಕಸ್ಥಿತಿ ಸುಧಾರಣೆಯಾಗುವುದೇ ೨೦ ಅಂಶಗಳ ಕಾರ್ಯಕ್ರಮದ ಉದ್ದೇಶ; ಅದನ್ನು ಸಾಧಿಸಲು ಸಾಲ ನೀತಿಯ ಪುನರ್ವ್ಯವಸ್ಥೆ ಮಾಡಲಾಗುತ್ತಿದೆ. ಅಲಕ್ಷಿತ ಹಾಗೂ ಆದ್ಯತೆ ರಂಗಗಳಿಗೆ ಭಾರತೀಯ ಬೇಂಕಿಂಗ್ ಇಂದು ಶಾಖಾ ವಿಸ್ತರಣಾ ಮಾತ್ರವಲ್ಲ—ಸಾಲಗಳ ವಿಸ್ತರಣೆಯಲ್ಲೂ ಮಹತ್ತರ ಪ್ರಗತಿ ಸಾಧಿಸಿದೆ. ೧೯೬೯ನೇ ಜೂನ್‌ನಿಂದ ೧೯೭೫ರ ಜೂನ್ ವರೆಗೆ ಬೇಂಕ್ ಶಾಖೆಗಳು ೧೧,೫೦೦ದಷ್ಟು ಹೆಚ್ಚಿವೆ. ಅವುಗಳಲ್ಲಿ ೫೦೦೦ ಶಾಖೆಗಳು ಅಥವಾ ಅರ್ಧದಷ್ಟು-ಗ್ರಾಮೀಣ ಪ್ರದೇಶಗಳಲ್ಲಿ ತೆರೆಯಲ್ಪಟ್ಟಿವೆ. ಇದು ವಿಶ್ವದಲ್ಲೇ ದಾಖಲೆ. ಆದ್ಯತಾರಂಗಗಳಿಗೆ ೧೯೬೯ರ ಮೊದಲು ೫೦೦ ಕೋಟಿ ನೀಡಿದ್ದರೆ ೧೯೭೫ರ ಮಾರ್ಚಿಗೆ ರೂ. ೨೧೦೦ ಕೋಟಿಗೇರಿದೆ" ಎನ್ನುತ್ತ, "ಸಿಂಡಿಕೇಟ್ ಬೇಂಕ್ ಅಸಾಮಾನ್ಯ ನಾಯಕತ್ವವನ್ನು ಒದಗಿಸಿ, ಅಭಿವೃದ್ಧಿಯ ಶಿಲ್ಪಿಗಳಲ್ಲೊಂದು ಎನಿಸಿದೆ"— ಎಂದು ಪ್ರಶಂಸೋಕ್ತಿ ಸಲಿಸಿದರು.

## "ಕೃಷಿಚಿಂತನ"

"ಕೃಷಿಚಿಂತನ" ಎಂಬ, ಕೃಷಿಕರಿಗೆ ಉಪಯುಕ್ತವಾದ ಸಿಂಡಿಕೇಟ್ ಪ್ರಕಟಣೆಯನ್ನು, ಡಾ। ಶಿವರಾಮ ಕಾರಂತರು ಉದ್ಘಾಟಿಸಿದರು.

ಸಾಯಂಕಾಲ ೬-೩೦ಕ್ಕೆ ಸ್ವರ್ಣಮಹೋತ್ಸವದ, ಬೃಹತ್ ಅಧಿವೇಶನವು ಕೇಂದ್ರದ ಅರ್ಥಸಚಿವ ಶ್ರೀ। ಸಿ. ಸುಬ್ರಹ್ಮಣ್ಯಂರವರ ಅಧ್ಯಕ್ಷತೆಯಲ್ಲಿ ಬೇಂಕಿನ ಪ್ರಧಾನ ಕಚೇರಿಯ ಎದುರಿನ ವಿಶಾಲಾಂಗಣದಲ್ಲಿ ಆರಂಭವಾಯಿತು.


## ಶ್ರೀ। ಟಿ. ಎ. ಪೈಗಳವರು—

—ಸ್ವರ್ಣಮಹೋತ್ಸವದಲ್ಲಿ ಮಾತಾಡುತ್ತ, "ಬೃಹತ್ ಕೈಗಾರಿಕೋದ್ಯಮಗಳ ಆಸರೆ ಇಲ್ಲದೇನೇ ಬೇಂಕುಗಳು ಬೆಳೆಯಬಲ್ಲುವು. ಜನತೆಯೊಂದಿಗೆ ಬೆರೆತು, ಜನತೆಯದೇ ಬೇಂಕ್ ಆಗಿ ರೂಪತಳೆದಾಗ ಬೆಳವಣಿಗೆಯು ಸಹಜ ಸಾಧ್ಯ. ಇದಕ್ಕೆ ಸಿಂಡಿಕೇಟ್ ಬೇಂಕ್ ಉದಾಹರಣೆ. ಬೇಂಕಿಂಗ್ ಇತಿಹಾಸದಲ್ಲಿ ಸಿಂಡಿಕೇಟಿನ ದಾಖಲೆ ಮಹತ್ವದ್ದು. ಈ ಬೇಂಕು ಇತರರನ್ನು ಅನುಕರಣೆಮಾಡಲಿಲ್ಲ; ಸಂಪ್ರದಾಯಕ್ಕೆ ಶರಣುಹೋಗಲಿಲ್ಲ. ಹೊಸ ಹೊಸ ಯೋಜನೆಗಳಿಂದ ಮುಂದೆ ಸಾಗತೊಡಗಿತು. ದೊಡ್ಡ ಕೈಗಾರಿಕೆಗಳಂತೆ ಸಣ್ಣ ಮನುಷ್ಯರೂ ಮುಖ್ಯ ಎಂಬುದನ್ನರಿತು ಕಾರ್ಯನಿರತವಾಯಿತು. ಸಿದ್ಧಾಂತಗಳಿಗಿಂತ ಅನುಭವವೇ ಮುಖ್ಯ...." ಎಂದರು.

## "ಉತ್ತರಪ್ರದೇಶದಲ್ಲಿ ಇನ್ನೊಂದು ದಕ್ಷಿಣ ಕನ್ನಡ"

ಉತ್ತರಪ್ರದೇಶದ ಅರ್ಥಸಚಿವ ಶ್ರೀ।

(ಪುಟ ೬ಕ್ಕೆ)



ಗೋವೆಯ ಮುಖ್ಯಮಂತ್ರಿ ಶ್ರೀಮತಿ ಶಶಿಕಲಾ ಕಾಕೋಡ್ಕರ್‌ರವರಿಗೆ, ಶ್ರೀಮತಿ ಸಗುಣಾ ಕೆ. ಪೈಯವರು ಪುಷ್ಪಹಾರ ತೊಡಿಸುವಾಗ. (ಎಡದಲ್ಲಿ ನಿಂತವರು, ಸಿಂಡಿಕೇಟ್ ಬೇಂಕಿನ ಚೆಯರ್ಮೇನ್ ಶ್ರೀ। ಕೆ. ಕೆ, ಪೈಯವರು.)

# "ಬಡವನಿಗೆ ಆರ್ಥಿಕ ಸುಸ್ಥಿತಿ ತರುವುದೇ ಉದ್ದೇಶವಾಗಬೇಕು"

"ಬಡವನು ನಿಮ್ಮ ಬಾಗಿಲಿಗೆ ಬರುವ ತನಕ ನೀವು ಕಾಯಬಾರದು; ಸಾಲ ಇಚ್ಛಿಸುವವನು ನಿಮ್ಮ ಕೃಪೆಗಾಗಿ ಯಾಚಿಸು ತ್ತಿಲ್ಲ; ಬಡವನಿಗೆ ಆರ್ಥಿಕ ಸುಸ್ಥಿತಿ ತರು ವುದೇ ಬೇಂಕುಗಳ ಉದ್ದೇಶವಾಗಿರಬೇಕು, ಇಂಥ ಬದಲಾವಣೆ ಬರಬೇಕಾದರೆ ನಮ್ಮ ವಾಣಿಜ್ಯ ಬೇಂಕುಗಳ ಸಾಂಪ್ರದಾಯಿಕ ಧೋರಣೆಗಳೂ ಕಾರ್ಯವಿಧಾನವೂ ತಕ್ಕಂತೆ ಬದಲಾಗಬೇಕು"—ಎಂದು ತಾ. ೨೦ ರಂದು ಸಾಯಂಕಾಲ ಮಣಿಪಾಲದಲ್ಲಿ ಸೇರಿದ ಸಿಂಡಿಕೇಟ್ ಬೇಂಕಿನ ಸ್ವರ್ಣ ಮಹೋತ್ಸವದ ಅಧ್ಯಕ್ಷಸ್ಥಾನದಿಂದ, ಕೇಂದ್ರದ ಅರ್ಥಸಚಿವ ಶ್ರೀ। ಸಿ. ಸುಬ್ರಹ್ಮಣ್ಯಂ ರವರು ಕರೆಯಿತ್ತರು. ಬೇಂಕುಗಳು ತಮ್ಮ ಆದ್ಯತಾರಂಗ ಮುಂಗಡಗಳಿಗೆ ನೀಡುವ ಮುಂಗಡಗಳ ಗುಣಾತ್ಮಕ ವ್ಯವಸ್ಥೆಮಾಡಿ ಕೊಳ್ಳಬೇಕು; ಆಗ ಮಾತ್ರ ಬೇಂಕ್ ರಾಷ್ಟ್ರೀಕರಣದ ಉದ್ದೇಶಿತ ಫಲವು ಗ್ರಾಮೀಣ ಬಡಜನತೆಗೆ ದೊರಕೀತು ಎನ್ನುತ್ತ, ಅರ್ಥಸಚಿವರು,—"ಹಾಗೆಯೇ ಎಲ್ಲ ರಂಗ ಗಳಲ್ಲೂ ಸಣ್ಣ ಮಟ್ಟದ ಜನರನ್ನು ತಲ ಪಲು ಯತ್ನ ಅಗತ್ಯ. ಗುರಿ ಸಾಧನೆಗೆ ಬದ್ಧರಾಗಿದ್ದು, ಸೇವಾ ಮನೋಭಾವ ಹಾಗೂ ಬೇಂಕಿಂಗ್ ವ್ಯವಸ್ಥೆಯ ಕಾರ್ಯಾಚರಣೆಯ ಸಾಂಘಿಕ ವ್ಯವಸ್ಥೆಯ ಎಲ್ಲ ಮಟ್ಟಗಳಲ್ಲೂ ಸೇವಾವ್ಯಾಪ್ತಿ—ಇದು ಇಂದಿನ ಅವಶ್ಯಕತೆ"—ಎಂದರು.

ಬೇಂಕಿಂಗ್ ರಾಷ್ಟ್ರೀಕರಣದ ಮಹತ್ತಿ ಅರ್ಥಸಚಿವರು, "ಬೇಂಕಿಂಗ್ ವ್ಯವಸ್ಥೆಯು ಆರ್ಥಿಕಾಭಿವೃದ್ಧಿಯ ಅತೀ ಪ್ರಧಾನ ಮೂಲ ಘಟಕಗಳಲ್ಲೊಂದು ಎಂಬ ಸ್ಥಾನ ವನ್ನು ಸಾಧಿಸುವ ದೃಷ್ಟಿಯಿಂದ ರಾಷ್ಟ್ರೀಕರಣ ಮಾಡಿದುದಾಗಿದೆ. ಇಚ್ಛಿತ ಪಥ ದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ವ್ಯಾಪಕ ಕಾರ್ಯಕ್ಕೆ ಈ ರಾಷ್ಟ್ರೀಕೃತ ಬೇಂಕುಗಳ ನಿರ್ವಹಣೆಯನ್ನು ರೂಪಿಸಲಾಗಿದೆ"—ಎನ್ನುತ್ತ, "ಆದರೆ, ಇವೆಲ್ಲ ನಿರೀಕ್ಷೆಗಳು ಎಷ್ಟರ ಮಟ್ಟಿಗೆ ಈಡೇರಿವೆ, ನಮ್ಮ ಲೋಪದೋಷಗಳಾವುವು ಎಂಬ ಸಮೀಕ್ಷೆ ನಡೆಯಬೇಕು" ಎಂದರು.

ರಾಷ್ಟ್ರೀಕರಣವಾದ ನಂತರ ಬೇಂಕಿಂಗ್ ಕ್ಷೇತ್ರದಲ್ಲಿ ಸಾಮಾಜಿಕ ಹೊಣೆಗಾರಿಕೆಯ ಅರಿವು ಗಣನೀಯವಾಗಿ ಹೆಚ್ಚಿದೆ ಎಂದೂ ಶ್ರೀ। ಸುಬ್ರಹ್ಮಣ್ಯಂ ಹೇಳುತ್ತ, ಗ್ರಾಮೀಣ ಪ್ರದೇಶಗಳಲ್ಲಿ ಉತ್ಪಾದನಾ ಸಾಹಸೋದ್ಯಮಗಳಿಗೆ ಆವಶ್ಯಕ ಸಾಲದ ನೆರವನ್ನು ಎಲ್ಲರಿಗೆ ಲಭ್ಯವಾಗುವಂತೆ ಮಾಡುವುದೇ ಹಿಂದುಳಿದ ಕ್ಷೇತ್ರಗಳಿಗೆ ಬೇಂಕ್‌ಶಾಖೆಗಳನ್ನು ವಿಸ್ತರಿಸುವ ಯೋಜನೆಯ ಗುರಿ ಯಾಗಿದೆ. ಸಾರ್ವಜನಿಕ ರಂಗಗಳಲ್ಲಿನ ಬೇಂಕುಗಳು ಸದಾ ಈ ಉದ್ದೇಶವನ್ನು ಪರಿಗಣಿಸಿವೆಯೆಂದು ಹೇಳುವಂತಿಲ್ಲ-" ಎಂದರು.

—ಸಿಂಡಿಕೇಟ್ ಬೇಂಕಿನ ಅಭಿವೃದ್ಧಿ, ವಿವಿಧ ಯೋಜನೆಗಳು, ಸೇವೆಗಳು—ಇವು ಗಳನ್ನು ಪ್ರಸ್ತಾವಿಸುತ್ತ ಶ್ರೀ। ಸುಬ್ರಹ್ಮಣ್ಯಂರವರು, "ಸಿಂಡಿಕೇಟ್ ಬೇಂಕು ಇಂದು ರಾಷ್ಟ್ರದ ಅನೇಕ ಭಾಗಗಳಲ್ಲಿ ಮನೆಮಾತಾ ಗಿದೆ. ಕೇವಲ ಎಂಟುಸಾವಿರ ರೂಪಾಯಿ ಬಂಡವಾಲದಿಂದ ಒಬ್ಬನೇ ಒಬ್ಬ ಕೆಲಸಗಾರನಿಂದ ಆರಂಭಿಸಲ್ಪಟ್ಟ ಈ ಬೇಂಕು ಇಂದಿನ ಬೃಹದಾಕಾರಕ್ಕೆ ಬೆಳೆದುದು ದೇಶವ್ಯಾಪಿ ಯಾದುದು ಅಸಾಮಾನ್ಯ ಸಾಧನೆ. ಈ ಸಂಸ್ಥೆಯ ಸ್ಥಾಪಕರ ಆತ್ಮವಿಶ್ವಾಸ ಹಾಗೂ ಜನಸಾಮಾನ್ಯದ ಸಹಕಾರವನ್ನು ಸಂಪಾದಿಸುವ ಆತ್ಮೀಯತೆಗಳೇ ಇದಕ್ಕೆ ಕಾರಣ...." ಮುಂತಾಗಿ ಪ್ರಶಂಸೋಕ್ತಿಗಳನ್ನು ಸಲಿಸಿ, ಈ ಸಂಸ್ಥೆಯನ್ನು ಕಟ್ಟಿ, ಬೆಳೆಸಿ ತಂದ ಸ್ಥಾಪಕರನ್ನೂ, ಅಧಿಕಾರಿಗಳನ್ನೂ ಸಿಬಂಧಿಯನ್ನೂ ಅಭಿನಂದಿಸಿ, ಈ ಮಹಾ ಸಂಸ್ಥೆಗೆ ಇತ್ಯೋಪತಿಶಯ ಅಭಿವೃದ್ಧಿಯನ್ನು ಹಾರೈಸಿದರು.

ಸಾಂಸ್ಕೃತಿಕ ಕಾರ್ಯಕ್ರಮಗಳು ತಾ. ೧೮ರಿಂದ ತಾ. ೨೦ರ ತನಕ, ದಿನಂಪ್ರತಿ ವಿವಿಧ ಮನರಂಜನಾ ಪ್ರದರ್ಶನಗಳಿಂದ ಸಾವಿರಾರು ಜನರನ್ನು ರಂಜಿಸಿದುವು.

ಬೇಂಕಿನ ಈ ಮಹೋತ್ಸವವನ್ನು, ಚ್ಯುತಿಯಿಲ್ಲದೆ, ಎಲ್ಲೂ ಸ್ಖಾಲಿತ್ಯಗಳಿಲ್ಲದೆ ನೂರಾರು ಸ್ವಯಂಸೇವಕರಿಂದ ರೂಪಿಸಿ, ನಡೆಸಿ ತರುವಲ್ಲಿ ನಿರ್ದೇಶಕರಾಗಿ ಶ್ರಮಿಸಿದ ಶ್ರೀ। ಕೆ. ಕೆ. ಪೈಗಳವರು, ಇದರ ಯಶಸ್ಸಿಗೆ ದಿವಾರಾತ್ರಿ ದುಡಿದ-ಎಲ್ಲರೂ ಅಭಿನಂದನಾರ್ಹರು.

——

(೫ನೇ ಪುಟದಿಂದ)

ಎನ್. ಡಿ. ತಿವಾರಿಯವರು ಮಾತನಾಡುತ್ತ, ಉತ್ತರಪ್ರದೇಶದಲ್ಲಿ ಸಿಂಡಿಕೇಟ್ ಬೇಂಕು "ಲೀಡ್ ಬೇಂಕ್" ಆಗಿ ಮಾಡಿದ ಸಾಧನೆಯನ್ನು ವಿವರಿಸುತ್ತ, ಆ ಪ್ರದೇಶದ ಮೊರಾದಾಬಾದ್ ಜಿಲ್ಲೆಯು ಇನ್ನೊಂದು ದಕ್ಷಿಣ ಕನ್ನಡ ಜಿಲ್ಲೆ ಎನಿಸಿಕೊಳ್ಳಲಿದೆ— ಎಂದರು.

### ಕೈಗಾರಿಕೆ ಮತ್ತು ಕೃಷಿಪ್ರದರ್ಶನ

ಸಿಂಡಿಕೇಟ್ ಸ್ವರ್ಣೋತ್ಸವದ ಅಂಗ ವಾಗಿ, ಕೈಗಾರಿಕೆ ಮತ್ತು ಕೃಷಿಪ್ರದರ್ಶನ ವನ್ನು ಮಣಿಪಾಲದಲ್ಲಿ ಏರ್ಪಡಿಸಲಾಗಿತ್ತು. ಜಗತ್ತಿನ ರಾಷ್ಟ್ರಗಳಲ್ಲಿನ ನಾಣ್ಯಗಳ ಮತ್ತು ಇತರ ವಸ್ತುಪ್ರದರ್ಶನವೂ ಸಾವಿರಾರು ಜನರನ್ನು ಆಕರ್ಷಿಸಿತು.

—o—

### "ಟಿ. ಎ. ಪೈ ಸೋಶ್ಯಲ್ ವೆಲ್'ಫೇರ್' ಫಂಡ್'" ಉದ್ಘಾಟನೆ ಗೋವಾ ಮುಖ್ಯಮಂತ್ರಿಯವರಿಂದ

ಕೇಂದ್ರದ ಕೈಗಾರಿಕಾ ಮತ್ತು ನಾಗರಿಕ ಪೂರೈಕೆ ಸಚಿವ ಶ್ರೀ। ಟಿ. ಎ. ಪೈಯವರು, ಸಿಂಡಿಕೇಟ್ ಬೇಂಕಿನ ಚೆಯರ್ಮನ್ ಸ್ಥಾನ ವನ್ನು ಬಿಟ್ಟು (೧೯೭೦), ಜೀವವಿಮಾ ಕೊರ್ಪೊರೇಶನಿನ ಚೆಯರ್ಮನ್ ಸ್ಥಾನ ಸ್ವೀಕರಿಸಲು ತೆರಳುವ ವೇಳೆ, "ಸಮಾಜ ಕಲ್ಯಾಣ ನಿಧಿ"ಯೊಂದನ್ನು ಸಿಂಡಿಕೇಟ್ ಬೇಂಕು ಸ್ಥಾಪಿಸಬೇಕೆಂಬ ಸಲಹೆಯಿತ್ತಿದ್ದರು. ಐದು ವರ್ಷಗಳ ಹಿಂದೆ ಅವರಿತ್ತ ಸೂಚನೆಯು, ಬೇಂಕಿನ ಸ್ವರ್ಣಮಹೋತ್ಸವದ ಶುಭಾವಸರದಲ್ಲಿ ಕಾರ್ಯರೂಪಕ್ಕೆ ಬರುವಂತಾಯಿತು. ಬೇಂಕು, ಈ ನಿಧಿ ಯನ್ನು "ಟಿ. ಎ. ಪೈ ಸೋಶ್ಯಲ್ ವೆಲ್ ಫೇರ್ ಫಂಡ್" ಎಂದು ನಾಮಕರಣ ಮಾಡಿದೆ.



ಸಿಂಡಿಕೇಟ್ ಬೇಂಕಿನ ಚೆಯರ್ಮೆನ್ ಶ್ರೀ। ಕೆ. ಕೆ. ಪೈಯವರು, ರಾಜ್ಯ ಸರಕಾರದ ಸಾರ್ವಜನಿಕ ಕಾಮಗಾರಿ ಸಚಿವ ಶ್ರೀ। ಎಚ್. ಎಂ. ಚೆನ್ನಬಸಪ್ಪನವರಿಗೆ ಪುಷ್ಪಹಾರ ಹಾಕಿದಾಗ. ಎಡದಲ್ಲಿ, ರಾಜ್ಯದ ಅರ್ಥಸಚಿವ ಶ್ರೀ। ಎಂ. ವೈ. ಘೋರ್ಪಡೆ ಮತ್ತು ಕೇಂದ್ರ ಸರಕಾರದ ಕೈಗಾರಿಕೆ ಮತ್ತು ನಾಗರಿಕ ಪೂರೈಕೆ ಸಚಿವ ಶ್ರೀ। ಟಿ. ಎ. ಪೈಯವರು ಕುಳಿತಿರುವರು.

ಈ ನಿಧಿಯನ್ನು ತಾ. ೨೦ನೇ ಸಾಯಂಕಾಲ ಸ್ವರ್ಣಮಹೋತ್ಸವದ ವೇಳೆ, ಗೋವೆಯ ಮುಖ್ಯಮಂತ್ರಿ ಶ್ರೀಮತಿ ಶಶಿಕಲಾ ಕಾಕೋಡ್ಕರ್‌ರವರು ಉದ್ಘಾಟಿಸುತ್ತ, ಸಿಂಡಿಕೇಟ್ ಬೇಂಕು, ರಾಷ್ಟ್ರೀಕರಣದ ಎಷ್ಟೋ ಮೊದಲು, ರಾಷ್ಟ್ರೀಕೃತ ಬೇಂಕುಗಳ ಕರ್ತವ್ಯವನ್ನು ಕೈಕೊಂಡಿದೆಯೆಂದೂ, ಬಡವರ, ಅನನುಕೂಲಸ್ಥರ ಮತ್ತು ಕೆಳಗೆ ಅದುಮಲ್ಪಟ್ಟವರ ಬಗ್ಗೆ ಮಣಿಪಾಲದ ಪೈಬಂಧುಗಳ ಸೇವೆಯು ಅಸಾಮಾನ್ಯ ವೆಂದೂ ಹೇಳಿದರು.

ಈ ನಿಧಿಯು, ಬೇಂಕಿನ ನೌಕರರ ಬಗ್ಗೆ ವಿಶೇಷವಾಗಿ ಬೇಂಕಿನ ನೌಕರರ ಹಾಗೂ ಇತರರ ಮಾನಸಿಕವಾಗಿ ಹಿಂದುಳಿದಿರುವ ಮಕ್ಕಳಿಗೆ ಪರಿಹಾರ ಒದಗಿಸಲು ಉಪಯೋಗಿಸಲ್ಪಡುವುದು.

(ಶ್ರೀ। ಟಿ. ಎ. ಪೈಯವರು ೧೯೭೦ ರಲ್ಲಿ ಎಲ್ಲೈಸಿ ಚೆಯರ್ಮನರಾಗಿ ಹೋಗುವ ವೇಳೆ ಬೇಂಕಿನ ನೌಕರರು ಅರ್ಪಿಸಿದ ನಿಧಿ ಮತ್ತು ಸಾರ್ವಜನಿಕ ವಂತಿಗೆ ಸೇರಿ ರೂ. ೯೩,೦೦೦ಯಷ್ಟಾಗಿದೆ; ಈ ಮೊತ್ತದಿಂದ ಈ ನಿಧಿ ಆರಂಭವಾಯಿತು.)

——

### ಸಿಂಡಿಕೇಟ್ ಬೇಂಕಿನಿಂದ ಜೀವವಿಮಾ ಕೊರ್ಪೊರೇಶನಿನ ಗ್ರೂಪ್ ಗ್ರೆಚ್ಯುವಿಟಿ ಲೈಫ್ ಇನ್ಶ್ಯೂರೆನ್ಸ್ ಯೋಜನೆ ಅಂಗೀಕಾರ

ತನ್ನ ಪ್ರಗತಿಪರ ಸಂಪ್ರದಾಯಕ್ಕನುಗುಣವಾಗಿ ಸಿಂಡಿಕೇಟ್ ಬೇಂಕು, ತನ್ನ ನೌಕರರ ಪ್ರಯೋಜನಾರ್ಥವಾಗಿ, ಭಾರತ ಜೀವವಿಮಾ ಕೊರ್ಪೊರೇಶನಿನ ಗ್ರೂಪ್ ಗ್ರೆಚ್ಯುವಿಟಿ ಯೋಜನೆಯನ್ನು, ಅಂಗೀಕರಿಸಿದೆ. ತಾ. ೨೦-೧೦-೭೫ರಂದು ಸೇರಿದ ಸ್ವರ್ಣಮಹೋತ್ಸವದ ಬೃಹತ್ ಸಭೆಯಲ್ಲಿ ಉತ್ತರಪ್ರದೇಶದ ಅರ್ಥಸಚಿವ ಶ್ರೀ। ನಾರಾಯಣದತ್ತ ತಿವಾರಿಯವರು ಈ ಯೋಜನೆಯನ್ನು ಉದ್ಘಾಟಿಸುತ್ತ ಈ ಯೋಜನೆಯ ಮೊದಲಿನ ಪ್ರಿಮಿಯಮ್ ಕಂತಿನ ಲೆಕ್ಕಕ್ಕೆ ರೂ. ೧೨ ಲಕ್ಷ ಬೇಂಕಿನ ಚೆಕ್ಕನ್ನು, ಜೀವವಿಮಾ ಕೊರ್ಪೊರೇಶನಿನ ಉಡುಪಿ ಡಿವಿಜನಿನ ಮೆನೇಜರ ಶ್ರೀ। ಎನ್. ವಿ. ಪರಮೇಶ್ವರನ್‌ರವರಿಗೆ ಒಪ್ಪಿಸಿದರು. (ಈ ಮೊದಲು, ಆರಂಭದ ಪ್ರಿಮಿಯಮ್ ಕಂತಿನ ಖಾತೆಗೆ ರೂ. ೫ ಲಕ್ಷ ಕೊಡಲ್ಪಟ್ಟಿದೆ.)

ಇದೇ ಸಂದರ್ಭದಲ್ಲಿ ಶ್ರೀ। ಎನ್. ವಿ. ಪರಮೇಶ್ವರನ್‌ರವರು, ಈ ಗ್ರೂಪ್ ವಿಮಾ ಯೋಜನೆಯನ್ವಯ, ಬೇಂಕಿನ ಎಂಟು ಮಂದಿ ದಿವಂಗತರ ವಾರೀಸುದಾರರಿಗೆ ಸಲಿಸಲು ವಿಮಾಹಣ ರೂ.೫೦,೪೯೦ ರ ಚೆಕ್ಕನ್ನು ಸಿಂಡಿಕೇಟ್ ಬೇಂಕಿನ ಚೆಯರ್ಮೆನ್ ಶ್ರೀ। ಕೆ. ಕೆ. ಪೈಯವರಿಗೊಪ್ಪಿಸುವಂತೆ ರಿಸರ್ವ್ ಬೇಂಕ್ ಗವರ್ನರ್ ಶ್ರೀ। ಕೆ. ಆರ್. ಪುರಿಯವರನ್ನು ವಿನಂತಿಸಿಕೊಂಡರು.

——

### ಪ್ರಧಾನಿಯವರ ಪರಿಹಾರನಿಧಿಗೆ ಸಿಂಡಿಕೇಟ್ ಬೇಂಕಿನ ಕೊಡುಗೆ

ದೇಶದ ಬಿಹಾರ, ಮತ್ತಿತರ ಭಾಗಗಳಲ್ಲಿ ನೆರೆಹಾವಳಿಗೆ ತುತ್ತಾದ, ಪ್ರವಾಹ ಪೀಡಿತರ ಪರಿಹಾರಾರ್ಥ ಏರ್ಪಟ್ಟ ಪ್ರಧಾನಿಯವರ ಪರಿಹಾರನಿಧಿಗೆ. ಸ್ವರ್ಣಮಹೋತ್ಸವದ ಸಂದರ್ಭದಲ್ಲಿ ಸಿಂಡಿಕೇಟ್ ಬೇಂಕು ರೂ. ೫೦,೦೦೦ವನ್ನು ನೀಡಿತು. ಅಕ್ಟೋಬರ ತಾ. ೨೦ರಲ್ಲಿ ಸ್ವರ್ಣಮಹೋತ್ಸವದ ಅಧ್ಯಕ್ಷತೆ ವಹಿಸಿದ ಕೇಂದ್ರದ ಅರ್ಥಸಚಿವರಿಗೆ, ಸಿಂಡಿಕೇಟ್ ಬೇಂಕಿನ ಚೆಯರ್ಮೆನ ಶ್ರೀ। ಕೆ. ಕೆ. ಪೈಯವರು ಚೆಕ್ಕನ್ನು ಒಪ್ಪಿಸಿದರು.

# ವರ್ಷಭವಿಷ್ಯ ★

(1975 ದೀಪಾವಳಿಯಿಂದ 1976 ದೀಪಾವಳಿ ವರೆಗೆ.)

(ಶ್ರೀ ಎಂ. ಸುಬ್ರಾಯನ್, ವಿದ್ವಾನ್, ಜ್ಯೋತಿಷಿ, ಮಂಗಳೂರು–3)

## ಮೇಷ:

ನಿಮ್ಮ ದೃಷ್ಟಿಯು ಭವಿಷ್ಯದ ಒಳಿತಿಗಾಗಿದೆ. ಕರ್ಮಮಾರ್ಗಕ್ಕಿಳಿದು, ಜೀವನದ ಘನತೆ ಸಾಧಿಸುವ ಯೋಜನೆಯಿಂದ ಊರ್ಜಿತಕ್ಕೆ ಬರುವವರಾಗುವಿರಿ. ಸತ್ಯ, ನ್ಯಾಯ, ನಿಷ್ಠೆ, ನೈತಿಕ ಮಾರ್ಗದ ನೆಲೆಯನ್ನು ಹೊಂದಿದ್ದು, ಅದರಿಂದ ದೇವರ ಅನುಗ್ರಹ ಸಂಪತ್ತನ್ನು ಹೊಂದುವಿರಿ. ಆಪ್ತೇಷ್ಟರೂ ಬಂಧುಗಳೂ ಎನಿಸಿದವರಲ್ಲಿ ಕೆಲವರಿಂದ ಅಶಾಂತಿಗೆ ಎಡೆಯಿದ್ದರೂ, ಅದನ್ನು ಲಕ್ಷಿಸದೆ ಮುನ್ನಡೆವಿರಿ. ಕೋರ್ಟು ವ್ಯವಹಾರಗಳಲ್ಲಿ ಜಯಸಿದ್ಧಿ ಯೋಗ. ದ್ವಾದಶದ ಗುರುರಾಯನು ಹೋರಾಟಗಳನ್ನು ನಡೆಸಿ, ನಿಮ್ಮ ರಾಶಿಯ ಗುರುಭಾಗ್ಯ ಸಿದ್ಧಿ, ಜಯಸಿದ್ಧಿಗಳಿಗೆ ಆಸ್ಪದವೀವ ಫಲವಿದೆ. ವಾಸಸ್ಥಾನದ ನವೀನತೆ, ಭೂಸಂಪತ್ತಿನ ಪ್ರಗತಿಗಿರುವ ವ್ಯವಸಾಯಗಳು ತುಂಬಿಬರುವವು. ಪ್ರವಾಸಾಸಕ್ತಿಯಿದ್ದರೂ ವಿಘ್ನ ಕರ್ಮಗಳು ಸ್ಥಗಿತಗೊಳಿಸುವುವು. ನವಂಬರ ಮೇಲಿನ ಕಾಲ ಸಂಪತ್ತಿನ ದೃಷ್ಟಿಯಿಂದ ಒಳ್ಳೆಯದು. ನಾಲ್ಕರ ಶನಿಯು ನಿಮಗೆ ಭೂಸಂಪತ್ತಿನ ಲಾಭ-ವೃದ್ಧಿಗಳನ್ನು ಕೊಡುವನು. ನಿಮ್ಮ ಅಹಿತ ಸಾಧಿಸುವ ಅನಿಷ್ಟ ವ್ಯಕ್ತಿಗಳು ಸೋತು, ನಿಮ್ಮ ಇಷ್ಟ ಪ್ರಾಪ್ತಿ ಲಾಭಸಿದ್ಧಿಗಳಾಗಲಿರುತ್ತವೆ. ನಷ್ಟಾಂಶ ಸಂಪತ್ತಿನ ಕೂಡಿಕೆಗೆ ಅವಕಾಶವಿದೆ. ಮಹತ್ತಿಕೆಯ ಕರ್ಮಗಳು ನಡೆಯಲಿವೆ. ನೌಕರರಿಗೆ ಸ್ಥಾನ ಯಾ ಕರ್ಮದಲ್ಲಿ ಬದಲಾವಣೆ, ಭಡತಿಗಳಿವೆ. ಮೂವತ್ತಾರು ವಯಸ್ಸಿನ ಮೇಲಿನವರಿಗೆ ಭಾಗ್ಯೋದಯ ಸಿದ್ಧಿಯಿದೆ. ಕುಟುಂಬದಲ್ಲಿ ಶುಭಕಾರ್ಯಗಳು, ಸಂತಾನಸುಖ, ಇಷ್ಟಪ್ರಾಪ್ತಿಗಳಾಗುವುವು. ವಿದ್ಯಾರ್ಥಿಗಳು ಶ್ರಮ, ಶ್ರದ್ಧೆಗಳಿಂದ ಬೆಳೆವಣಿಗೆ ಹೊಂದುವರು. ಸಂಸ್ಥಾ ವ್ಯವಸಾಯ, ಜಮೀನಿನ ವ್ಯವಸಾಯ ಜೀವನದವರಿಗೆ ಈ ವರ್ಷವು ಒಳ್ಳೆಯ ನೆಲೆಗೆ ತರುವುದು. ಸಾಹಿತಿಗಳಿಂದ ಮಹತ್ವದ ಲೇಖನವ್ಯವಸಾಯ ನಡೆಯುವಂತಿದೆ. ಮಕ್ಕಳ ಆರೋಗ್ಯಕ್ಕಾಗಿ ವ್ಯಯವಿದೆ.

## ವೃಷಭ:

ಈ ರಾಶಿಯವರು, "ಕೊಡಲಿ ಕಾವು ಕುಲಕ್ಕೆ ಮೃತ್ಯು" ಎಂಬ ಜಾಣ್ಣುಡಿಯನ್ನು ಲಕ್ಷ್ಯದಲ್ಲಿರಿಸಿಕೊಳ್ಳಬೇಕು. ನಿಮ್ಮ ಜೀವನದಲ್ಲಿ ಆರ್ಥಿಕ ವಿಚಾರ ಮತ್ತು ಭೂಗೃಹ ಸಂಪತ್ತಿನ ಕೂಡಿಕೆಯ ಸೆಣಸಾಟದಲ್ಲಿ ಮಾಡುತ್ತಿರುವುದೆಲ್ಲ ನೈತಿಕಮಾರ್ಗದಿಂದ ಸಾಗದೆ ಘನತೆಗೆ ಕುಂದು ಬರುವ ದಶೆ ಕಾಣುತ್ತಿದೆ. ಅಭಿಮಾನ ದರ್ಪಗಳಿಂದ ದೂರವಿರಲು ಯತ್ನಿಸಿರಿ. ಕುಟುಂಬ ಬಂಧುವರ್ಗದಲ್ಲಿ ಭಿನ್ನತೆ, ದೇಹಾರೋಗ್ಯ ಸುಖಕ್ಕೆ ತೊಡಕು ಮೊದಲಾದ ಅನಿಷ್ಟಫಲ ಪ್ರಾಪ್ತಿಗೆ ಅವಕಾಶವಿದೆ. ಹೀಗಿದ್ದರೂ ನೀವು ನಿಮ್ಮ ಕರ್ಮ-ಮನಸ್ಸುಗಳಿಂದ ಯಾವುದನ್ನೂ ಲಕ್ಷಿಸದೆ ಆಶಾಗೋಪುರ ಕಟ್ಟಿಕೊಂಡೇ ಕಾಲಹರಣವಾಗುತ್ತಿದೆ. ನಿಮ್ಮ ತುಲಾ ರಾಹು ನಿಮ್ಮ ಉದ್ಯೋಗ ವ್ಯವಸಾಯದಲ್ಲಿ ನಷ್ಟಸಂಪರ್ಕ ಕೊಯ್ದು ನಿಮಗರಿಯದೆನೇ ಕಷ್ಟಗಳಿಗೆ ತಳ್ಳಿಬಿಟ್ಟಾನು. ದಾಂಪತ್ಯಜೀವನದವರಿಗೆ ಹೆಂಡತಿಯ ಅನಾರೋಗ್ಯದ ಚಿಂತೆ, ಸುಖಕ್ಕೆ ತೊಡಕು. ಸಂಪತ್ತಿನ ಹೊಸ ವ್ಯವಹಾರಗಳಿಂದ ತಾಕಲಾಟ. ಕ್ರೀಡಾವ್ಯವಸಾಯದವರಿಗೆ ಅಂಗಸಾಧನಾಪ್ರದರ್ಶಕರಿಗೆ ಈ ಕಾಲವು ಗೆಲವನ್ನು ಕೊಡುವುದಿಲ್ಲ. 1976ರ ಫೆಬ್ರವರಿ ಮೇಲಿನ ನಾಲ್ಕು ತಿಂಗಳ ಕಾಲ ಚೆನ್ನಲ್ಲ. ವಿದ್ಯಾಜೀವನದವರು ಪ್ರಯತ್ನಶೀಲರಾಗಿ ಪ್ರಗತಿ ಸಾಧಿಸಲು ಶಕ್ಯವಿದೆ ಲೇಖನ ವ್ಯವಸಾಯಿಗಳಿಗೆ ಈ ವರ್ಷ ಸಾಮಾನ್ಯ. ಈ ರಾಶಿಯ ತರುಣ ತರುಣಿಯರಿಗೆ ಫೆಬ್ರವರಿಯೊಳಗೆ ದಾಂಪತ್ಯಕ್ಕಾಗಿ ಮಾಡುವ ಯತ್ನ ಯಶಸ್ವಿಯಾಗುವುದು. ವಕೀಲ ವೃತ್ತಿಯವರಿಗೆ ಆರ್ಥಿಕ ದೃಷ್ಟಿಯಿಂದ ಒಳ್ಳೇ ವರ್ಷ; ವಾಣಿಜ್ಯ ವ್ಯವಸಾಯದವರಿಗೂ ಅಭಿವೃದ್ಧಿ.

## ಮಿಥುನ:

ಈ ರಾಶಿಯವರಿಗೆ ಜೀವನದಲ್ಲಿ ತಿಳಿವಿನ ಶಕ್ತಿಯಿಂದ ಕರ್ಮದ ಪ್ರಗತಿಯಾಗಿ, ಆರ್ಥಿಕ ದೃಷ್ಟಿಯಿಂದಲೂ ಸಮಾಜದ ಗೌರವದಿಂದಲೂ ಮುನ್ನಡೆವ ಯೋಗವಿದೆ. ಧಾರ್ಮಿಕ ವಿಷಯಗಳಲ್ಲಿ ಆಸಕ್ತಿ ಹೆಚ್ಚುವುದು. ಆಕಸ್ಮಿಕ ಘಟನೆಗಳಿರಬಹುದು. ಉದ್ಯೋಗಗಳಲ್ಲಿ ತೊಡಗಿದವರು ಉನ್ನತಿ ಸಾಧಿಸುವರು. ಪತ್ರಿಕಾವ್ಯವಸಾಯದವರಿಗೆ ಈ ವರುಷವು ಅಭಿವೃದ್ಧಿಕರ. ಕುಟುಂಬದಲ್ಲಿ ದೇಹಾರೋಗ್ಯಕ್ಕಾಗಿ ವ್ಯಯವಿರುತ್ತದೆ. ಶುಭಕೆಲಸಗಳಾಗಲಿವೆ. ಲಾಭದ ಗುರುಚಾರ ಹಲವರಿಗೆ ಸಂತಾನ ಸುಖಲಾಭ ಕೊಡುವುದಾಗಿರುತ್ತದೆ. ಪ್ರವಾಸಕ್ಕವಕಾಶವಿದೆ. ಗೃಹವಾಸಸ್ಥಾನದ, ಸುಖನಿರ್ಮಾಣದ ಯೋಗ. ಕೋರ್ಟು ವ್ಯವಹಾರಗಳು ಮುಂದುವರಿಯುವುವು. ವಿದ್ಯಾರ್ಥಿಜೀವನದವರು ಉನ್ನತಿ ಹೊಂದುವರು. ವೈದ್ಯಕೀಯ ವ್ಯವಸಾಯದವರಿಗೆ ಅಭಿವೃದ್ಧಿಕರ. ಕರ್ಕಟಕದ ಶನಿಯು ಸಂಪತ್ತಿನ ಸುಖ, ಕುಟುಂಬ-ಬಂಧುವರ್ಗೀಯರ ಬೆಳೆವಣಿಗೆ, ಸಾಮಾಜಿಕ ಮತ್ತು ರಾಜಕೀಯ ಸಂಬಂಧ ವಿಷಯದಲ್ಲಿ ಭಾಗವಹಿಸುವಿಕೆಗಳಿಗೆ ಅವಕಾಶ ನೀಡುವನು. ಪುನರ್ವಸು ಮತ್ತು ಆದ್ರಾ್ರ ನಕ್ಷತ್ರದವರಿಗೆ ಈಗಣ ಗುರುಚಾರ ಕೆಲಸದಲ್ಲಿ ಉನ್ನತಿಗೊಯ್ಯುವುದರೊಂದಿಗೆ ಹತ್ತಾರು ಮಂದಿಯ ಒಡನಾಟ, ಸ್ನೇಹ ಸುಖಸಂಪರ್ಕ ಕೊಡುತ್ತಾನೆ. ಯಾಂತ್ರಿಕ ವ್ಯವಸಾಯದವರಿಗೆ ಪ್ರಗತಿ. ಗೃಹಸುಖನಿರ್ಮಾಣ, ಅನ್ಯ ಸಂಸ್ಥಾಪರ ಕಟ್ಟಡಗಳ ನಿರ್ಮಾಣಸಂಪರ್ಕವಾಗಲಿದೆ. ತೋಟಗಾರಿಕೆ ಕೃಷಿಕರ್ಮದಲ್ಲಿ ಮುನ್ನಡೆಯಿದೆ.

## ಕರ್ಕಟಕ

ತಪ್ಪು ವಾದಗಳಿಗೆ ಸಮಯವನ್ನು ನಷ್ಟಗೊಳಿಸುವುದು ಮೂರ್ಖತನ. ಕಷ್ಟಗಳನ್ನು ಹೊಂದಲೂ ದುಷ್ಟತೆಯನ್ನು ತುಂಬಲೂ ದಾರಿ ರಚಿಸಕೂಡದು. ಈ ದಿಸೆಯಿಂದ ನಿಮ್ಮ ಜೀವನದ ದಾರಿ ತಪ್ಪಿ ಕೆಡುಕು ತೊಂದರೆಗಳು ಬರುವಂತಿವೆ. ಅಭಿಮಾನ, ಅಹಂಕಾರ, ದರ್ಪಗಳಿಂದ ದಾರಿತಪ್ಪದಂತೆ ಜಾಗರೂಕರಾಗಿರಿ. ಮದಮಾತ್ಸರ್ಯಗಳು ಬೆಳೆಯದಂತೆ ಎಚ್ಚರವಿರಲಿ ತಿಳಿವಿನ ಮಾರ್ಗದಿಂದ ದೂರವಾಗುವ ಸಂಭವ ಹೆಚ್ಚು. ಆತ್ಮೀಯ ಬಂಧುವರ್ಗೀಯರಲ್ಲಿ ಅಭಿಮಾನ-ಗರ್ವದರ್ಪಗಳನ್ನು ಮೆರೆಯಿಸಿ ಪ್ರತಿಷ್ಠೆಯ ಹೆಗ್ಗಳಿಕೆಗೆ ತೊಡಗದಿರಿ. ಗುಪ್ತ ನಿಗೂಢ ಕಾರ್ಯಗಳು ಕೇವಲ ಆರ್ಥಿಕ ಅಧಿಕಾರಭಾಗ್ಯ ಸುಖಕ್ಕಾಗಿಯಲ್ಲವೇ? ಈ ರಾಶಿಯ ಲಗ್ನದವರಿಗೆ ಕರ್ಮದ ಗುರುಯೋಗ ಯಶಸ್ಸಿನ ನೆಲೆಯನ್ನು ಜನವರಿಯ ಮೇಲಣ ಕಾಲದಲ್ಲಿ ಉಂಟುಮಾಡಲಿರುವನು. ರಾಜಕೀಯಗಳಲ್ಲಿದ್ದವರಿಗೆ ಶನಿಯೋಗವು ಚೆನ್ನಾಗಿದ್ದು, ಗುರು ಶನಿಗಳು ದೀರ್ಘದರ್ಶಿತ್ವದ ಕರ್ಮಗಳಿಗೆ ಇಳಿಸಿ, ಘನತೆಗೆ ತರಲಿರುವುದು. ಐವತ್ತೈದು ಹರೆಯದ ಮೇಲಣದವರಿಗೆ ಈಗಣ ಶನಿಚಾರ ಹಿತಕರವಲ್ಲ. ದ್ವಿಭಾರ್ಯಾ ಯೋಗವಿದ್ದವರಿಗೆ ಈ ಕಾಲ ಹೆಂಡತಿಯ ಸುಖಕ್ಕೆ ಹಾನಿಕರ, ಮಕ್ಕಳ ಸುಖಕ್ಕೂ ಅನಿಷ್ಟಕರ. ಪಾಲುಗಾರಿಕೆಯ ವ್ಯವಸಾಯದವರೊಳಗೆ ಭೇದಕ್ಕೆಡೆಯಿದೆ. ಗೆಳೆಯರು ದೂರಸರಿವರು. ಹೀಗಿದ್ದರೂ ದರ್ಪವ, ತಾನು ತಿದ್ದಿಕೊಳ್ಳಲೂ ಸುವಿಚಾರಕ್ಕೆ ತೊಡಗಲೂ ಅಡ್ಡಿಯಾದೀತು.

## ಸಿಂಹ:

ಉತ್ಕೃಷ್ಟವಾದ ಜೀವನದ ನೆಲೆಗೊಳಿಸುವಿಕೆಗಿರುವ ಧ್ಯಾನ ವಿಚಾರಕರ್ಮಗಳಿಂದ ಕೂಡಿರುವಿರಿ. ಹಿಂದುಳಿದ ಕೆಲಸಗಳು ಮುಂದರಿದು, ಸರಿಗೊಳ್ಳುತ್ತವೆ; ಇದರಿಂದ ಮನಸ್ಸಿಗೆ ಹುರುಪುಂಟಾಗಿ, ಆತ್ಮವಿಶ್ವಾಸವೂ ಹೆಚ್ಚುವುದು; ಕಾರ್ಯಗಳನ್ನು ಸಾಧಿಸುವ ಧೈರ್ಯವೂ ಮೂಡಿಬರುವುದು. ಮಹತ್ವದ ಆಶೆ, ಇಚ್ಛಾ ಕಾರ್ಯಗಳು ಸಾಧಾರಣ ರೀತಿಯಿಂದ ಸಫಲಗೊಳ್ಳುತ್ತವೆ. ವ್ಯವಸಾಯ ಬಂಧುಗಳಿಂದ ಗೌರವಸಿದ್ಧಿಯಿದೆ. ಉದ್ಯೋಗವ್ಯವಸಾಯದಲ್ಲಿ ಯಶಸ್ಸು ಪ್ರಾಪ್ತಿ. ಕುಟುಂಬದಲ್ಲಿ ಪಾಲುಗಾರಿಕೆಯ ಸಂಘಟನೆ ಇರಬಹುದು, ಪ್ರವಾಸಗಳಿರಬಹುದು. ರಾಹು ಈ ಫಲಗಳನ್ನು ಕೊಡುವುದರೊಂದಿಗೆ ಗುರು ಶುಭಕಾರ್ಯಗಳ ಸಂಘಟನೆಮಾಡುವನು. ಲೇಖನ ವ್ಯವಸಾಯದವರಿಗೂ, ಬೋಧಕರಿಗೂ, ಪತ್ರಿಕಾಸಂಪಾದಕರಿಗೂ ಈ ಗುರು ಹಿತಕಾರಕನು. ಸಹೋದರರಲ್ಲಿ ಅನಿಷ್ಟಸ್ಥಿತಿ ಕಂಡುಬಂದೀತು. ನಿಮ್ಮ ಜನ್ಮಮಾಸ ಮತ್ತು ಅದರ ಏಳನೇ ಮಾಸಗಳಲ್ಲಿ ಖರ್ಚು, ಮಾನಸಿಕ ಅಶಾಂತಿಯುಂಟಾಗುತ್ತವೆ. ದೇಹಾರೋಗಕ್ಕೂ ಈ ಕಾಲ ಒಳ್ಳೆಯದಲ್ಲ. ತರುಣ-ತರುಣಿಯರಿಗೆ ಈ ಗುರು ದಾಂಪತ್ಯ ಸುಖ-ಸಂತಾನ ಸುಖಕ್ಕೆ ಅವಕಾಶಕೊಡುವನು. ವಾಹನಾದಿ ಸುಖ ಪ್ರಾಪ್ತಿಯಿದೆ.

## ಕನ್ಯಾ:

ಒಳಿತು-ಕೆಡಕುಗಳೂ ಸುಖ-ದುಃಖಗಳೂ ಹಗಲಿರುಳುಗಳಂತೆ. ಪರರಿಗೆ ದುಃಖವನ್ನಿತ್ತು, ತಾನು ಸುಖಪಡೆವ ಅಭಿಲಾಷೆ ಏಳುವುದು ಚೆನ್ನಲ್ಲ; ದ್ವೇಷಾಗ್ನಿಗೆ ದಾರಿಯಾಗುವುದು. ನಿಮ್ಮ ಮನಸ್ಸು ಮತ್ತು ಶ್ರಮಗಳು ಒಳ್ಳೆಯದನ್ನು ಮಾಡುವ ಕರ್ಮದಿಂದ ದೂರವಾಗುವವು—ಎಂಟನೇ ಗುರುರಾಯನು ಇದನ್ನು ಮಾಡಿಸುವುದರಿಂದ, ಈ ವಿಚಾರದಲ್ಲಿ ಎಚ್ಚರಗೊಂಡು ನಡೆದರೆ ಸುಖಸಿದ್ಧಿಯಾಗುವುದು. ದ್ವಿತೀಯದ ರಾಹು ಆಕಸ್ಮಿಕ ಕಷ್ಟಗಳನ್ನುಂಟುಮಾಡುವನು. ವಿನಾಕಾರಣ ವಿರೋಧ ಘಟನೆ ಜನತೆಯಲ್ಲಿ ಕಂಡೀತು. ಉದ್ಯೋಗದವರು ಸ್ಥಾನಾಂತರಹೊಂದುವರು. ಉದರದೋಷಗಳು ತೋರಬಹುದು. ಕುಟುಂಬದಲ್ಲಿ ಅನಾ

(14ನೇ ಪುಟಕ್ಕೆ ಮುಂದುವರಿದಿದೆ)

# ವರ್ಷಭವಿಷ್ಯ

(13ನೇ ಪುಟದಿಂದ)

ರೋಗ್ಯವಿದ್ದೀತು. ಸ್ಥಳಾಂತರ, ಪ್ರವಾಸ ಘಟನೆಗಳು ತೋರಿಬರುವುವು. ಕೋರ್ಟು ವ್ಯವಹಾರಗಳು ಮುಂದುವರಿವುವು. ಋಣವ್ಯವಹಾರಗಳು ಹೆಚ್ಚುತ್ತವೆ. ಆಕಸ್ಮಿಕ ಧನಲಾಭವಾಗುವುದು. ನಿಮ್ಮ ವಿರೋಧಿಗಳು ತಾವಾಗಿಯೇ ದೂರಸರಿವರು. ಮಿತ್ರವರ್ಗದ ಕೂಡಿಕೆಯಿದೆ. ನಿಮಗೆ ರವಿ ಚಂದ್ರ ಕುಜ ಬುಧ ಶುಕ್ರರು ಎಂಟರಲ್ಲಿ ಬಂದಾಗ ವಿಶೇಷ ಫಲದವರಾಗುವುದಿಲ್ಲ. ಕನ್ಯಾ ಕುಜಚಾರದಲ್ಲಿ ದೇಹಾರೋಗ್ಯಕ್ಕೆ ತ್ರಾಸಘಟನೆಯಾಗುವುದು. ಈ ವರ್ಷ ಜೀವನದಲ್ಲಿ ಹಲವಾರು ಬದಲಾವಣೆಗಳ ನೆಲೆಯಿದೆ.

## ತುಲಾ:

ನಿಮ್ಮ ಅಧಿಕಾರಸೂತ್ರದಲ್ಲಿ ಆಡಳಿತದಲ್ಲಿರಬೇಕಾದ ತಿಳಿವನ್ನು ಪೂರ್ಣಗೊಳಿಸಿ, ಅಭಿವೃದ್ಧರಾಗಲಿರುವಿರಿ. ಉದ್ಯಮಗಳು ಲಾಭದಾಯಕವಾಗಿ ಸಂಭವಿಸುವುವು. ಕುಟುಂಬದ ಆರೋಗ್ಯದ ನೆಲೆ ಚೆನ್ನಾಗಿರುವದು. ಸ್ಪರ್ಧೆಗಳಲ್ಲಿ ಎದುರಾಳಿಗಳನ್ನು ಜಯಿಸುವಿರಿ. ದೊಡ್ಡ ಮನುಷ್ಯರ ಸ್ನೇಹ, ಪರಿಚಯಗಳಾಗುವುವು. ಹಿಡಿದ ಕಾರ್ಯಗಳಲ್ಲಿ ಜಯಸಿದ್ಧಿ. ವಿದ್ಯಾರ್ಥಿಗಳಿಗೆ ಶಿಕ್ಷಣದಲ್ಲಿ ಪ್ರಗತಿ. ಉದ್ಯೋಗದವರಿಗೆ ಸ್ಥಾನಭಡತಿ; ವರಿಷ್ಠರು ಸಂತುಷ್ಟರಾಗುವರು. ಪಾಲುಗಾರಿಕೆ, ಸಟ್ಟಾ ವ್ಯವಸಾಯಗಳು ಅನುಕೂಲವಲ್ಲ, ಕೆಡುಕೇ ಹೆಚ್ಚು. ವಿವಾಹಿತ ತರುಣ-ತರುಣಿಯರಿಗೆ ಸಂತಾನ ಸುಖ ಉಂಟಾಗಲಿದೆ. ಕೋರ್ಟು ವ್ಯವಹಾರಗಳು ಪ್ರತಿವಾದಿಗಳ ತೊಡಕಿನಿಂದಲೇ ಹಿಂದುಳಿದು, ಇಷ್ಟದಂತೆ ಕೊನೆಗೊಳ್ಳುವುವು. ಜನರ ಸಹಾಯ, ಪರರಿಗೆ ಶುಭಕಾರ್ಯಗಳಿಗೆ ನೆರವಾಗುವಿಕೆಗಿರುವ ಸಂಘಟನೆಗಳಿವೆ. ವ್ಯಾಪಾರಿಗಳಿಗೆ ಈ ವರ್ಷದ ಆದಿಭಾಗಕ್ಕಿಂತ ಅಂತ್ಯಭಾಗ ಶ್ರೇಯಸ್ಕರ. ವೈದ್ಯಕೀಯ ವ್ಯವಸಾಯದವರಿಗೆ ಉನ್ನತಿ, ಆರ್ಥಿಕ ಹಾಗೂ ಯಶಸ್ಸಿನ ದೃಷ್ಟಿಯಿಂದ ಕೂಡಿಬರುವ ಕಾಲವಿದು. ಯಾಂತ್ರಿಕ ಮತ್ತು ಕಲಾವ್ಯವಸಾಯಿಗಳಿಗೂ ಪ್ರಗತಿಕರ.

## ವೃಶ್ಚಿಕ:

ದಾಂಪತ್ಯಜೀವನದವರಿಗೆ ಪತಿ ಯಾ ಪತ್ನಿಯರಲ್ಲಿ ದೇಹಾರೋಗ್ಯಕ್ಕೆ ತೊಡಕುಂಟಾದೀತು. ಸತ್ಕಾರ್ಯಗಳು ನಡೆಯಲಿವೆ. ವ್ಯಾಪಾರ, ಉದ್ಯೋಗಗಳ ನೆಲೆಗಳು ಉತ್ತಮವಾಗಿರುವುವು. ನೌಕರರಿಗೆ ಉನ್ನತಿಯಿದೆ. ಆರರ ಗುರು ಎದುರಾಳಿಗಳನ್ನು ಜಗ್ಗಿಸುವನು, ಇಲ್ಲವೇ ಶರಣಾಗತಿಗೆ ತರುವನು. ಪ್ರತಿಸ್ಪರ್ಧಿಗಳನ್ನು ಎದುರಿಸಿ ಮೇಲಕ್ಕೆ ಬರುವ ಯಶಸ್ಸು ನಿಮ್ಮದಾಗುವುದು. ದೇಹಪ್ರಕೃತಿಯಲ್ಲಿ ಸುಧಾರಣೆ. ಋಣಪರಿಹಾರದಿಂದ ನಿಶ್ಚಿಂತರಾಗುವಿರಿ. ನವಮದ ಶನಿ ಕರ್ಕಟಕದವ, ನಿಮಗೆ ಶುಭನಾಗಿ, ಜನ್ಮನಾ ಶುಭನಾಗಿದ್ದರೆ ಯಶಸ್ಸೇ ಕೊಡುವನು. ಹೊಸ ಉದ್ಯೋಗವಿಚಾರ ಕಲ್ಪನೆಗಳು ಬರುವುವು. ಉದ್ಯೋಗಿಗಳಿಗೆ, ಎಣಿಸಿದ ಸ್ಥಾನಕ್ಕೆ ಬದಲಾವಣೆಯಾಗುವುದು. ವಿವಾಹಿತ ತರುಣದಂಪತಿಗಳಿಗೆ ಸಂತತಿಲಾಭವಿದೆ. ಸಹೋದರ-ಸಹೋದರೀ ವರ್ಗೀಯರಲ್ಲಿ ಅನಾರೋಗ್ಯ, ಕಷ್ಟಸಂಪರ್ಕಗಳು ತೋರಿಬರುವುವು. ಸಹೋದರರಲ್ಲಿ ಐಕ್ಯವಿಲ್ಲ, ವಿಶ್ವಾಸವಂಚನಾ ಸಂಭವ. ಉದ್ಯೋಗ ಸಾಧಾರಣ. ಲೇಖನ-ಪ್ರಕಾಶನದವರಿಗೆ ಈ ವರ್ಷ ಉತ್ತಮ. ವಕೀಲವೃತ್ತಿಯವರಿಗೆ, ವ್ಯಾಪಾರಸಂಸ್ಥಾ ವ್ಯವಸಾಯಿಗಳಿಗೆ ಪ್ರಗತಿ.

## ಧನು:

ನೀವು ನಿಮ್ಮ ಹಿತ ಇಷ್ಟವಾದವನ್ನು ಇಚ್ಛಿಸುವವರು. ಹಿತ ಇಷ್ಟಗಳಿಗೆ ಬೇಕಾದ ಕರ್ಮಶಕ್ತಿ ಇರದೆ ಕಷ್ಟಕ್ಕೊಳಗಾಗುವಿರಿ. ದೊಡ್ಡ ವಿಚಾರ-ಧ್ಯೇಯಗಳಿಂದ ಕೂಡಿರುವಿರಿ; ಅವು ಸ್ವೋನ್ನತಿಸಾಧಕಗಳಾಗಿದ್ದರೂ, ನಿಮ್ಮ ಕರ್ಮಪಥದಲ್ಲಿ ನೈತಿಕದ ನೆಲೆ ತಪ್ಪಿರುವುದರಿಂದ, ಅಯಶಸ್ವಿಯಾಗುವಿರಿ. ಸತ್ಯ ನ್ಯಾಯಗಳಿಂದ ವಿರಹಿತರಾಗಿ ಕಾಣಬರುವಿರಿ. ರಿಕಾರ್ಡು ವ್ಯವಹಾರಗಳು, ಕೋರ್ಟು ವ್ಯವಹಾರಗಳು ಭಿನ್ನಭಿನ್ನ ರೀತಿಯಿಂದ ನಡೆವುವು. ಎಂಟರ ಶನಿರಾಯನು ನಿಮಗೆ ಪ್ರತಿಕೂಲನಾಗಿರುವನು. ಗುರು ಶನಿಗೆ ನೋಡುತ್ತಿರುವುದರಿಂದ ನಿಮ್ಮ ವ್ಯವಸಾಯಕ್ಕೆ ತೊಡಕಾಗದೆ ಇರುವಿಕೆ ದೈನಿಕ ಜೀವನಕ್ಕಿರುತ್ತದೆ. ವಿದ್ಯಾಜೀವನದವರಿಗೆ ಪ್ರಗತಿಯಿದೆ. ತರುಣ-ತರುಣಿಯರಾದ ದಾಂಪತ್ಯ ಜೀವನದವರಿಗೆ ಸಂತಾನ ಸುಖಲಾಭ. ತರುಣರಲ್ಲಿ ಉದ್ಯೋಗಕ್ಕಿರುವ ಸಂಪರ್ಕವಿದ್ದು, ಜನ್ಮಸ್ಥಳದಿಂದ ದೂರಗತರಾಗಿ ಉದ್ಯೋಗಹೊಂದುವರು. ಎಪ್ರಿಲ್-ಮೇ ತಿಂಗಳುಗಳು ನಿಮಗೆ ಒಳ್ಳೆಯವು. ವ್ಯಾಪಾರಿಗಳಿಗೆ ಅಭಿವೃದ್ಧಿ ಕಂಡೀತು. ನೌಕರರಿಗೆ ಗೃಹ ವಾಸಸ್ಥಾನಗಳ ಬದಲಾವಣೆ ಉಂಟಾಗಬಹುದು.

## ಮಕರ:

ಏಳರ ಶನಿರಾಯನು ಚೆನ್ನಾಗಿ ಸಂಪತ್ತಿನ ಸುಖಲಾಭ ಕೊಡುವನು. ದೂರಪ್ರವಾಸಾಸಕ್ತಿಯಿದೆ. ಹೊಸ ಉದ್ಯಮಗಳಿಗೆ ಕೈನೀಡಿ, ಊರ್ಜಿತಕ್ಕೆ ಬರುವಿರಿ. ಕೋರ್ಟುವ್ಯವಹಾರಗಳು ನಿಮಗೆ ಅನುಕೂಲವಾಗಿಯೇ ಕೊನೆಗೊಳ್ಳುವುವು. ನಷ್ಟಧನಸಂಪತ್ತನ್ನು ಮರಳಿ ಹೊಂದುವ ಕಾಲವಿದು. ಕೆಲಸದಲ್ಲಿ ಉನ್ನತಿಯಿದೆ. ವರಿಷ್ಠರೊಡನೆ ತಾಕಲಾಟವಿದ್ದರೂ ಜಯವಿದೆ. ಕುಟುಂಬದಲ್ಲಿನ ಅನಾರೋಗ್ಯಯುಕ್ತರು ದೇಹಾರೋಗ್ಯ ಹೊಂದುವರು. ಕುಟುಂಬದಲ್ಲಿ ಸತ್ಕಾರ್ಯಗಳಾಗಲಿವೆ. ಸಟ್ಟಾ, ಪಾಲುದಾರಿಕೆ ವ್ಯವಸಾಯಗಳು ಲಾಭದಾಯಕಗಳಾಗಿ ನಡೆವುವು. ದೂರಗತ ಬಂಧುಗಳ ಸುಖವಾರ್ತೆ ಕೇಳುವಿರಿ. ಅನ್ಯರಿಗೆ ಶುಭಕಾರ್ಯಗಳಿಗೆ ನೆರವಾಗುವಿರಿ. ಶಿಕ್ಷಣೇಚ್ಛುಗಳಲ್ಲಿ ಉಚ್ಚ ಶಿಕ್ಷಣಾಸಕ್ತಿ ಹೆಚ್ಚಿ, ಯಶಸ್ವಿಯಾಗುವುದು. ನಾಲ್ಕರ ಗುರು ಗೃಹ ಭೂಸಂಪತ್ತಿನ ವ್ಯವಸಾಯಗಳಿಗೆ ವ್ಯಯಮಾಡಿಸುವನು, ಅವನಿಂದಲೇ ಇವುಗಳ ತಾಕಲಾಟ. ನೌಕರರಿಗೆ ಅಪೇಕ್ಷಿತ ಸ್ಥಾನಪ್ರಾಪ್ತಿ, ಗೆಳೆಯರ ಸಹಾಯ. ಕೃಷಿಸಂಪತ್ತಿನ ವೃದ್ಧಿ. ವ್ಯಾಪಾರಿಗಳಿಗೆ ಲಾಭಕರ ವರ್ಷ.

## ಕುಂಭ:

ಎದುರಾಳಿಗಳು ಪರಾಜಯಹೊಂದುವರು. ದೊಡ್ಡದೊಡ್ಡ ಪ್ರತಿಸ್ಪರ್ಧಿಗಳನ್ನೆದುರಿಸಿ ಯಶಸ್ವಿಗಳಾಗುವಿರಿ. ದೇಹಾರೋಗ್ಯ ಉತ್ತಮ. ಋಣನಿವೃತ್ತಿಗಿರುವ ವ್ಯವಸಾಯಯುಕ್ತರಾಗಿ ಕಂಡುಬರುವಿರಿ. ಹೊಸ ಉದ್ಯೋಗ ವ್ಯವಸಾಯ ಸಂಪರ್ಕವಾಗಲಿದೆ. ನೌಕರರಿಗೆ ಭಡತಿಯಿದೆ. ಐವತ್ತಾರು ವರ್ಷಗಳ ಮೇಲಿನವರಲ್ಲಿ ದೇಹಾರೋಗ್ಯಕ್ಕೆ ತ್ರಾಸದಾಯಕ ಸ್ಥಿತಿ ಕಂಡುಬರುವಂತಿದೆ. ಗುರು ನಿಮ್ಮ ಅಧಿಕಾರಕರ್ಮಗಳಿಗೆ ಯಾವ ಧಕ್ಕೆಯನ್ನೂ ಉಂಟುಮಾಡದೆ, ಒಳಿತನ್ನೆ ತರುವನು. ಕುಟುಂಬದಲ್ಲಿ ಶುಭಕಾರ್ಯ, ಸಂತಾನಸುಖಪ್ರಾಪ್ತಿಗಳಾಗಲಿರುತ್ತವೆ. ಲೇಖನವ್ಯವಸಾಯಿಗಳಿಗೆ ಈ ವರ್ಷ ಉತ್ತಮ. ಅಧಿಕಾರೀ ಜನರು ಸಂತುಷ್ಟರಾಗಿರುವರು. ವಿದ್ಯಾರ್ಥಿಗಳಿಗೆ ದಸಂಬರ ಮೇಲಣ ಕಾಲದಲ್ಲಿ ಶುಭ. ವಾಸಸ್ಥಾನದ ದುರಸ್ತಿಗೆ ಒಳ್ಳೇ ಕಾಲ. ವೈದ್ಯಕೀಯ ಮತ್ತು ಯಾಂತ್ರಿಕ ವೃತ್ತಿಯವರಿಗೆ ಈ ವರ್ಷ ಅತ್ಯುತ್ತಮವೇ ಆಗಿದೆ. ಪ್ರವಾಸಗಳಿರುವುವು.

## ಮೀನ:

ಉತ್ತಮವಾದ ತಿಳಿವಿನ ಶಕ್ತಿ-ಕರ್ಮಗಳಿಂದ ಕೂಡಿದವರಾಗಿರುವಿರಿ. ಹಿರಿಯರ ಸಂಪತ್ತಿನ ಪ್ರಗತಿಯಿದೆ. ಉದ್ಯೋಗ ವ್ಯವಸಾಯದಲ್ಲಿ ಕ್ರಮಾನುಗತ ಉತ್ಪತ್ತಿಯು ಹೆಚ್ಚಳವಾಗುವುದು. ಭೂಸಂಪತ್ತಿನ ರಿಕಾರ್ಡು ವ್ಯವಹಾರಗಳು ನಡೆಯಲಿವೆ. ಮನೆಯಲ್ಲಿ ಅಸ್ವಸ್ಥದವರು ಯಾರಾದರೂ ಇರುವರು. ಸಾಲದ ವ್ಯವಹಾರಗಳಿರುವುವು—ಈ ಫಲವು ಗುರುವಿನಿಂದ ಇರುತ್ತದೆ. ಪಂಚಮದ ಶನಿಯು ಸಂತಾನಸುಖದಾಯಕನಾಗಿರುವನು. ಶಿಕ್ಷಣದಲ್ಲಿ ವಿದ್ಯಾರ್ಥಿಗಳಿಗೆ ಉನ್ನತಿ. ತರುಣರಿಗೆ ಅಧಿಕಾರ ಸ್ಥಾನಮಾನಗಳಿವೆ. ಭೂಸಂಪತ್ತಿನ ಬದಲಾವಣೆಯ ಆಸಕ್ತಿ ಕಂಡುಬರುವುದು. ಸಟ್ಟಾ, ಪಾಲುಗಾರಿಕೆಯ ವ್ಯವಸಾಯಿಗಳಿಗೆ ಆಕಸ್ಮಿಕ ವೃದ್ಧಿ ಕಂಡುಬರುವುದು. ರಾಹುವಿನಿಂದ ಪುತ್ರಸಂತತಿ ಯೋಗ ಇದೆಯಾದರೂ, ಶಿಶುವಿಗೆದೋಷಫಲ ಉಂಟಾಗದಂತೆ ಜಾಗರೂಕತೆ ಅವಶ್ಯ. ದೂರ ಪ್ರವಾಸಾಸಕ್ತಿ ಇರುತ್ತದೆ. ತೋಟಗಾರಿಕೆ ಕೃಷಿ ವ್ಯವಸಾಯಿಗಳಿಗೆ ಈ ವರುಷ ಉತ್ಪತ್ತಿಯು ಹೆಚ್ಚಳ ಶುಭಕಾರ್ಯಗಳು ನಡೆಯಲಿವೆ.

ನಾವು ನಿರ್ಮಿಸುವ ಶಾಸನಕ್ಕೆ ನಾವು ವಿಧೇಯರಾಗಿರುವುದೇ ಸ್ವಾತಂತ್ರ್ಯ.

—ಜೆ. ಜೆ. ರೂಸ್ಸೋ.

ಸ್ವಾತಂತ್ರ್ಯವೆಂದರೆ ಹೊಣೆಗಾರಿಕೆ; ಅದುಕಾರಣವೇ ಬಹುಜನರು ಅದಕ್ಕೆ ಹೆದರುತ್ತಾರೆ.

—ಜಾರ್ಜ್ ಬರ್ನಾರ್ಡ್ ಷಾ.

# ನಮ್ಮ ಯುವಕ ಸಂಘ

[ಶ್ರೀ। ಸಿದ್ಧಕಟ್ಟೆ ಚಂದ್ರರಾಜ ಸೆಟ್ಟಿಯವರ ಒಂದು ಅನುಭವ]

★



> ಯುವಕರಿಗೆ ಆಟವೂ ಬೇಕು, ಪಾಠವೂ ಬೇಕು. ಆದರೆ, ಅನೇಕವೇಳೆ, ಉತ್ತಮ ಸಾಹಿತ್ಯವನ್ನೋದುವುದಕ್ಕಿಂತ ಆಟೋಟಗಳಿಗೇ ಅಧಿಕ ಲಕ್ಷ್ಯವನ್ನಿತ್ತು, ತಮ್ಮ ಸಂಘದ ಉದ್ದೇಶದಲ್ಲಿ ಪ್ರಾಮುಖ್ಯವಾದಂಥ ವಾಚನವನ್ನು ಪೂರ್ಣ ನಿರ್ಲಕ್ಷಿಸಿ, ಸಂಘವನ್ನು ಆಟಗಳ ಚಟುವಟಿಕೆಗಳಿಗೇ ಉಪಯೋಗಿಸುವವರಿದ್ದಾರೆ. ಶ್ರೀ। ಚಂದ್ರರಾಜ ಸೆಟ್ಟರು ಇಂಥ ಒಂದು ಉದಾಹರಣೆಯನ್ನಿಲ್ಲಿ ಹೇಳುತ್ತಾರೆ.

ಕೆಲವು ವರ್ಷಗಳ ಹಿಂದೆ ನಾನು ಸಿದ್ಧಕಟ್ಟೆಯಲ್ಲಿ ಹಲವು ಯುವಕರನ್ನು ಒಟ್ಟುಗೂಡಿಸಿ ಒಂದು ಯುವಕ ಸಂಘವನ್ನು ಸ್ಥಾಪಿಸಿದೆನು. ಪಂಚಾಯತ ಅಧ್ಯಕ್ಷರನ್ನು ನಮ್ಮ ಸಂಘದ ಅಧ್ಯಕ್ಷರನ್ನಾಗಿಯೂ, ನನ್ನನ್ನು ಕಾರ್ಯದರ್ಶಿಯಾಗಿಯೂ ಆರಿಸಲಾಯಿತು. ಗ್ರಾಮಸ್ಥರ ಓದಿಗೆ ಅನುಕೂಲವಾಗಲೆಂದು ಒಂದು ಪುಸ್ತಕಭಂಡಾರವನ್ನು ಸ್ಥಾಪಿಸಿ, ಪ್ರತಿ ತಿಂಗಳಲ್ಲೂ ಕೆಲವು ಪುಸ್ತಕಗಳನ್ನು ತರಿಸುತ್ತ, ಅದರ ಪ್ರಯೋಜನವು ಗ್ರಾಮಸ್ಥರಿಗೆ ಸಿಗುವಂತೆ ಆಸಕ್ತಿಯಿಂದ ದುಡಿಯುತ್ತಿದ್ದೆನು.

ಆಗ ಬಂಟ್ವಾಳ ಸಮಾಜ ವಿಸ್ತರಣಾ ಅಭಿವೃದ್ಧಿ ಮಂಡಲಿಯವರು ತಮ್ಮ ಕಾರ್ಯಕ್ಷೇತ್ರದೊಳಗಿರುವ ಯುವಕ ಸಂಘಗಳಿಗೆ ಮೂರು ತಿಂಗಳಿಗೊಮ್ಮೆ ಐವತ್ತು ರೂಪಾಯಿಗಳಿಗೆ ಮೀರದಂತೆ ಆ ಸಂಘದವರು ಖರ್ಚುಮಾಡಿದ ಹಣದ ಅರ್ಧಾಂಶವನ್ನು ಕೊಡುತ್ತಿದ್ದರು. ಆದರೆ, ಅವರ ಹಣವು ದೊರೆಯಬೇಕಾದರೆ, ಸಂಘದ ಕಾರ್ಯದರ್ಶಿಯು, ಅದರ ಮೆಂಬರರ ಸಂಖ್ಯೆ, ಆ ತಿಂಗಳಲ್ಲಿ ಸೇರಿದ ಸಭೆಗಳ ಸಂಖ್ಯೆ, ಖರ್ಚುಮಾಡಿದ ಹಣದ ರಶೀದಿ ಮೊದಲಾದವುಗಳನ್ನು ಪ್ರತೀ ತಿಂಗಳ ಮೊದಲಿನ ವಾರದಲ್ಲಿ ಅವರಿಗೆ ಕಳುಹಿಸಬೇಕಾಗಿತ್ತು.

ದಿನ ಹೋದಂತೆ ನಮ್ಮ ಸಂಘದ ಚಟುವಟಿಕೆಗಳು ಹೆಚ್ಚುತ್ತ ಹೋದುವಲ್ಲದೆ, ಉತ್ತಮವಾಗಿ ಕಾರ್ಯವೆಸಗುವ ಯುವಕ ಸಂಘಗಳಲ್ಲಿ ಇದೊಂದು—ಎಂಬ ಹೆಸರು ಪಡೆಯಿತು. ಬೇಸಿಗೆಯಲ್ಲಿ ಕೆಲವರು "ವಾಲಿಬಾಲ್" ಆಟವನ್ನು ಪ್ರಾರಂಭಿಸಿದರು.

ಸುಮಾರು ಒಂದೆರಡು ವರ್ಷಗಳ ತನಕ ಸರಿಯಾಗಿ ನಡೆಯುತ್ತಿದ್ದ ಯುವಕ ಸಂಘದ ಮಾಸಿಕ ಸಭೆಗಳಿಗೆ ಹಾಜರಾಗುವ ಸದಸ್ಯರ ಸಂಖ್ಯೆಯು ಕಡಿಮೆಯಾಗುತ್ತ ಬಂದು, ವಾಲಿಬಾಲ್ ಆಡುವವರ ಸಂಖ್ಯೆಯು ಬೆಳೆಯುತ್ತ ಬಂತು. ಕೊನೆಗೆ ಎಷ್ಟು ಬಾರಿ ನೋಟೀಸು ಕೊಟ್ಟರೂ, ಸದಸ್ಯರಾರೂ ಸಭೆಗೆ ಹಾಜರಾಗದಾದರು.

ನಾನು ಬಂಟ್ವಾಳಕ್ಕೆ ಪ್ರತಿ ತಿಂಗಳೂ ಸಂಘದಲ್ಲಿ ಸೇರಿದ ಸಭೆಗಳ ಸಂಖ್ಯೆಯನ್ನೂ, ಅದರಲ್ಲಿ ಭಾಗವಹಿಸಿದ ಸದಸ್ಯರ ಸಂಖ್ಯೆಯನ್ನೂ, ಖರ್ಚಾದ ಹಣದ ರಶೀದಿಗಳನ್ನೂ ಕಳುಹಿಸುವ ಅಗತ್ಯವಿತ್ತು. ಹಾಗೆ ಕಳುಹಿಸದೆ ಹೋದರೆ, ಅವರ ಸಹಾಯವು ಸಿಕ್ಕುವ ಹಾಗಿರಲಿಲ್ಲ.

ನಾನು ಕಾರ್ಯದರ್ಶಿಯಾಗಿರುವಷ್ಟು ಸಮಯ ಈ ಸಂಘವು ಸಾಯಬಾರದು. ಅದಕ್ಕೇನು ಮಾಡಲಿ? ಪ್ರತೀ ತಿಂಗಳು ಲೆಖ್ಖವನ್ನು ಕಳುಹಿಸದೆ ಹೋದರೆ, ಉಚಿತವಾಗಿ ದೊರೆಯುವ ಸಹಾಯಧನವೂ ಸಿಗದೆ ಹೋಗುತ್ತದೆ ಎಂದು ಯೋಚನಾಪರನಾದ ನಾನು, ನಾನು ಕಟ್ಟಿದ ಸಂಘಕ್ಕೆ ಜೀವದಾನಮಾಡುವ ಮನಸ್ಸಿನಿಂದ ಆ ತಿಂಗಳು ಸಭೆಯು ನಡೆಯದಿದ್ದರೂ, ನಡೆದಿದೆ ಎಂದು ತೋರಿಸುತ್ತ, ನಾನೇ ಲೈಬ್ರೆರಿಯ ಪುಸ್ತಕಗಳನ್ನು ತರಿಸುತ್ತ ಮೂರು ತಿಂಗಳ ಕಾಲ ನಡಿಸಿದೆನು. ಮೂರು ತಿಂಗಳ ಅಂತ್ಯದಲ್ಲಿ ನಾನು ತರಿಸಿದ ಪುಸ್ತಕಗಳ ಅರ್ಧ ಮೌಲ್ಯ ಮೊದಲಾದವು ಇಪ್ಪತ್ತು ಮೂವತ್ತು ರೂಪಾಯಿಗಳು ನನ್ನ ಹೆಸರಿಗೆ ಮನಿಯಾರ್ಡರಾಗಿ ಬಂತು.

ನನ್ನ ವಯಸ್ಕರ ಶಾಲೆಯನ್ನು ಜೀವಂತವಾಗಿ ಸಮಾಧಿ ಮಾಡಿದ ಶ್ರೀ। ಮಹಾಶಯರು ಕೂಡಾ ಆ ಸಂಘದ ಸದಸ್ಯರಾಗಿದ್ದರು. ನನಗೆ ಬಂಟ್ವಾಳದಿಂದ ಹಣ ಬಂದ ವಿಷಯ ಅವರ ಕಿವಿಗೆ ಬಿದ್ದೊಡನೆ, ಅವರು ನಾನಿದ್ದಲ್ಲಿಗೆ ಓಡಿಬಂದು "ನಮ್ಮ ಸಂಘಕ್ಕೆ ಹಣಬಂದಿದೆಯಂತೆ. ನಮ್ಮ ವಾಲಿಬಾಲಿನ ಬಲೆಯು ಪೂರ್ಣ ಜೀರ್ಣವಾಗಿದೆ. ಇನ್ನು ಹೊಸತು ತಾರದೆ ಆಡಲು ಸಾಧ್ಯವಿಲ್ಲ. ಆ ಹಣ ಇಲ್ಲಿ ಕೊಡಿ" ಎಂದರು. ನಾನು ಸಾವಧಾನವಾಗಿ, "ಸ್ವಾಮೀ! ನಿಮ್ಮ ಯುವಕ ಸಂಘದ ಹಣ ನನಗೆ ಸಿಕ್ಕಿಲ್ಲ. ನಾನು ಸಂಘಕ್ಕಾಗಿ ಕೈಯಿಂದ ಹಣಹಾಕಿ ತರಿಸಿದ ಪುಸ್ತಕಗಳ ಮೌಲ್ಯದ ಅರ್ಧಹಣ ನನಗೆ ಸಿಕ್ಕಿದೆ, ಈಗ ಅದು ಸಂಘದ ಹಣವಲ್ಲ, ನನ್ನ ಸ್ವಂತ ಹಣ" ಎಂದೆನು.

ಶ್ರೀ। ಮಹಾಶಯರು ಸದಸ್ಯರ ಸಭೆ ಸೇರಿಸಿದರು, ಅಧ್ಯಕ್ಷರಲ್ಲಿ ದೂರಿಟ್ಟರು, ನಾನು ಸಭೆಯ ಮುಂದೆ ನನ್ನ ಲೆಖ್ಖಪತ್ರಗಳನ್ನಿಟ್ಟು ವಿಷಯವನ್ನೆಲ್ಲ ವಿಸ್ತಾರವಾಗಿ ಹೇಳಿದೆ. ಸಭಾಧ್ಯಕ್ಷರು ಆ ಹಣವು ನನ್ನದಲ್ಲದೆ, ಸಂಘದ್ದಲ್ಲ ಎಂದು ತೀರ್ಪನ್ನಿತ್ತರು.

ಕೆಲವು ದಿನಗಳಲ್ಲೇ ನಾನು ಉಪಾಯದಿಂದ ಸಂಘದ ಸದಸ್ಯರ ಸಭೆಯನ್ನು ಸೇರಿಸಿ, ಸಂಘದ ಪುಸ್ತಕಭಂಡಾರವನ್ನು ಪಂಚಾಯತ ಲೈಬ್ರೆರಿಗೆ ಕೊಡುವಂತೆ ನಿರ್ಣೈಸಿ, ಪುಸ್ತಕಗಳನ್ನು ಪಂಚಾಯತ ಲೈಬ್ರೆರಿಗೆ ಕೊಟ್ಟು, ನನ್ನ ಕಾರ್ಯದರ್ಶಿ ಹುದ್ದೆಗೆ ರಾಜಿನಾಮೆಯನ್ನು ಕೊಟ್ಟು ಕೈ ತೊಳೆದುಕೊಂಡೆ. ಇದಾಗಿ ವರ್ಷಗಳು ಹದಿನೈದು ಕಳೆದುಹೋದರೂ, ಇಂದಿಗೂ ನಮ್ಮ ಊರಲ್ಲಿ ಅಧಿಕೃತವಾದ ಯುವಕ ಸಂಘ ಒಂದೂ ಇಲ್ಲ.

—C—

ಸಣ್ಣ ಕತೆ

# ಸಮುದ್ರ ರಾಣಿ

ನನ್ನ ಕಣ್ಣನೋಟಗಳನ್ನು ಕಂಡು ಮನೆಯಲ್ಲಿ ಎಲ್ಲರೂ ಗೇಲಿಮಾಡುತ್ತಿದ್ದರು. ನನ್ನ ಕಣ್ಣುಗಳು ಯಂತ್ರದ ಗಾಲಿಗಳು ತಲ್ಲದಿದ್ದರೂ ಗಂಗಾಳಗಳಂತೆ, ಹ್ಯಾನ್ಸ್ ಆ್ಯಂಡರ್ಸನ್ನನ ನಾಯಿಯ ಕಣ್ಣುಗಳಂತಿವೆ ಯೆಂಬುದು ನನಗೆ ಗೊತ್ತಿತ್ತು. ಅದು, ಈಗಲೂ ನನ್ನ ನೆನಪಿನಲ್ಲಿದೆ. ಉಳಿದ ಹುಡು ಗಿಯರಿಗಿಂತಲೂ ನಾನೇ ಎತ್ತರವಾಗಿದ್ದೆ. ಅಂಗಳದಲ್ಲಿ ಜಗಳಕ್ಕೆ ಬರುತ್ತಿದ್ದ ಬೇರೆ ಮಕ್ಕಳು ನನ್ನನ್ನು "ಕೊಕ್ಕರೆ" ಎಂದೇ ಗೇಲಿಮಾಡುತ್ತಿದ್ದರು.

ಮನೆಯಲ್ಲಿ ಎಲ್ಲರೂ ನನಗೆ ಸಮಾಧಾನ ಹೇಳುತ್ತಿದ್ದರು. ಆದರೇನು? ಸತ್ಯವು ಸತ್ಯವೆ.

"ಚಿಂತಿಸಬೇಡ ಮಗು; ಇನ್ನೂ ಸ್ವಲ್ಪ ಎತ್ತರ ಬೆಳೆದರೆ ವಿದ್ಯುತ್‌ಕಂಬದ ಹಾಗೆ ನೀನು ಒಳ್ಳೇ ಕೆಲಸವನ್ನಾದರೂ ಮಾಡ ಬಲ್ಲೆ" ಎಂದು ಅಮ್ಮ ಸಮಾಧಾನ ಹೇಳು ತ್ತಿದ್ದಳು.

"ಅದೇನೋ ಸರಿ. ಆದರೆ ವಿದ್ಯುತ್ ಕಂಬವು ನಿಶ್ಚಲವಾಗಿರುತ್ತದಲ್ಲ" ಕಣ್ಣು ಅರಳಿಸುತ್ತ ಅಪ್ಪ ಹೇಳುತ್ತಿದ್ದರು. "ಹಾಗೆ ಮಾತ್ರ ನೀನು ಆಗಲಾರೆ ಅಂತ ಕಾಣು ತ್ತದೆ."

ಸೌಂದರ್ಯದಲ್ಲಿ ನಾನು ನವಜಾತ ಶಿಶು ವಿಗೆ ಮಾತ್ರ ಪ್ರತಿಸ್ಪರ್ಧಿಯಾಗಬಲ್ಲೆನೆಂಬು ದು ಬಹು ಬೇಗ ನನಗೆ ಹೊಳೆದಿತ್ತು. ಆದರೆ, ಪ್ರಾಮಾಣಿಕವಾಗಿ ಹೇಳಬೇಕೆಂ ದರೆ ಅದರಿಂದ ನಾನು ಕಿಂಚಿತ್ತೂ ವಿಚಲಿ ತಳಾಗಿರಲಿಲ್ಲ. ನಾನು ಮಾಡಬೇ ಕಾದ್ದು ಬಹಳಷ್ಟಿತ್ತು! ನಮ್ಮ ಅಂಗಳ ದಲ್ಲಿ ಮತ್ತು ನೆರೆಹೊರೆಯಲ್ಲಿ ಹುಡುಗಿ ಯರಿಗಿಂತ ಹುಡುಗರೇ ಹೆಚ್ಚಾಗಿದ್ದರು. ಅದು ಇನ್ನಿಷ್ಟು ಕುತೂಹಲಕಾರಿ. ಹುಡು ಗಿಯರನ್ನು ಕಟ್ಟಿಕೊಂಡು ಮಾಡುವು ದಾದರೂ ಏನು? ತಾಯಿ–ಮಗಳು ಅಥವಾ ಸ್ಕಿಪ್ಪಿಂಗ್ ರೋಪ್ ಆಟ ಬಿಟ್ಟ ರೆ ಅವರಿಗೆ ಬೇರೇನು ತಿಳಿದಿರುತ್ತದೆ? ಹುಡುಗರ ಜೊತೆಯಾದರೋ ಬೇಲಿಗ ಳನ್ನು ನೆಗೆಯಬಹುದು. ಅಟ್ಟಗಳನ್ನು ಏರ ಬಹುದು, ಮಾಳಿಗೆ ಏರಬಹುದು, ಮರ ಏರಿ ಕಥೆಗಳನ್ನು ಹೇಳುತ್ತ ಕೂರಬಹುದು. ಅಪ್ಪನ ಬಳಿ ರಾಶಿಗಟ್ಟಳೆ ಪುಸ್ತಕಗಳಿದ್ದವು.

"ಅಮೆಝೋನ್ ನದಿಯಲ್ಲಿ ಸಾಹಸಗಳು". "ರಹಸ್ಯ ದ್ವೀಪ" ಮೊದಲಾದ ಪುಸ್ತಕಗ ಳನ್ನು ಮಕ್ಕಳಲ್ಲಿ ಮೊದಲು ಓದಿದವಳೆಂ ದರೆ ನಾನೇ. ಹುಡುಗರು ತಮ್ಮ ಮಧ್ಯ ದಲ್ಲಿ ನನ್ನನ್ನೂ ಸೇರಿಸಿಕೊಂಡರು. ಅದಕ್ಕೆ ನಾನು ತುಂಬ ಹೆಮ್ಮೆಪಟ್ಟುಕೊಂಡೆ.

ಅಪ್ಪ ಮತ್ತು ಅಮ್ಮ ಬದುಕಿದ್ದರೆ ಏನಾಗಿರುತ್ತಿತ್ತು ಎಂದು ಹೇಳುವುದು ಕಷ್ಟ. ನಾನೇನೂ ಸ್ಫುರದ್ರೂಪಿಯಾಗಿರ ಲಿಲ್ಲ, ಆದರೂ ಅವರಿಗೆ ಮೆಚ್ಚಿನವಳಾ ಗಿದ್ದೆ! ಒಬ್ಬರಿಗೆ ಮೆಚ್ಚಿಕೆಯಾದರೆ ಮಿಕ್ಕ ದ್ದನ್ನು ತೆಗೆದುಕೊಂಡು ಮಾಡುವುದೇನು?

ಆದರೆ ಅಪ್ಪ ಮತ್ತು ಅಮ್ಮ ಬೇಗನೆ ತೀರಿಕೊಂಡರು, ನನಗೆ ಸಹೋದರರಾ ಗಲಿ. ಸಹೋದರಿಯರಾಗಲಿ, ಅಜ್ಜ–ಅಜ್ಜಿ ಯರಾಗಲೀ ಯಾರೂ ಇರಲಿಲ್ಲ. ನಾನು ಒಬ್ಬಳೇ; ಏಕಾಂಗಿ, ಚಿಕ್ಕಪ್ಪ-ಚಿಕ್ಕಮ್ಮ ರೇನೋ ನನ್ನನ್ನು ನೋಡಿಕೊಳ್ಳಲು ತಮ್ಮ ಲ್ಲೇ ಇಟ್ಟುಕೊಂಡರು. ಆದರೆ, ನನಗಿಂತ ಹೆಚ್ಚು ಪ್ರೀತಿಯ, ಲೀಕಂಠಾಕಾಗಿ ಬಟ್ಟೆ ತೊಟ್ಟ ಮಕ್ಕಳು ಅವರಿಗೂ ಇದ್ದರು.

"ಎತ್ತರಕ್ಕೆ ಬೆಳೆದ ಬೇರೆಯವರೂ ಇ ದ್ದಾರೆ. ಆದರೆ, ಅವರು ಕಟ್ಟುಮಸ್ತಾಗಿ ಯಾದರೂ ಇದ್ದಾರೆ. ಆದರೆ ಇವಳೋ ....!" ಎಂದು ನನ್ನತ್ತ ನೋಡಿ ಒಬ್ಬ ಚಿಕ್ಕಮ್ಮ ಆಡಿದ ಮಾತುಗಳು ಇಷ್ಟು ವರ್ಷ ಗಳ ಬಳಿಕವೂ ನನ್ನ ನೆನಪಿನಲ್ಲಿದೆ. ಚಿಕ್ಕಮ್ಮ ತನ್ನ ಮಗಳಿಗೆ ಚಮಚದಿಂದ ಗಂಜಿ ಕುಡಿ ಸುತ್ತ "ಚೆನ್ನಾಗಿ ತಿನ್ನು. ಇಲ್ಲದಿದ್ದರೆ ನೀನೂ ಅವಳ ಹಾಗೇ ಆಗುತ್ತಿ" ಎಂದು ಮುಖ ತಿರುಗಿಸಿ ನನ್ನನ್ನೇ ಸೂಚಿಸುತ್ತ ಹೇಳಿದ್ದಳು.

ವರ್ಷಗಳು ಉರುಳಿದುವು. ವಸಂತ ಕಾಲದ ಒಂದು ದಿನ ಕ್ಯಾಂಟೀನು, ಬೀದಿ, ಟ್ರಾಮ್- ಎಲ್ಲೆಲ್ಲೂ ನನಗರಿಯದ ಜನರೆ ಲ್ಲರೂ ನನ್ನೆಡೆ ನೋಡಿ ತಮ್ಮ ತಮ್ಮಲ್ಲೇ ಹೇಳಿಕೊಳ್ಳುತ್ತಿದ್ದ ಮಾತುಗಳನ್ನು ನಾನು ಆಲಿಸದಿರಲಿಲ್ಲ–"ನೋಡಲ್ಲಿ, ಆಕೆ, ಫೇಟ್ ವ್ರೂಬೆಲ್‌ನ ಚಿತ್ರದಲ್ಲಿಯ ತಮಾರಾಳಂ ತೆಯೆ ಇದ್ದಾಳೆ!"

ನಮ್ಮ ಮನೆಯಲ್ಲಿ "ವ್ರೂಬೆಲ್" ಎಂಬ ಶೀರ್ಷಿಕೆಯ ದಪ್ಪ ಪುಸ್ತಕವೊಂದಿತ್ತು. ಅದರಲ್ಲಿ ನನಗೆ ಮೆಚ್ಚಿಕೆಯಾಗಿದ್ದ "ಸಮು ದ್ರ ರಾಣಿ" ಮಾತ್ರ ನನ್ನ ನೆನಪಿನಲ್ಲಿದೆ. ಅಪ್ಪ ಇದ್ದಿದ್ದರೆ, ವ್ರೂಬೆಲ್‌ನ "ತಮಾರಾ" ದಂತೆ ಇರುವುದು ಒಳ್ಳೆಯದೋ ಕೆಟ್ಟ ದ್ದೋ ಎಂದು ನಾನು ಕೇಳಬಹುದಿತ್ತು. ಆದರೆ. ಅವರು ತೀರಿಹೋಗಿದ್ದರು. ಅದ ಕ್ಕೆ ನನ್ನ ಒಬ್ಬ ಚಿಕ್ಕಮ್ಮನಿಗೆ ಕೇಳಿದ್ದೆ. ಕುದಿಯುತ್ತಿದ್ದ ಸಾರಿನ ರುಚಿ ನೋಡುತ್ತ, ಚಮಚದಿಂದ ಚೆಲ್ಲಿದ ಸಾರಿನಿಂದ ಕೈಸುಟ್ಟು ಕೊಳ್ಳುತ್ತ. ಆಕೆ ವಕ್ರವಾಗಿಯೇ ನುಡಿ ದಿದ್ದಳು: "ವ್ರೂಬೆಲ್? ಒಳ್ಳೇ ತಮಾಷೆಯ ಮಾತು! ವ್ರೂಬೆಲ್ ಬಣ್ಣ ಬಳಿದ ಒಂದು ಚಿತ್ರವಂತೆ....!" ವ್ಯಂಗ್ಯವಾಗಿ ನಕ್ಕಿದ್ದಳು ಆಕೆ.

ನಾನು ತೆಪ್ಪಗಾಗಿದ್ದೆ. ಯಾರಿಗೂ ಬೇಡವಾದ ಕುರೂಪಿ ಬಾತುಕೋಳಿಯಂ ಥವಳು ನಾನು ಎಂದುಕೊಂಡಿದ್ದೆ.

ಕಾಲ ಗತಿಸಿತು, ವಿದ್ಯಾಪೀಠಕ್ಕೆ ಸೇರಿ ಕೊಂಡೆ. ಭುಜದವರೆಗೆ ಬರುವಂತೆ ಕೇಶ ಶೃಂಗಾರ ಮಾಡಿಕೊಂಡೆ. ಹಾಸ್ಟೆಲಿನಲ್ಲಿ ಸ್ವತಂತ್ರಳಾಗಿ ಇರತೊಡಗಿದೆ. ಜೀವನವೂ ಸುಖಮಯವೆನಿಸಿತು. ನನ್ನನ್ನು ಕಂಡರೆ ಆಗದ ಆ ಸಂಬಂಧಿಕರನ್ನೂ ಆ "ತಮಾರಾ" ಚಿತ್ರವನ್ನೂ ಎಲ್ಲವನ್ನೂ ಮರೆತುಬಿಟ್ಟೆ.

ಇದೇ ಸಮಯಕ್ಕೆ, ತ್ರೆತ್ಯಾಕೋವ್ ಗ್ಯಾಲರಿಯು ವಿಸ್ತೃತವಾದ "ವ್ರೂಬೆಲ್ ಕಲಾ ಪ್ರದರ್ಶನ ಏರ್ಪಡಿಸಿದ್ದ ಸಂಗತಿ ತಿಳಿಯಿತು. ಎರಡನೇ ಅಟ್ಟದ ಎರಡು ಸಣ್ಣ ಕೋಣೆಗಳಲ್ಲೂ ಹಾಗೂ ಮೊದಲನೇ ಅಟ್ಟದ ಒಂದು ದೊಡ್ಡ ಕೋಣೆಯಲ್ಲೂ ಬಹಳಷ್ಟು ಚಿತ್ರಗಳನ್ನೂ. ರೇಖಾ ಚಿತ್ರಗ ಳನ್ನೂ ಪ್ರದರ್ಶಿಸಲಾಗಿತ್ತು. "ತಮಾರಾ" ಚಿತ್ರ ನನ್ನ ನೆನಪಿಗೆ ಬಂದಿತು. ಅದೂ ಕೂಡ ಅಲ್ಲಿದ್ದುದನ್ನು ಕಂಡು ಸಂತೋಷ ಪಟ್ಟೆ. ನಾನು ಮೂಲ "ಸಮುದ್ರ ರಾಣಿ" ಯಷ್ಟಲ್ಲದಿದ್ದರೂ ಅದು ನನಗೆ ಮೆಚ್ಚಿಗೆ ಯಾಯಿತು. ಸಣ್ಣವಳಿದ್ದಾಗ ಹೇಗೊ ಹಾಗೆಯೆ. ಆಕೆಯ ಕಣ್ಣುಗಳಲ್ಲಿ ತುಂಬು ವ್ಯಥೆಯ ಭಾವ ತುಂಬಿತ್ತು. ವ್ರೂಬೆಲ್ ಈ ವರ್ಣಚಿತ್ರ ಬರೆಯುವಾಗ ಪ್ರಾಯಶಃ ಪುಷ್ಕಿನ್‌ರ ಪದ್ಯದ ಸಾಲುಗಳನ್ನು ನೆನಪಿಸಿ ಕೊಂಡಿರಬೇಕು.

ಗಾಢ ಸ್ವರದಿಂದ ಹಂಸ ಹೇಳಿತು: "ಅಷ್ಟು ದೂರ ನೀನೇಕೆ ಹೋಗುವುದು?" ನೀನರಸುವುದು ನಿನ್ನ ಬಳಿಯಲ್ಲೇ ಇರು ವಾಗ, "ನಿನ್ನ ರಾಣಿ–ನಾನು, ಇಲ್ಲಿಯೆ ಇರುವೆ".

ಹಂಸ, ರಾಜಕುಮಾರನ ಕಡೆಗೆ ನೋಡು ತ್ತದೆ–ತನ್ನ ಸೌಂದರ್ಯಕ್ಕೆ ಆತ ಮಾರು ಹೋಗುವನೋ ಅಥವಾ ಜರೆಯುವನೋ ಎಂಬುದನ್ನು ಅರಿಯದೆ. ರಿಮ್‌ಸ್ಕಿ ಕೊರ್ಸಾ ಕೋವ್‌ನ ಸಂಗೀತ ಕೇಳಿದಾಗ ನಿಮ್ಮ ಅನು ಭವಕ್ಕೆ ಬರುವ ಆ ಗೆಲುವಿನ ಚೆಲುವು ಅದಕ್ಕೆ ಇರಲಿಲ್ಲ. ಬಹಳಷ್ಟು ಸಮಯ ಅಲ್ಲೇ ನಿಂತು ಆ ವರ್ಣಚಿತ್ರವನ್ನು ನೋ ಡಿದೆ. ನಂತರ ಹಾಸ್ಟೆಲಿಗೆ ಮರಳಿ ಬಂದೆ.

ಇನ್ನೂ ಮೆಟ್ಟಲುಗಳನ್ನು ಪೂರ್ಣ ಏರಿರ ಲಿಲ್ಲ. ನಮ್ಮ ಕೋಣೆಯಲ್ಲಿ ಜೋರಾ ಗಿಯೇ ನಡೆದಿದ್ದ ಮಾತುಕತೆಗಳು ನನ್ನ ಕಿವಿಗೆ ಬಿದ್ದವು. ಅವರೆಲ್ಲರೂ ವ್ರೂಬೆಲ್ ಬಗ್ಗೆ ಚರ್ಚಿಸುತ್ತಿದ್ದರು!

"ನಿನ್ನ ವ್ರೂಬೆಲ್, ತೀರಾ ಅಸಂಬದ್ಧ. ಬರೀ ಮುಂಪರುಗವಿದ, ಅದೇನು ಕಲೆಯೆ?"

"ಬೆಪ್ಪೆ! ಸುಮ್ಮಿರು! ಅದು ಉತ್ಕೃಷ್ಟ ಕಲೆ!'' ರೇಗಿದ ಇನ್ನೊಬ್ಬರು ವಾದಿಸಿದರು.

ವಿಚಿತ್ರವೆಂದರೆ, "ವ್ರೂಬೆಲ್‌ನ ಒಂದು ಚಿತ್ರದಂತೆ ನಾನಿದ್ದೇನೆ'' ಎಂಬ ಮಾತು ಕೇಳಿ ನನಗೆ ನಾಚಿಕೆ ಉಂಟಾಯಿತು.

"ಖಂಡಿತ!'' ಮೂಲೆಯೊಂದರಿಂದ ಖುಷಿ ಮಾತು ಕೇಳಿಬಂತು.

ಎಲ್ಲೆಲ್ಲೂ ನಗೆ.

ನನಗೆ ಎಲ್ಲರಿಗಿಂತ ಪ್ರಿಯನಾದ ಒಬ್ಬ, ಬಹಳ ಹೊತ್ತು ನೀರವವಾಗಿ ನನ್ನನ್ನೇ ನೋಡಿದ. "ನಿನಗೆ ಯಾರೂ ಎಂದೂ ಹೇಳಿಲ್ಲವೆ? ನೀನು ಫೇಟ್‌ಸಮುದ್ರ ರಾಣಿ ಯಂತೆಯೆ ಇರುವಿ!''

ಆತ ನನ್ನಲ್ಲಿ ಕಂಡದ್ದೇನು!

ಯೆಕತೆರಿನಾ ವೋಯ್ನಿಚ್.

— —

# ಭಾವಾವೇಶಗಳಿಗೆ ಹೆದರಬೇಡಿ!

(ಗ್ರಿಗೊರಿ ಕೊಸಿತ್‌ಸ್ಕಿ ಡಿ.ಎಸ್‌ಸಿ)

ಮನುಷ್ಯರಿಗೆ ಬರುವ ಎಲ್ಲ ಕಾಯಿಲೆಗಳಲ್ಲಿ ರಕ್ತಒತ್ತಡವು ಅತ್ಯಂತ ಸಾಮಾನ್ಯವಾದುದು. ಸಾಮಾನ್ಯವಾಗಿ ಇದು, ತುಂಬ ಬಿಡುವಿಲ್ಲದ ಗಡಿಬಿಡಿಯ ಉದ್ವೇಗಪೂರ್ಣ ಜೀವನವನ್ನು ನಡೆಸುವ ಜನರಲ್ಲಿ ಕಂಡುಬರುತ್ತದೆ.

ಆಯಾಸ, ಆಘಾತಗಳು ಮತ್ತು ವಿಷಮ ಭಾವಾವೇಶಗಳು, ಇವು ರಕ್ತಒತ್ತಡವನ್ನುಂಟುಮಾಡುತ್ತವೆ ಮಾತ್ರವೆ ಅಲ್ಲ, ಹೃದಯದ ಕ್ರಿಯೆಯನ್ನೂ ಹಾಗೂ ಮಿದುಳಿನ ರಕ್ತಪರಿಚಲನೆಯನ್ನೂ ಅಸ್ತವ್ಯಸ್ತಗೊಳಿಸುತ್ತವೆ. ಅಂತೆಯೇ ವೈದ್ಯರು, ಸರಮಂಡಲಕ್ಕೆ ತುಂಬ ಆಯಾಸವಾಗದಂತೆ ನೋಡಿಕೊಳ್ಳಲು ಸಲಹೆಮಾಡುತ್ತಾರೆ; ಸರಳವಾದ ಹಾಗೂ ಸಮತೋಲನ ಜೀವನ ನಡೆಸಬೇಕೆಂದೂ ಅವರು ಹೇಳುತ್ತಾರೆ.

ವಿಷಮ ಭಾವಾವೇಶಗಳೂ ಕೂಡ ಬಾಧಕವಾಗಿ ಅಲ್ಲ, ಆದರೆ, ಜೈವಿಕ ಪ್ರತಿಕ್ರಿಯೆಗಳಲ್ಲಿ ಹಿತಕರವಾಗಿ ಮತ್ತು ಆವಶ್ಯಕವಾಗಿ ವಿಕಸನಗೊಂಡಿವೆ ಎಂಬುದು ತೀರಾ ವಿರೋಧಾಭಾಸದ ಉಕ್ತಿಯಾಗಿದೆ. ಹಾಗಾದರೆ, ನಿದರ್ಶನಕ್ಕೆ, ದುಃಖದಂತಹ ಭಾವಾವೇಶಗಳನ್ನು ಏಕೆ ತಿರಸ್ಕರಿಸಿಲ್ಲ? ಯಾಕೆಂದರೆ ಇದು ಆರೋಗ್ಯಕರವಾದುದು. ಸಹಾಯಕ್ಕಾಗಿ ಜನರ ಗಮನವನ್ನು ಸೆಳೆಯಬೇಕೆಂಬುದೇ ಇದರ ಉದ್ದೇಶ. ಇದೆಲ್ಲವೂ ಸಹಜ ಪ್ರವೃತ್ತಿಯಿಂದಲೇ ನಡೆಯುತ್ತದೆ: ಒಬ್ಬ ವ್ಯಕ್ತಿ ಪ್ರಾಮಾಣಿಕವಾಗಿ ಹಾಗೆ ಭಾವಿಸುತ್ತಾನೆ ಹಾಗೂ ಆತನ ಸಹಪಾಠಿಗಳೂ ಅಷ್ಟೇ ಪ್ರಾಮಾಣಿಕರಾಗಿ ಆತನ ಭಾವಾವೇಶಕ್ಕೆ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಾರೆ.

ಹಾಗಾದರೆ ಹಲವು ಬಾರಿ ಆರೋಗ್ಯಕರ ಭಾವಾವೇಶಗಳು ತದ್ವಿರುದ್ಧವಾಗಿ ಮಾರ್ಪಟ್ಟು ರೋಗವನ್ನು ಅಷ್ಟೇ ಏಕೆ, ಮರಣವನ್ನೂ ಏಕೆ ಉಂಟುಮಾಡುತ್ತವೆ? ಯಾಕೆಂದರೆ ಪ್ರಪ್ರಥಮವಾಗಿ ಭಾವಾವೇಶಗಳು ಮನುಷ್ಯಜೀವಿಗೆ ಅತಿ ಒತ್ತಡದ ಘಳಿಗೆಗಳಾಗಿರುತ್ತವೆ. ಇಂಥ ಪರಿಸ್ಥಿತಿಯು ಮುಂದುವರಿಯಕೂಡದು, ಅದಕ್ಕೆ ಉಪಶಮನ ಅಗತ್ಯ. ಆದರೆ, ಕೆಲವು ಬಾರಿ ಜೀವನದ ಸಹಜ ಪರಿಸ್ಥಿತಿಗಳು, ಭಾವಾವೇಶದ ಒತ್ತಡವನ್ನು ಶಮನಗೊಳಿಸದೆ ಹೋಗುತ್ತವೆ. ಹಲವು ಬಾರಿ ನೈತಿಕ ಮಟ್ಟಗಳು ಹಾಗೂ ತತ್ವಗಳು ಅದನ್ನು ನಿರೋಧಿಸುತ್ತವೆ.

ನಮ್ಮ ಭಾವಾವೇಶಗಳನ್ನು ಮುಚ್ಚಿಟ್ಟುಕೊಂಡರೆ ನಾವು ನಮ್ಮ ಆರೋಗ್ಯವನ್ನು ಹಾಳುಮಾಡಿಕೊಳ್ಳುತ್ತೇವೆ. ಆದರೆ ಅವುಗಳನ್ನು ವಿಸರ್ಜಿಸಿದರೆ ಪ್ರಾಣಕ್ಕೇ ಅಪಾಯವಾಗುವಂಥ ಇನ್ನೂ ಹೆಚ್ಚಿನ ತೊಂದರೆಯನ್ನು ಆಹ್ವಾನಿಸಿಕೊಳ್ಳುತ್ತೇವೆ. ಇದಕ್ಕೆ ಪರಿಹಾರವಾದರೂ ಏನು? ಇದಕ್ಕೆ ಒಂದೇ ಒಂದು ಉತ್ತರ ಮಾತ್ರ ಉಂಟು: ಭಾವಾವೇಶದ ಪ್ರತಿಕ್ರಿಯೆಗಳ ಮೇಲೆ ನಿಯಂತ್ರಣವಿಟ್ಟುಕೊಳ್ಳುವ ಸಾಮರ್ಥ್ಯವಿರಬೇಕೆಂಬುದೇ ಆ ಉತ್ತರ.

ನಿಮ್ಮ ಗುರಿ ಸಾಧಿಸದೆ ಹೋದಾಗ ನಿಮಗೆ ನಿರಾಶೆಯುಂಟಾಗಿದ್ದರೆ ಅಥವಾ ನೀವು ಪೀಡನೆಗೊಳಗಾಗಿದ್ದರೆ ಇದುವೇ ಏಕಮಾತ್ರ ಮಹತ್ವದ ಗುರಿ ಅಲ್ಲವೆಂದು ನಿಮ್ಮಷ್ಟಕ್ಕೆ ನೀವೇ ಮನವರಿಕೆಮಾಡಿಕೊಳ್ಳಬೇಕು. ಆಗ ಭಾವಾವೇಶವು ಮರೆಯಾಗುತ್ತದೆ.

ಒಂದು ಹೊಸ ಗುರಿಸಾಧನೆಯ ಕಡೆಗೆ ನಿಮ್ಮ ಪ್ರಯತ್ನಗಳನ್ನು ತಿರುಗಿಸಿಕೊಳ್ಳಬೇಕೆಂಬುದು ಇದಕ್ಕೆ ಇನ್ನೊಂದು ಪರಿಹಾರಕ್ರಮ. ನೀವು ಹೊಸ ಗುರಿಯನ್ನಿಟ್ಟುಕೊಂಡಾಗ ಮೊದಲಿನ ಗುರಿಯು ನಿಮಗೆ ಅಷ್ಟೊಂದು ಮಹತ್ವದ್ದಾಗಿ ಕಾಣದು. ಒಂದು ತೀವ್ರ ಚಟುವಟಿಕೆಯು ಇನ್ನೊಂದರ ಸ್ಥಾನದಲ್ಲಿ ಬಂದಾಗ ಇದನ್ನು ಬಾಹ್ಯ ಸಂಯಮ ಪ್ರವೃತ್ತಿಯೆಂದು ಕರೆಯಲಾಗುತ್ತದೆ. ಭಾವಾವೇಶದ ಒತ್ತಡವನ್ನು ನಿವಾರಿಸಿಕೊಳ್ಳಲು ಆಗದಿದ್ದಾಗ ನೀವು ಅದನ್ನು ನಿಮ್ಮ ಕುಟುಂಬದ ಮೇಲೆ ಹೊರಿಸಕೂಡದು.

ಭಾವಾವೇಶದ ಒತ್ತಡದಿಂದಾಗಿ ಜೀವಿಯಲ್ಲುಂಟಾಗುವ ಬದಲಾವಣೆಗಳನ್ನು ಸ್ನಾಯುಗಳ ತೀವ್ರ ಚಟುವಟಿಕೆಗಳಿಂದ ನಿವಾರಿಸಿಕೊಳ್ಳಬಹುದು. ಐದಂತಸ್ತಿನವರೆಗೆ ಮೆಟ್ಟಿಲುಗಳನ್ನು ಏರಿಹೋಗುವ ಯಾವ ವ್ಯಕ್ತಿಯೂ ತೊಂದರೆ ಅನುಭವಿಸಲಾರ, ಪ್ರತಿಯಾಗಿ, ಆತನ ಶರೀರ ವೈಜ್ಞಾನಿಕ ಪ್ರಕ್ರಿಯೆಗಳು ಸುಲಭಗೊಳ್ಳುತ್ತವೆ. ಇಂಥ "ಉಪಶಮನ"ವು ಭಾವಾವೇಶದ ಕಾರಣವನ್ನು ವರ್ಣಿಸುವುದಿಲ್ಲವಾದರೂ ಇದು ಅದರ ತೀವ್ರ ಒತ್ತಡವನ್ನು ಕಡಮೆಗೊಳಿಸುತ್ತದೆ ಹಾಗೂ ಮನವನ್ನು ಪರಿವರ್ತನೆಗೊಳಿಸುತ್ತದೆ. ಒತ್ತಡ ಕಡಮೆಯಾದಾಗ ವ್ಯಕ್ತಿಯು ನೆಮ್ಮದಿಯಿಂದ ತನ್ನ ಕಾರ್ಯವನ್ನು ಸರಿಪಡಿಸಿಕೊಳ್ಳುತ್ತಾನೆ.

ಸ್ನಾಯುಗಳ ತೀವ್ರ ಚಟುವಟಿಕೆಯು, ಭಾವಾವೇಶದ ಒತ್ತಡಗಳನ್ನು ಕಡಮೆಗೊಳಿಸುವುದಕ್ಕೆ ಅಗತ್ಯವಾಗಿರುತ್ತದೆ ಮಾತ್ರವೆ ಅಲ್ಲ, ಜೀವ ರಚನೆಗಳನ್ನು ಕಾಪಾಡುವುದಕ್ಕೆ ಪ್ರಧಾನ ಸ್ಥಿತಿಯೂ ಆಗಿರುತ್ತದೆ.

ಪ್ರಥಮತಃ ಇದು ಹೃನ್ನಾಳಗಳ ಪದ್ಧತಿಗೆ ಅನ್ವಯಿಸುತ್ತದೆ. ಸ್ನಾಯುಗಳ ನಿಷ್ಕ್ರಿಯತೆಯು ಅದನ್ನು ಎಷ್ಟೊಂದು ದುರ್ಬಲಗೊಳಿಸುತ್ತದೆಯೆಂದರೆ ಸಣ್ಣ ಪ್ರಮಾಣದ ಭಾವಾವೇಶದ ಒತ್ತಡವೂ ಕೂಡ ತೀವ್ರ ಪರಿಣಾಮವನ್ನುಂಟುಮಾಡುತ್ತದೆ. ಏನೇ ಆಗಲಿ, ಸ್ನಾಯುಗಳ ಕ್ರಿಯೆಯಲ್ಲಿ ಒಂದು ಉದ್ದೇಶವಿರಬೇಕು.

ಸಂತಸದ ಭಾವನೆಯು ಆರೋಗ್ಯಕ್ಕೆ ತುಂಬ ಮುಖ್ಯವಾದುದು. ಸಂತೋಷವನ್ನು ಅರಸಕೂಡದೆಂದು ಶತಶತಮಾನಗಳಿಂದ ಯಾರೂ ಹೇಳಿಲ್ಲ.

ಅಗತ್ಯತೆಗಳ ಈಡೇರಿಕೆಯಲ್ಲೇ ಸಂತೋಷವಿರುತ್ತದೆ ಎನ್ನುವುದು ಒಂದು ವಾಡಿಕೆಯ ಮಾತು. ಇದು ನಿಜವೇ ಆದರೆ, ಅಗತ್ಯತೆಗಳು ಈಡೇರಿದಾಗ, ಉದಾಸೀನ ಸ್ಥಿತಿಯಿಂದ ಕ್ಷಣಿಕ ಆನಂದ ಉಂಟಾಗುತ್ತದೆ. ಹೊಸ ಗುರಿ—ಹೊಸ ಕಾರ್ಯಭಾರಗಳು ಇಲ್ಲದಿದ್ದರೆ, ಅವುಗಳನ್ನು ನೆರವೇರಿಸಿಕೊಳ್ಳದಿದ್ದರೆ ಆಶಾದಾಯಕ ಭಾವನೆಗಳು ಮೂಡಲಾರವು.

ಮನೋಭಾವವು ಜೀವನದ ಅಭಿವ್ಯಕ್ತಿಯಾಗಿದೆಯಾದ್ದರಿಂದ ಭಾವಾವೇಶಗಳಿಗೆ ಹೆದರಕೂಡದು: ಭಾವಾವೇಶಗಳು ಬೇಡವೆಂದರೆ ಜೀವಿಸುವುದೂ ಬೇಡವೆಂದು ಅರ್ಥ.

—0—

---

(೮ನೇ ಪುಟದಿಂದ)

ಭಾಷಾಂತರಿಸಿರಲಿಲ್ಲ. ಈಗ ಈ ಅಸದೃಶ ಸಾಹಿತ್ಯ ಮೇರುಕೃತಿಯ ಪ್ರಥಮ ಸಂಸ್ಕರಣದ ಹಸ್ತಪ್ರತಿಯನ್ನು ಮುದ್ರಣಕ್ಕೆ ಸಿದ್ಧಗೊಳಿಸಲಾಗಿದೆ.

ಪುಸ್ತಕದ ಮೊದಲನೆ ಭಾಗ ಮಾತ್ರ ಅಂದರೆ, ವೈದ್ಯಕೀಯ ವಿಷಯಗಳನ್ನು ಕುರಿತು ವಿವರಿಸುವ ಭಾರತ-ಟಿಬೆಟ್ ಹಸ್ತಪ್ರತಿಗಳ ಆಧಾರದ ಮೇಲೆ ವಿವಿಧ ವೈದ್ಯ ಮಾಲಿಕೆಗಳ ವೈದ್ಯಕೀಯ ಹಾಗೂ ಔಷಧೀಯ ವಿವರಗಳನ್ನು ಸಂಪೂರ್ಣಗೊಳಿಸಲಾಗಿದೆ. ಈಗ ಎರಡನೆ ಘಟ್ಟವನ್ನು ಪ್ರಾರಂಭಿಸಬೇಕಾಗಿದೆ. ಈ ಘಟ್ಟಕ್ಕೆ ಸಂಬಂಧಿಸಿದ ಕಾರ್ಯವು, ಸಮಗ್ರವಾದ ಚಿಕಿತ್ಸೆಗಳ ಪ್ರಾಯೋಗಿಕ ಫಲಿತಾಂಶಗಳನ್ನೂ ಅನ್ವೇಷಣೆಗಳನ್ನೂ ಒಳಗೊಂಡಿರುವುದು. ಕೃತಿಯು ಸಂಪೂರ್ಣವಾಗಿ ಪ್ರಕಟವಾದಾಗ ಪೌರಸ್ತ್ಯ ವೈದ್ಯರ ಔಷಧಿ-ಚಿಕಿತ್ಸೆಗಳು ಎಷ್ಟು ಪರಿಣಾಮಕಾರಿಯಾಗಿದ್ದವು ಮತ್ತು ಅವು ಇಂದು ಸಾಮಾನ್ಯವಾಗಿ ಬಳಸುವ ವೈದ್ಯಕೀಯ-ಔಷಧಿ ಚಿಕಿತ್ಸೆಗೆ ಎಂಥ ಮಹತ್ವದ ಕೊಡುಗೆ ನೀಡಬಲ್ಲವು ಎಂಬ ಅಂಶ ವ್ಯಕ್ತವಾಗುತ್ತದೆ. ಪಿ. ಇ. ನಜರೋವ್ ಲ್ಯಾಗೊಲೆರೊನ್ ಎಂ.ಎಸ್‌ಸಿ.(ವೈದ್ಯ) ಅವರ ನೇತೃತ್ವದಲ್ಲಿ ಪೌರಸ್ತ್ಯ ಔಷಧಿಗಳ ಸಿದ್ಧತೆಯಲ್ಲಿ ದೈಹಿಕವಾಗಿ ಕ್ರಿಯಾಶೀಲವಾಗುವ ವಸ್ತುಗಳನ್ನು ಪರಿಶೀಲಿಸಲಾಗುತ್ತಿರುವ ಪ್ರಯೋಗ ಶಾಲೆಯ ಸಿಬ್ಬಂದಿ ವರ್ಗವು ಇವುಗಳನ್ನು ಸಮಗ್ರವಾಗಿ-ಮೊದಲು ಪ್ರಾಣಿಗಳ ಮೇಲೆ ಪ್ರಯೋಗ ನಡೆಸಿ-ಅಧ್ಯಯನ ಮಾಡುತ್ತಿದ್ದಾರೆ. ಹೀಗೆ ಪ್ರಾಚೀನ ಔಷಧಿ ಶಾಸ್ತ್ರದಲ್ಲಿ ಉಲ್ಲೇಖವಾದ ೭೪ ಔಷಧಿಗಳ ಪ್ರಯೋಗ-ಅಧ್ಯಯನ ನಡೆಯುತ್ತಿದೆ. ಪ್ರಯೋಗಾಲಯದ ಸಿಬ್ಬಂದಿ ವರ್ಗ ಬಹು ಉತ್ಸಾಹದಿಂದ ಅಧ್ಯಯನ ನಡೆಸುತ್ತಿದ್ದಾರೆ.

—0—

# ಏನಾಯಿತು ಈ ಮಕ್ಕಳಿಗೆ? ಇಂದು ಅವರೆಲ್ಲಿ?

"ತಮ್ಮ ತಾಯಿ-ತಂದೆಗಳು ಯಾರೆಂಬುದು ಈ ಬಾಲಕರಿಗೆ ತಿಳಿಯುವ ಅಗತ್ಯವಿಲ್ಲ. ಅವರೆಂದೂ ಇನ್ನು ರಶಿಯನ್ ಭಾಷೆಯನ್ನು ಮಾತನಾಡುವಂತಿಲ್ಲ. ನಾವು ಅವರನ್ನು ಒಳ್ಳೇ ಸೈನಿಕರನ್ನಾಗಿಸೋಣ ಅಥವಾ ಕುದುರೆಗಳಂತೆ ದುಡಿಸೋಣ." ಇವು ಹಿಟ್ಲರ್‌ಷಾಹಿ ಅಧಿಕಾರಿಯೊಬ್ಬ ಆಡಿದ ಮಾತುಗಳು—೧೯೪೨ರ ಶರತ್ಕಾಲದಲ್ಲಿ, ದಿಗಾ ಬಂದೀಖಾನೆಯಲ್ಲಿದ್ದ ರಶಿಯನ್ ಮಾತೆಯರಿಂದ ಅವರ ಮಕ್ಕಳನ್ನು ಕಿತ್ತುಕೊಳ್ಳುವಾಗ.

ಫಾಸಿಸ್ಟ್ ಜರ್ಮನಿಯು ನಿರ್ನಾಮಗೊಂಡು ಮೂವತ್ತು ವರ್ಷಗಳು ಕಳೆದಿವೆಯಾದರೂ ಯುದ್ಧದ ಗಾಯಗಳು ಇನ್ನೂ ರಕ್ತಸ್ರವಿಸುತ್ತಲೇ ಇವೆ. ಯುದ್ಧಕಾಲದಲ್ಲಿ ಕಳೆದುಹೋದ, ತಾತ್ಕಾಲಿಕವಾಗಿ ಆಕ್ರಮಿಸಲ್ಪಟ್ಟ ಪ್ರದೇಶಗಳಲ್ಲೇ ಉಳಿದಿದ್ದ ಮಕ್ಕಳ ಗತಿ ಏನಾಯಿತು? ಫಾಸಿಸ್ಟರು ಬಲಾತ್ಕಾರದಿಂದ, ಹೆತ್ತವರಿಂದ ಅಗಲಿಸಿ ಜರ್ಮನಿಗೆ ಎಳೆದೊಯ್ದಿದ್ದ ಆ ಮಕ್ಕಳು ಈಗೆಲ್ಲಿ?

ಸುಮಾರು ೨೦,೦೦೦,೦೦೦ ಸೋವಿಯೆತ್ ಜನರು ದ್ವಿತೀಯ ಲೋಕಯುದ್ಧದಲ್ಲಿ ಮಡಿದರು. ೨೫,೦೦೦,೦೦೦ ಜನರು ಮನೆಮಾರುಗಳನ್ನು ಕಳೆದುಕೊಂಡು ನಿರ್ಗತಿಕರಾದರು. ಯುದ್ಧದ ಕರಾಳ ಹಸ್ತವು ಪ್ರತಿಯೊಂದು ಸೋವಿಯೆತ್ ಕುಟುಂಬವನ್ನೂ ಮುಟ್ಟಿ ಅವರಿಗೆ ಸಾವು-ನೋವುಗಳನ್ನೂ, ಗಾಯಗಳನ್ನೂ, ಹಸಿವು ಮತ್ತು ಅಪಾರ ಹಾನಿಯನ್ನೂ ತಂದಿಕ್ಕಿತು.

ಮುಂದೆ, ಜಗತ್ತಿನ ಪ್ರಥಮ ಅಂತರಿಕ್ಷ ಯಾತ್ರಿಯಾದ ಯೂರಿ ಗಗಾರಿನ್‌ರ ಮನೆಯೂ ಕೂಡ ಯುದ್ಧದ ಜ್ವಾಲೆಗೆ ಈಡಾಗಿತ್ತು. ಅವರ ತಂದೆ ರಣರಂಗದಲ್ಲಿ ಹೋರಾಡುತ್ತಿದ್ದರು. ತಾಯಿಯು ಯೂರಿ ಗಗಾರಿನ್ ಮತ್ತು ಉಳಿದ ಮೂವರು ಮಕ್ಕಳ ಜೊತೆ–ಫಾಸಿಸ್ಟರು ದುರಾಕ್ರಮಿಸಿದ ಸ್ಮೋಲೆನ್‌ಸ್ಕ್ ಪ್ರದೇಶದಲ್ಲಿಯ ತಮ್ಮ ಹಳ್ಳಿಯಲ್ಲೇ ಉಳಿದುಕೊಂಡಿದ್ದಳು. ಫಾಸಿಸ್ಟ್ ಪಾತಕಿಯೊಬ್ಬನು ತಮ್ಮ ಕಿರಿಯ ಸಹೋದರನನ್ನು ಸೇಬು ಗಿಡಕ್ಕೆ ನೇಣು ಬಿಗಿಯಲು ಪ್ರಯತ್ನಿಸಿದ ಆ ಘೋರ ದೃಶ್ಯವನ್ನು ಆಗಿನ್ನೂ ಏಳು ವರ್ಷದವರಾಗಿದ್ದ ಯೂರಿ ಗಗಾರಿನ್ ಎಂದಿಗೂ ಮರೆಯಲಿಲ್ಲ.

ಯುದ್ಧದ ಅತ್ಯಂತ ದಾರುಣ ಘಟನೆಗಳಲ್ಲೊಂದೆಂದರೆ ಲೆನಿನ್‌ಗ್ರಾಡ್ ಮೇಲೆ ದಿಗ್ಬಂಧನ. ೯೦೦ ದಿನಗಳ ಕಾಲ ಚಳಿ-ಹಸಿವುಗಳ ಯಾತನೆಯನ್ನು ಅನುಭವಿಸಿದರೂ, ನಿರಂತರ ಬಾಂಬು ದಾಳಿ ಮತ್ತು ಫಿರಂಗಿಗಳ ಗುಂಡಿನ ಸುರಿಮಳೆಗೆ ಗುರಿಯಾಗಿದ್ದರೂ ಎದೆಗುಂದದ ಲೆನಿನ್‌ಗ್ರಾಡ್ ನಗರವು ವೈರಿಗೆ ಶರಣೆನ್ನಲಿಲ್ಲ. ಅನೇಕಾನೇಕ ಮಕ್ಕಳು ಪಟ್ಟಣದಲ್ಲೇ ಉಳಿದಿದ್ದರು. ಏಕೆಂದರೆ, ದಿಗ್ಬಂಧನಕ್ಕೆ ಮೊದಲು ಕೇವಲ ೨೨೦ ೦೦೦ ಜನರನ್ನು ಮಾತ್ರ ತೀರ ಒಳಪ್ರದೇಶಕ್ಕೆ ಸಾಗಿಸಲು ಸಾಧ್ಯವಾಗಿತ್ತು.

ಲೆನಿನ್‌ಗ್ರಾಡ್ ಶಾಲೆಯೊಂದರ ವಿದ್ಯಾರ್ಥಿನಿ ತಾನ್ಯಾ (ಆಕೆ ಈಗಿಲ್ಲ) ನೋಟ್ ಪುಸ್ತಕದ ಹಾಳೆಯೊಂದರ ಮೇಲೆ ತನ್ನ ಎಳೆಯ ಹಸ್ತದಿಂದ ಅಂಕುಡೊಂಕು ಅಕ್ಷರಗಳಲ್ಲಿ ಬರೆದಿಟ್ಟ ದಿನಚರಿ ಇಂತಿದೆ:

"೧೯೪೧ರ ಡಿಸೆಂಬರ್ ೨೮ರಂದು ೧೨-೩೦ ಗಂಟೆಗೆ ಝೇನ್ಯಾ ಸತ್ತಳು. ೧೯೪೨ರ ಜನವರಿ ೨೫ರಂದು ಮಧ್ಯಾಹ್ನ ೩ ಗಂಟೆಗೆ ಅಜ್ಜಿ ಸತ್ತಳು. ೧೯೪೨ರ ಮಾರ್ಚ್ ೧೭ರಂದು ಬೆಳಗಿನ ಜಾವ ೫ ಗಂಟೆಗೆ ಲೆನ್ಯಾ ಸತ್ತಳು. ೧೯೪೨ರ ಏಪ್ರಿಲ್ ೧೩ರಂದು ರಾತ್ರಿ ೨ ಗಂಟೆಗೆ ಚಿಕ್ಕಪ್ಪ ವಾಸ್ಯಾ ಸತ್ತರು, ೧೯೪೨ರ ಮೇ ೧೧ರಂದು ಸಂಜೆ ೪ ಗಂಟೆಗೆ ಚಿಕ್ಕಪ್ಪ ಲೋಷ್ಯಾ ಸತ್ತರು. ೧೯೪೨ರ ಮೇ ೧೩ರಂದು ೭-೩೦ ಗಂಟೆಗೆ ಅಮ್ಮ ಸತ್ತಳು. ಸವಿಚೇವ್‌ರೆಲ್ಲರೂ ಸತ್ತುಹೋದರು....".

ವೈರಿಗೆ ಮಣಿಯದ, ಅವಿನಾಶೀ ಲೆನಿನ್‌ಗ್ರಾಡ್ ನಗರದ ಸರ್ವನಾಶಗೊಂಡ ಕುಟುಂಬವೊಂದರ ದಾರುಣ ಕಥೆ ಇದು. ಅಲ್ಲಿಯ ಸಹಸ್ರಾರು ಕುಟುಂಬಗಳು ಇದೇ ರೀತಿಯ ದಾರುಣ ಸ್ಥಿತಿಯನ್ನು ಅನುಭವಿಸಿದ್ದುವು.

ಯುದ್ಧ ಆರಂಭಗೊಂಡಂದಿನಿಂದಲೇ ಅನೇಕಾನೇಕ ಜನ ಬಾಲಕರು ರಣರಂಗಕ್ಕೆ ಹೋಗಲು ಇಚ್ಛಿಸುತ್ತಿದ್ದರು. ತಮ್ಮ ಕಲ್ಪಕ ಶಕ್ತಿಯಿಂದ ಈ ಬಾಲಕರು ಅನೇಕ ಕಾರ್ಯಗಳನ್ನು ಉಪಾಯವಾಗಿ ಜರುಗಿಸಿದರು. ವಿಶೇಷವಾಗಿ ರಚಿಸಲ್ಪಟ್ಟಿದ್ದ ಲಘು ದಳಗಳ ಸಿಪಾಯಿಗಳಾಗಿ ಅವರು ಉಪಯುಕ್ತ ಸೇವೆ ಸಲ್ಲಿಸಿದರು. ಅವರಲ್ಲಿಯ ಸಹಸ್ರಾರು ಮಂದಿ ರೆಜಿಮೆಂಟುಗಳ "ಪುತ್ರ"ರೆನಿಸಿಕೊಂಡರು ಹಾಗೂ ಇನ್ನೂ ಅನೇಕರು ತಮ್ಮ ಧೈರ್ಯ-ಸ್ಥೈರ್ಯಗಳಿಗಾಗಿ ಸೈನಿಕ ಬಿರುದುಗಳನ್ನು ಪಡೆದರು.

ಹದಿನಾರು ವರ್ಷ ವಯಸ್ಸಿನ ಕೊನ್‌ಸ್ಟಾಂತಿನ್ ಫೆಯೊಕ್ತಿಸ್ತೊವ್, ಹಿಟ್ಲರನ ರಣರಂಗದ ಹಿಂಭಾಗದಲ್ಲಿ ಶತ್ರುವಿನ ಸುಳಿವು ಹಿಡಿಯುವ ದೂತನಾಗಿದ್ದ. ಫಾಸಿಸ್ಟರ ಕಣ್ಣಿಗೆ ಬಿದ್ದಾಗ ಆತನ ಮೇಲೆ ಅವರು ಗುಂಡು ಹಾರಿಸಿದ್ದರು. ಸುದೈವವಶಾತ್, ಗುಂಡಿಗೆ ಆಹುತಿಯಾಗದೆ ಆತ ಬದುಕಿದ. ತೀವ್ರವಾಗಿ ಗಾಯಗೊಂಡಿದ್ದ ಈ ಹುಡುಗನನ್ನು ಸೋವಿಯೆತ್ ಜನರು ರಕ್ಷಿಸಿದರು. ಅನೇಕ ವರ್ಷಗಳ ನಂತರ, ಅಂದರೆ ೧೯೬೪ರ ಶರತ್ಕಾಲದಲ್ಲಿ "ವೊಸ್‌ಖೋದ್" ಎಂಬ ಬಹು ಪೀಠಗಳ ಪ್ರಥಮ ಅಂತರಿಕ್ಷ ನೌಕೆಯೊಂದನ್ನು ಉಡಾಯಿಸಲಾಯಿತು. ವ್ಲದಿಮಿರ್ ಕೊಮಾರೋವ್ ಹಾಗೂ ಬರೀಸ್ ಯೆಗೊರೋವ್ ಅವರುಗಳಿದ್ದ ಈ ಅಂತರಿಕ್ಷ ನೌಕೆಯ ಸಿಬ್ಬಂದಿಯಲ್ಲಿ ಇನ್ನೊಬ್ಬ ವ್ಯಕ್ತಿಯೂ ಇದ್ದ–ಯುದ್ಧ ಸಮಯದಲ್ಲಿ ಫಾಸಿಸ್ಟರ ಗುಂಡುತಾಕಿ, ಅಳಿಯದೆ ಉಳಿದಿದ್ದ ಅದೇ ಕೊನ್‌ಸ್ಟಾಂತಿನ್ ಫೆಯೊಕ್ತಿಸ್ತೋವ್ ಇವರು.

ಹಿಟ್ಲರ್‌ಷಾಹಿ ಜರ್ಮನಿಯು ಸೋವಿಯೆತ್ ಒಕ್ಕೂಟದ ಮೇಲೆ ದಾಳಿ ನಡೆಸಿದ್ದಾಗ ಅನತೋಲಿ ಪೆರ್ವ್ಯೋವ್‌ಗೆ ಆಗಿನ್ನೂ ೧೪ ವರ್ಷ. ಫಾಸಿಸ್ಟರು ಈ ಹುಡುಗನನ್ನು ಕೂಡುದೊಡ್ಡಿಗೆ ದೂಡಿದ್ದರು. ಅಲ್ಲಿಂದ ಪಾರಾಗಲು ಆತ ನಾಲ್ಕು ಬಾರಿ ಪ್ರಯತ್ನಿಸಿದ್ದ. ನಾಲ್ಕು ಬಾರಿಯೂ ಫಾಸಿಸ್ಟರ ಕೈಗೆ ಸಿಕ್ಕಿಬಿದ್ದಿದ್ದ. ಪ್ರತಿಯೊಂದು ಬಾರಿಯೂ ಚೆನ್ನಾಗಿ ಬಾರಿಸಿ ಮತ್ತೆ ಒಳಕ್ಕೆ ತಳ್ಳಲಾಗಿದ್ದಿತು. ಆತ ತಾನಿದ್ದ ಕಿರ್ಮುಗಂಡ್ ಬಂದೀಖಾನೆಯ ಕೋಣೆಯ ಬಾಗಿಲಿನ ಒಳಭಾಗದಲ್ಲಿ ಲೆನಿನ್‌ರ ಚಿತ್ರವೊಂದನ್ನು ಬರೆದಿದ್ದ. ತನ್ನ ನಂತರ ಬರುವವರೆಲ್ಲ ಇದನ್ನು ನೋಡಬಹುದು ಎಂಬುದೊಂದೇ ಅವನಿಗೆ ಇಲ್ಲಿ ಸಮಾಧಾನದ ಸಂಗತಿಯಾಗಿತ್ತು. ಸೋವಿಯೆತ್ ಸೇನೆಯು ಈ ಹುಡುಗನನ್ನು ಬಿಡುಗಡೆಗೊಳಿಸಿ ಸ್ವದೇಶಕ್ಕೆ ಕಳಿಸಿಕೊಟ್ಟಿತು. ಅಂದಿನ ಆ ಹುಡುಗ ಇಂದಿನ ಕಲಾವಿದ ಅನತೋಲಿ ಪೆರ್ವ್ಯೋವ್ ಈಗಲೂ ಲೆನಿನ್‌ಗ್ರಾಡ್ ಪಟ್ಟಣದಲ್ಲಿದ್ದು ಕೆಲಸ ಮಾಡುತ್ತಿದ್ದಾರೆ.

ಯುದ್ಧದ ಮೊದಲ ದಿನಗಳಿಂದಲೇ ಸೋವಿಯೆತ್ ರಾಜ್ಯವು ತಾಯಿ-ತಂದೆಗಳನ್ನು ಕಳೆದುಕೊಂಡ ಮಕ್ಕಳ ಪರಿಪಾಲನೆಯನ್ನು ನೋಡಿಕೊಳ್ಳತೊಡಗಿತು. ಸಹಸ್ರಾರು ಸಮಿತಿಗಳು ಮಕ್ಕಳಿಗೆ ವಿಶೇಷ ಭವನಗಳಲ್ಲಿ ಸೌಲಭ್ಯಗಳನ್ನು ಕಲ್ಪಿಸತೊಡಗಿದವು. ಅನೇಕಾನೇಕ ಮಕ್ಕಳನ್ನು ಒಳಪ್ರದೇಶಗಳಿಗೆ ಕಳಿಸಿಕೊಡಲಾಯಿತು.

ಯುದ್ಧದಿಂದ ನಿರ್ಗತಿಕರಾಗಿದ್ದ ಮಕ್ಕಳಿಗೆ ಸರಕಾರ ಮಾತ್ರವೇ ಪೋಷಣೆ ನೀಡಲಿಲ್ಲ. ಅನೇಕ ಕೈಗಾರಿಕಾ ಸ್ಥಾವರಗಳು, ಕಛೇರಿಗಳು, ಪೀಠಗಳು ಮತ್ತು ಸಾಮೂಹಿಕ ಕೃಷಿಕ್ಷೇತ್ರಗಳೂ ಕೂಡ ಅವರಿಗೆ ಆಹಾರ ಮತ್ತು ಇತರ ಸಹಾಯ ಸೌಲಭ್ಯಗಳನ್ನು ಒದಗಿಸಿದುವು. ಅನೇಕ ಕಾರ್ಖಾನೆಗಳು ಹಾಗೂ ಕುಟುಂಬಗಳಂತೂ ನಿರ್ಗತಿಕ ಮಕ್ಕಳನ್ನು ದತ್ತು ತೆಗೆದುಕೊಂಡವು.

ಇದ್ದ ಒಬ್ಬನೇ ಒಬ್ಬ ಪುತ್ರನನ್ನು ಯುದ್ಧದಲ್ಲಿ ಕಳೆದುಕೊಂಡ ಕಿರ್ಘೀಜಿಯದ ಅಖ್ಮೆದೋವ್ ದಂಪತಿಗಳು ರಶಿಯನ್, ಉಕ್ರೇನಿಯನ್, ತಾಜಿಕ್, ತಾತಾರ್, ಉಜ್ಬೆಕ್, ಉಯಿಗುರ್, ಚೆಚೆನ್ಸ್, ಚುವಾಷ್ ಮತ್ತು ಯಹೂದ್ಯ ಜನಾಂಗಗಳಿಗೆ ಸೇರಿದ ೧೪ ಜನ ಮಕ್ಕಳನ್ನು ಪೋಷಿಸಿ ಬೆಳೆಸಿದರು.

ಮಕ್ಕಳಿಲ್ಲದ ಅಲೆಕ್ಸಾಂದ್ರಾ ದೆರೇವ್‌ಸ್ಕಯಾ ೪೮ ಮಕ್ಕಳನ್ನು ಸಾಕಿ ತಾಯಿಯೆನಿಸಿಕೊಂಡಳು. ೧೯೧೮–೨೦ರ ಅಂತರ್ಯುದ್ಧದಲ್ಲಿ ಮೂವರು ಮಕ್ಕಳನ್ನು ಹಾಗೂ ದ್ವಿತೀಯ ಲೋಕಯುದ್ಧದಲ್ಲಿ ೪೫ ನಿರ್ಗತಿಕ ಮಕ್ಕಳನ್ನು ಆಕೆ ದತ್ತು ತೆಗೆದುಕೊಂಡಿದ್ದಳು.

ತಾಯಿ-ತಂದೆಗಳಿಲ್ಲದ ಅಥವಾ ತಾಯಿ ತಂದೆಗಳ ಸಂಪರ್ಕವನ್ನೇ ಕಳೆದುಕೊಂಡಿದ್ದ ಒಟ್ಟು ಸುಮಾರು ಒಂದು ಮಿಲಿಯ ಜನ ಮಕ್ಕಳು ಶಿಶುವಿಹಾರಗಳಲ್ಲಿ ಬೆಳೆದು ದೊಡ್ಡವರಾದರು. ಸೋವಿಯೆತ್ ರಾಜ್ಯವು

(೨೦ನೇ ಪುಟಕ್ಕೆ ಮುಂದುವರಿದಿದೆ)

ಇಂಗ್ಲೆಂಡ್, ಫ್ರಾನ್ಸ್, ಫೆಡರಲ್ ಜರ್ಮನ್ ಗಣರಾಜ್ಯ, ನೆರೆಹೊರೆಯ ಏಶಿಯನ್ ದೇಶಗಳು ಹಾಗೂ ಪೂರ್ವ ಅರಬ್ಬೀ ದೇಶಗಳಲ್ಲಿಯ ವಾಚನಾಲಯಗಳು, ಮ್ಯೂಸಿಯಂಗಳು ಮತ್ತು ಪತ್ರಾಗಾರಗಳಲ್ಲಿ ಉಜ್ಬೆಕಿಸ್ತಾನದ ಅನೇಕ ಸಾಹಿತ್ಯಕೃತಿಗಳನ್ನೂ, ಜಾನಪದ ಕತೆಗಳನ್ನೂ ಸಂಗ್ರಹಿಸಿಡಲಾಗಿದೆ. ಇವುಗಳಲ್ಲಿ ಕೆಲವು ಖಾಸಗಿಯವರಲ್ಲಿವೆ. ಉಜ್ಬೆಕ್ ವಿಜ್ಞಾನಗಳ ಅಕಾದೆಮಿಗೆ ಸೇರಿದ ಅಲಿಷೇರ್ ನವೋಯಿ ಮ್ಯೂಸಿಯಮ್ಮಿನ ಸಿಬ್ಬಂದಿಯು ಈಗ ಪ್ರಾಚೀನ ಹಸ್ತಪ್ರತಿಗಳಿಗೆ ಸಂಬಂಧಪಟ್ಟ ವಿವರವನ್ನೂ ಅಭ್ಯಸಿಸುತ್ತಿದೆ ಹಾಗೂ ಸಮಾಚಾರವನ್ನು ಸಂಗ್ರಹಿಸುತ್ತಿದೆ.

ಅಲಿಷೇರ್ ನವೋಯಿ ಮ್ಯೂಸಿಯಮ್ಮಿನ ಡೈರೆಕ್ಟರ್ ಕೆ. ಎಸ್. ಸುಲೈಮಾನೋವ್ ಅವರ ನೇತೃತ್ವದಲ್ಲಿ ಉಜ್ಬೆಕ್ ವಿದ್ವಾಂಸರುಗಳ ತಂಡವೊಂದು ಇತ್ತೀಚೆಗೆ ಭಾರತಕ್ಕೆ ಭೇಟಿ ನೀಡಿತ್ತು.

ಸುಲೈಮಾನೋವ್ ಅವರು ಹೀಗೆ ಹೇಳುತ್ತಾರೆ: "ನಾವು ಭಾರತದಲ್ಲಿ ಎರಡು ತಿಂಗಳುಗಳನ್ನು ಕಳೆದೆವು. ಹೈದರಾಬಾದಿನಲ್ಲಿಯ ಒಂದು ಮ್ಯೂಸಿಯಮ್ಮಿನಲ್ಲಿ ನಾವು ಅಪೂರ್ವ ಹಸ್ತಪ್ರತಿಯೊಂದನ್ನು ಶೋಧಿಸಿದೆವು. ಅಂದಿಜಾನಿನಲ್ಲಿ ಹುಟ್ಟಿ

(೧೯ನೇ ಪುಟದಿಂದ)

೧೯೪೫ರಲ್ಲೇ ಸುಮಾರು ೧,೫೦೦,೦೦೦,-೦೦೦ ರೂಬಲುಗಳಿಗಿಂತ ಹೆಚ್ಚು ಹಣವನ್ನು ಮಕ್ಕಳ ಕಲ್ಯಾಣಾರ್ಥ ವೆಚ್ಚ ಮಾಡಿತು.

ಮಿಲಿಯಾಂತರ ಸೋವಿಯೆತ್ ಜನರನ್ನು ಅವರ ತಾಯಿನಾಡಿನಿಂದ ಅಗಲಿಸಲಾಗಿತ್ತು. ಫ್ಯಾಸಿಸ್ಟ್ ದಾಸ್ಯದಿಂದ ಬದುಕಿಬಂದವರು, ನಾಜಿಗಳ ಪಾಶವೀಯತೆಯನ್ನು ರುಜುವಾತುಪಡಿಸುವ ಜೀವಂತ ಸಾಕ್ಷಿಗಳಾಗಿದ್ದಾರೆ.

ಫ್ಯಾಸಿಸ್ಟ್ ಜರ್ಮನಿಯು ನಿರ್ನಾಮಗೊಂಡು ಮೂವತ್ತು ವರ್ಷಗಳು ಕಳೆದಿದ್ದರೂ ಇಂದಿಗೂ ಕೂಡ ಸೋವಿಯೆತ್ ಬಾನುಲಿಯ ಮೂಲಕ "ಸಂಬಂಧಿಕರಿಗಾಗಿ ಶೋಧನೆ ಕಾರ್ಯಕ್ರಮ"ವೆಂಬ ಪ್ರಕಟಣೆಯನ್ನು ಬಿತ್ತರಿಸಲಾಗುತ್ತಿದೆ. ಈ ಕಾರ್ಯಕ್ರಮಕ್ಕೆ ಪೂರಕವಾಗಿ ಶಿಶು ಸಾಹಿತ್ಯ ಲೇಖಕ ಅಗ್ನಿಯಬಾತ್ರೋವ್ ಅವರು ೧೯೬೬ರಿಂದ ಇನ್ನೊಂದು ಕಾರ್ಯಕ್ರಮವನ್ನು ಆರಂಭಿಸಿದ್ದಾರೆ. "ಮನುಷ್ಯನಿಗಾಗಿ ಶೋಧನೆ" ಎಂಬುದೇ ಈ ಕಾರ್ಯಕ್ರಮ. ನಿರ್ದಿಷ್ಟ ದತ್ತಾಂಶಗಳನ್ನಲ್ಲದೆ, ಬಾಲ್ಯದ ನೆನಪುಗಳನ್ನಾಧರಿಸಿರುವ ವಿಶಿಷ್ಟ ಮಾದರಿಯ ಶೋಧನೆ ಇದಾಗಿದೆ, ಈ ಕಾರ್ಯಕ್ರಮವು ಇಡೀ ದೇಶದ ಕುತೂಹಲವನ್ನೇ ಕೆರಳಿಸಿದೆ. ಶೋಧನೆ ನಡೆಸಬೇಕೆಂಬ ಕೋರಿಕೆಗಳನ್ನು ಮಾತ್ರವೇ ಅಲ್ಲ, ಸಹಾಯಮಾಡುವ ಸೂಚನೆಗಳನ್ನೂ ಕೂಡ ಒಳಗೊಂಡ ರಾಶಿಗಟ್ಟಲೆ ಪತ್ರಗಳು ರೇಡಿಯೋ ಮಾಸ್ಕೋ ಕಛೇರಿಗಳಿಗೆ ಬರುತ್ತಿರುತ್ತವೆ. ಒಂಭತ್ತು ವರ್ಷಗಳ ಅವಧಿಯಲ್ಲಿ ಸುಮಾರು ೬೦೦ ಜನ ಯುದ್ಧಕಾಲದ ಮಕ್ಕಳು ಈ ಕಾರ್ಯಕ್ರಮಗಳ ಸಹಾಯದಿಂದ ತಮ್ಮ ಸಂಬಂಧಿಕರನ್ನು ಕಂಡುಕೊಂಡಿದ್ದಾರೆ.

ಇರಿನಾ ಕೊರೊಲ್ಯೋವಾ.

—೦—

# ಮೊಗಲ್ ಅರಸುಮನೆತನದ ಸಂಸ್ಥಾಪಕ ಬಾಬರನ "ಬಾಬರ್‌ನಾಮಾ" ಹಸ್ತಪ್ರತಿ

ಬೆಳೆದ ಬಾಬರನ ನೆನಪುಗಳ ಹಸ್ತಪ್ರತಿ ಅದು. ಅದು ಉಜ್ಬೆಕಿಸ್ತಾನದಲ್ಲಿತ್ತು. "ಬಾಬರ್‌ನಾಮಾ" ಎಂದು ಪರಿಚಿತವಾಗಿರುವ. ಮಹಾ ಮೊಗಲ್ ಅರಸು ಮನೆತನದ ಸಂಸ್ಥಾಪಕ ಬಾಬರನ ಈ ಸ್ಮರಣೆಗಳು ಮೊದಲು ಫಾರ್ಸಿ ಭಾಷೆಯಲ್ಲಿದ್ದುವು. ಉಜ್ಬೆಕಿಸ್ತಾನದಲ್ಲಿ ಬಾಬರನ ಕಾವ್ಯಗಳ ಇನ್ನೆರಡು ಅಜ್ಞಾತ ಸಂಕಲನಗಳನ್ನೂ ಪತ್ತೆ ಹಚ್ಚಿದೆವು.

ನಮ್ಮ ತಂಡದ ಸದಸ್ಯರು ಹೈದರಾಬಾದಿನಲ್ಲಿ ಇನ್ನೂ ಒಂದು ಕುತೂಹಲಕಾರಿ ಶೋಧನೆ ನಡೆಸಿದರು. ಶ್ರೇಷ್ಠ ಪರ್ಸಿಯನ್ ಮತ್ತು ತಾಜಿಕ್ ಸಾಹಿತ್ಯದಿಂದ ಪ್ರಾಚೀನ ಉಜ್ಬೆಕ್ ಭಾಷೆಗೆ ಅನುವಾದಿಸಲ್ಪಟ್ಟ ಹಾಫೀಜ್ ಶಿರಾಜಿಯವರ ಕಾವ್ಯಗಳ ಅಪೂರ್ವ ಹಸ್ತಪ್ರತಿ ಇದಾಗಿದೆ. ಕವಿಯ ಜೀವನಾವಧಿಯಲ್ಲಿಯೇ ಅದನ್ನು ಅನುವಾದಿಸಲಾಗಿತ್ತು. ೧೪,೦೦೦ ಚರಣಗಳನ್ನುಳ್ಳ ಈ ಕಾವ್ಯಸಂಗ್ರಹಕ್ಕೆ "ದಿವಾನ್-ಇ-ಹಾಫಿಜ" ಎಂಬ ಶೀರ್ಷಿಕೆ ಇದೆ, ಉಜ್ಬೆಕ್ ಕವಿ ಅಲಿಷೇರ್ ನವೋಯಿಯವರ ಗುರು, ಪರ್ಷಿಯನ್ ಸಾಹಿತ್ಯದ ಶ್ರೇಷ್ಠ ಸಾಹಿತಿ ಜಾಮಿಯವರ ಕೃತಿಗಳ ಎರಡು ಸಂಪುಟದ ಅಜ್ಞಾತ ಸಂಕಲನವೊಂದರ ಮೈಕ್ರೊಫಿಲ್ಮನ್ನೂ ಕೂಡ ನಾವು ತಂದಿದ್ದೇವೆ. ಈ ಕೃತಿಯು ೧೨೨೮ ಪುಟಗಳುಳ್ಳದ್ದು, ಜಾಮಿಯವರು ಸ್ವಹಸ್ತದಿಂದ ಬರೆದುದಾಗಿದೆ.

ಹದಿನಾರನೇ ಶತಮಾನದ ತುರ್ಕಿಕ್ ಮತ್ತು ಯೂರೇಷ್ಯ ಎಂಬ ನಮ್ಮ ದೇಶದವರೇ ಆದ ಉಜ್ಬೆಕ್ ಕವಿಗಳು ಬರೆದ ಪದ್ಯಗಳನ್ನು ಮೊಟ್ಟಮೊದಲ ಬಾರಿಗೆ ಓದುವ ಸದವಕಾಶವನ್ನೂ ನಮ್ಮ ತಂಡದ ಸದಸ್ಯರು ಪಡೆದರು.

ಅಜರ್‌ಬೈಜಾನಿಯನ್ ಸಾಹಿತ್ಯದ ಶ್ರೇಷ್ಠ ಸಾಹಿತಿಗಳಾಗಿದ್ದ ನಿಜಾಮಿ, ಫಿಜೂಲಿ, ತೆಬ್ರಿಜಿ, ನಾಸಿಮಿ ಅವರುಗಳು ಬರೆದ ಅನೇಕ ಕೃತಿಗಳನ್ನೂ ಕೂಡ ನಮ್ಮ ತಂಡದ ಸದಸ್ಯರುಗಳು ಭಾರತದ ಪುಸ್ತಕಭಂಡಾರಗಳಲ್ಲಿ ಪತ್ತೆಹಚ್ಚಿದರು. ಸಾಯಿಬ್ ತೆಬ್ರಿಜಿಯವರು ತಮ್ಮ ಸ್ವಹಸ್ತಾಕ್ಷರಗಳಲ್ಲೇ ಬರೆದ ಪದ್ಯಗಳ "ಕುಲಿಯಾತ್" ಎಂಬ ಸಂಕಲನವು ನಮ್ಮ ಶೋಧನೆಗಳಲ್ಲೇ ವಿಶಿಷ್ಟವಾದುದು. ಇದು ೨೩೦,೦೦೦ ಚರಣಗಳಲ್ಲಿದೆ.

ಹಸ್ತಲಿಖಿತ ನಿಘಂಟುಗಳು ಹಾಗೂ ಛಂದೋಶಾಸ್ತ್ರಗಳು ನಾವು ಪತ್ತೆಹಚ್ಚಿರುವ ಪ್ರಾಚೀನ ಸಾಹಿತ್ಯಕೃತಿಗಳಲ್ಲೇ ಅತ್ಯಂತ ಆಸಕ್ತಿಕರವಾದವುಗಳಾಗಿವೆ. ಇವುಗಳನ್ನು ಪರ್ಷಿಯನ್, ಅರಬ್ಬೀ ಮತ್ತು ಉಜ್ಬೆಕ್ ಭಾಷೆಗಳಲ್ಲಿ ಬರೆಯಲಾಗಿದೆ.

—೦—



# ತುಸು ನಗು

21ನೇ ಶತಮಾನ

ಖಿನ್ನವದನರಾದ ಇಬ್ಬರು ಪಾದಚಾರಿಗಳು, ಓಡುವ ಕಾರುಗಳ ಮುಗಿಯದ ಪ್ರವಾಹವನ್ನೇ ನೋಡುತ್ತ, ನಗರದ ಮುಖ್ಯ ಮಾರ್ಗದಲ್ಲಿ ನಿಂತಿದ್ದಾರೆ.

ಒಬ್ಬ: "ಹೇ. ಈ ಮಾರ್ಗವನ್ನು ಹೇಗೆ ದಾಟುವುದು?"

ಇನ್ನೊಬ್ಬ: "ನಾನು ದಾಟಿಯೇ ಇಲ್ಲ, ನಾನು ಹುಟ್ಟಿದ್ದೇ ಇಲ್ಲಿ,"

೦ ೦ ೦ ೦

"ದಯವಿಟ್ಟು ನನ್ನನ್ನು ಗಾಯಕವೃಂದದಲ್ಲಿ ಸೇರಿಸಿಕೊಳ್ಳಿ. ನನಗೆ ಉತ್ತಮ ಕಂಠ ಇದೆ ಎಂದಿದ್ದಾಳೆ ನನ್ನ ತಾಯಿ."

"ಅಷ್ಟೇ ಸಾಲದು; ನಿನ್ನ ನೆರೆಮನೆಯವರಿಂದ ಶಿಫಾರಸು ತೆಗೆದುಕೊಂಡು ಬಾ" ಗಾಯಕವೃಂದದ ಮುಖ್ಯಸ್ಥರು ಉತ್ತರಿಸಿದರು.

೦ ೦ ೦ ೦

ಹುಡುಗಿ: "ಕೆನೆಗಟ್ಟಿದ ಹಾಲು ಬಣ್ಣದ ಉಡುಪು ಹೊಲಿದು ಕೊಡುತ್ತೀರಾ?"

ದರ್ಜಿ: "ಸಕ್ಕರೆ ಸಹಿತವೋ ಅಥವಾ ರಹಿತವೋ?"

೦ ೦ ೦ ೦

ಮಗಳು: "ಅಮ್ಮಾ, ಮದುವೆಯ ಉಂಗುರಗಳು ಮೊದಲು ದೊಡ್ಡವು ಮತ್ತು ದಪ್ಪಗೆ ಇರುತ್ತಿದ್ದವು. ಈಗ ಅವು ತೆಳ್ಳಗೆ ಮತ್ತು ಸಣ್ಣದಾಗಿರುತ್ತವೆಯಲ್ಲ, ಯಾಕೆ?"

ತಾಯಿ: "ಯಾಕೆಂದರೆ, ಆಗ ಜೀವನ ಪರ್ಯಂತ ಒಂದೇ ಉಂಗುರ ಇರಬೇಕಾಗುತ್ತಿತ್ತು."

೦ ೦ ೦ ೦

ಇಬ್ಬರು ಹಳೇ ಸ್ನೇಹಿತರು ರಸ್ತೆಯಲ್ಲಿ ಭೇಟಿಯಾಗುತ್ತಾರೆ.

"ಇತ್ತೀಚಿತ್ತಲಾಗಿ ಕಂಡೇ ಇಲ್ಲವಲ್ಲ, ಏನು ಮಾಡುತ್ತಿರುವಿ?" ಒಬ್ಬ ಕೇಳಿದ.

"ನನ್ನ ನೆನಪುಗಳನ್ನು ಬರೆದಿಡುತ್ತಿದ್ದೇನೆ."

"ಹೀಗೋ? ಸರಿ! ನಾನು ನಿನಗೆ ೧೦೦ ರೂಪಾಯಿ ಸಾಲಕೊಟ್ಟಿದ್ದೆ. ಆ ನೆನಪಿಗೆ ಈಗ ಬಂದಿದ್ದೀಯಾ?"

೦ ೦ ೦ ೦

"ಡಾಕ್ಟರರೇ, ಕೆಂಪು ಮೂಲಂಗಿ ತಿಂದರೆ ದೃಷ್ಟಿ ಸುಧಾರಿಸುತ್ತೆ ಅಂತಾರಲ್ಲ. ನಿಜವೆ?"

"ಖಂಡಿತ! ಕುಂದಿಲಿಗಳು ಕನ್ನಡಕ ಹಾಕಿರೋದನ್ನು ನೀನು ಎಂದಾದರೂ ನೋಡಿದ್ದೀಯಾ?"


೦ ೦ ೦ ೦

ಸಾಕುಪ್ರಾಣಿಗಳ ಮಾರಾಟದ ಅಂಗಡಿಗೆ ಬಂದು. ಒಬ್ಬ ಗಿರಾಕಿ ಕೇಳಿದನು:

"ನಿ....ನಿ....ನಿಮ್ಮಲ್ಲಿ ಗಿ....ಗಿ....ಗಿಳಿಗಳೇನಾದರೂ ಮಾರಾಟಕ್ಕೆ ಇವೆಯೆ?"

"ಹೋಗಾಚೆ! ಮತ್ತೊಂದು ಮಾತು ಆಡಿದರೆ ಜೋಕೆ! ನನ್ನಲ್ಲಿರುವ ಪಶು-ಪಕ್ಷಿಗಳ ಸಂಗ್ರಹವನ್ನೇ ಹಾಳುಮಾಡುವಿ ನೀನು!"

—೦—



# ಭಾರತೇಶ್ವರೀಸ್ತವ

ಮಂಗಳೂರಿನ ಕನ್ನಡ ಸಂಘದ ಉಪಾಧ್ಯಕ್ಷರಲ್ಲೊಬ್ಬರಾಗಿರುವ ಶ್ರೀ। ನರ್ಕಳ ಮಾರಪ್ಪ ಶೆಟ್ಟಿಯವರು ಇಂದು ಸಪ್ತತಿವಯಸ್ಕರಾದರೂ, ಸಾಹಿತ್ಯಸೇವೆಯನ್ನು ಮುಂದುವರಿಸಿಕೊಂಡೇ ಇರುತ್ತಾರೆ. ಶ್ರೀ। ಪಂಜೆಯವರ ಪ್ರಿಯ ಶಿಷ್ಯರಲ್ಲೊಬ್ಬರಾಗಿದ್ದ ಶ್ರೀ ಶೆಟ್ಟರು, ತನ್ನ ಗುರುವಿನಿಂದ ಪ್ರಭಾವಿತರಾಗಿ ಈ ಶತಮಾನದ ಎರಡನೇ ದಶಕದಲ್ಲೇ ಕನ್ನಡ ವಾಙ್ಮಯದಲ್ಲಿ ತೋರಿದಷ್ಟೇ ಆಸಕ್ತಿ ಮತ್ತು ನಿಷ್ಠೆಯಿಂದ ತುಳು ನಾಡಿಗೆ ಸಂಬಂಧಪಟ್ಟ ಸ್ಥಳನಾಮಗಳ ಹಾಗೂ ರೂಢಿಯ ಹಲವು ಶಬ್ದಗಳ ವ್ಯುತ್ಪತ್ತಿಯನ್ನೂ ಅಧ್ಯಯನಮಾಡಿದವರು. ಅಧ್ಯಾಪನದಲ್ಲೂ ತುಳುವ ಸಂಸ್ಕೃತಿಯ ಕುರಿತಾದ ಇವರ ಅಧ್ಯವಸಾನದಿಂದ ಇವರು ಕೂಡಿಹಾಕಿದ ಹಾಗೂ ರಚಿಸಿದ ತುಳುಗೀತೆಗಳೂ ಸಾಹಿತ್ಯವೂ ಅಸಾಮಾನ್ಯ. ಅದರಲ್ಲಿ ಕೆಲವು ಮುದ್ರಣವನ್ನು ಕಂಡಿವೆ. "ಮಂಜೆಟ್ಟಿ ಕೋಣ", ದಕ್ಷಿಣ ಕನ್ನಡ ಜಿಲ್ಲೆಯ ಹಲವು ಸ್ಥಳಗಳ ಹೆಸರುಗಳ ಕುರಿತಾದ ಪ್ರಾಸಬದ್ಧ ಕವನ, ಮುಂತಾದುವು "ಪ್ರಭಾತ"ದಲ್ಲಿ ಈ ಮೊದಲು ಪ್ರಕಟವಾಗಿವೆ. ಇಲ್ಲಿ ಶ್ರೀ। ಶೆಟ್ಟರ "ಭಾರತೇಶ್ವರೀಸ್ತವ" ಎಂಬ ಸುಂದರ ಕವನವೊಂದನ್ನು ಕೊಡುತಿದ್ದೇವೆ.

ಶ್ರೀ ವಸುಂಧರೆ ಕಂಬು ಕಂಧರೆ ।
ದೇವಿ ಸಂತತರಾಗಬಂಧುರೆ ।
ಕಾವುದೆಂದೆರಗುವೆನು ಕಂದೆರೆದೀಕ್ಷಿಸುವು
ದೆನ್ನ ॥
ಆವಗಂದೊರೆಯುಲಿ ಪದಾಂಬುಜ ।
ಸೇವೆ ನಿನ್ನದೆ ಪರಮ ಮಂಗಲೆ ।
ಪಾವನಾತ್ಮಿಕೆ ಪಾಲಿಸಂಬಿಕೆ
ಭಾರತೇಶ್ವರಿಯೆ ॥ ೧ ॥

## ಜಾತಿ

ಆದಿ–ಅಂತ್ಯಾಕಾರವಿಲ್ಲದ ।
ನಾದಿ ಬ್ರಹ್ಮಗೆ ಮುಖಭುಜೋರುಃ ।
ಪಾದವೆಂಬುದ ಕಟ್ಟಿಕೊಂಡರೆ
ಕಲ್ಪಾನಾಂಗದಲಿ ॥
ಪಾದಕಾಯುತು ಪಾಪವಂಕ ।
ಕ್ಕಾದುದೈಸಿರಿ ಭುಜಕೆ ಬಿಂಕವು ।
ಬೋಧೆಯಾಯಿತು ತಲೆಯ ಪಾಲಿಗೆ
ಭಾರತೇಶ್ವರಿಯೆ ॥ ೨ ॥

ಪದವೆನುತ ಪಾಜಿಗಳನತಿಸಂ ।
ಪದದವರನೂರೆನುತ ಕಡು ಕೆ ।
ಚ್ಚೆದೆಯವರ ಭುಜವೆನುತ ಸುಜ್ಞರ
ನಾಸ್ಯವೆಂದೆನುತ ॥
ವಿಧವಿಭಾಗ ಶರೀರದಲಿ ಮಾ ।
ಡಿದರೆ ಜನರಲಿ ಜಾತಿಸಂಜನಿ ।
ಸಿದುದು ತಲೆದೋರಿದುದು ವರ್ಣವು
ಭಾರತೇಶ್ವರಿಯೆ ॥ ೩ ॥

ಬುದ್ಧಿ ಬಲದಿಂದೊಬ್ಬನೊಮ್ಮೆಗೆ ।
ಬುದ್ಧನಹ ಬುಧನಾಗಲೊಮ್ಮೆಯು ।
ಶುದ್ಧವಹ ಶುಶ್ರೂಷ ಕರ್ಮದಿ
ಶೂದ್ರನಹನೊಮ್ಮೆ ॥
ಇದ್ದರಂಗಡಿ ವೈಶ್ಯನಹ ನಡ ।
ಸಿದ್ದ ಕಷ್ಟವ ಹರಿಸೆ ಕ್ಷತ್ರಿಯ ।
ಸಿದ್ಧವಿಷ್ಟೇ ವರ್ಣಭೇದದ
ಭಾರತೇಶ್ವರಿಯೇ ॥ ೪ ॥

## ಪಶುಪಾಲನೆ

ಹಲವುದಿನ ಹಾಲಿತ್ತ ನೇಗಿಲ ।
ನೆಳೆದ ನಮಗೋಸ್ಕರವೆ ಯೌವನ ।
ಕಳೆದ ಕಾಲ್ನಡೆಗಳನು ಕಡೆಯಲಿ
ಕಾಸಿನಾಸೆಯಲಿ ॥
ಎಲುವು ರಕ್ತಗಳಿಂದ ಬೆಲ್ಲವ ।
ಬಿಳಿದು ಮಾಡಲಿಕೆಂದು ಕೊಂದರೆ ।
ಕೊಲುವವನೊ ಕೊಡುವವನೊ
ಕಟುಕನು ಭಾರತೇಶ್ವರಿಯೆ ॥ ೫ ॥

ಆವು ಗೋವುಗಳೆಂದು ಪಳಿವರು ।
ಗೋವು ಗೊಲ್ಲರಿಗೆಂದೆ ತಿಳಿವರು ।
ಗೋವು ಗೊಲ್ಲರಿಗಲ್ಲ ಎಲ್ಲರಿಗೈಸೆ
ಭಾವಿಸಲು ॥
ಹಾವಿಗೊಲಿವರು ಹಲ್ಲಿಗೊಲಿವರು ।
ಹಾವನುಂಗುವ ಹಕ್ಕಿಗೊಲಿವರು ।
ಗೋವಿಗೊಲಿಯರು ಗೋಪರೆನಿಸರು
ಭಾರತೇಶ್ವರಿಯೆ ॥ ೬ ॥

ಒಬ್ಬ ಪಶುಪತಿ ನಾಮದಲಿ ಮ ।
ತ್ತೊಬ್ಬ ಗೋಪಾಲಾಖ್ಯೆಯಲಿ ಇಂ ।
ತಿಬ್ಬರೀ ಲೋಕದಲಿ ಗೌಪಾಸನೆಯ
ಸಾರುವರು ॥
ಸಬ್ಬರರಿತೀ ತತ್ವವನು ತ ।
ಮ್ಮಭ್ಯುದಯವೆಂದೆಣಿಸಿ ಗೋಗಳ ।
ತಬ್ಬಿ ಕಾದರೆ ಇಲ್ಲ ಒಡತನ
ಭಾರತೇಶ್ವರಿಯೆ ॥ ೭ ॥

ಗೊಲ್ಲಕಾದನು ಗೋವ ಗೋಕುಲ ।
ನಲ್ಲನಾದನು ವೀರ ಚೌಪಟ ।
ಮಲ್ಲಭೇದನನಾದನೊಲ್ಲಭನಾದ
ರುಕ್ಮಿಣಿಗೆ ॥
ಮಲ್ಲ ಜಡಿಮಳೆಯಲ್ಲಿ ಕಿರುಬೆರ ।
ಳಲ್ಲಿ ಬೆಟ್ಟವನೆತ್ತಿ ತುರುಗಳ ।
ನೆಲ್ಲ ಕಾದವ ನಲ್ಲ ಯಾದವ
ಭಾರತೇಶ್ವರಿಯೆ ॥ ೮ ॥

## ಕೃಷಿ

ಹಲಗೆ ನೇಗಿಲು ನೊಗವ ಹಿಡಿದರೆ ।
ತಲೆಗೆ ಮೊಮಾ ಶೌಚವೆಂದರೆ ।
ಇಳಿಗೆ–ಭಾರತೆ ನಿನಗೆ ಭಾರವು
ಬಾರದೇನಮ್ಮ ॥
ಹೊಲವನುತ್ತವ ಹೊಲೆಯನೆಂಬರು ॥
ಹೊಲೆಯನುತ್ತದ ತಾವು ಉಂಬರು ।
ಹೊಲಕೆ ಹೊಲೆತನವೆಂತೊ ತಿಳಿಯದು
ಭಾರತೇಶ್ವರಿಯೆ ॥ ೯ ॥

— o —

# ಸೋವಿಯತ್ ಮಹಿಳೆಯರು ಸಮಭಾಗಿಗಳು

(ಎ. ಕರ್ಮುಂತ್ಸೇವಾ)

ಮುಖ್ಯವಾಗಿ ಇಂದು, ಜಗತ್ತಿನ ಮೂಲೆ ಮೂಲೆಗಳಲ್ಲೂ ಮಹಿಳೆಯರ ಬಗ್ಗೆ ಸಾಕಷ್ಟು ಮಾತನಾಡಲಾಗುತ್ತಿದೆ, ಬರೆಯಲಾಗುತ್ತಿದೆ ಹಾಗೂ ಚರ್ಚಿಸಲಾಗುತ್ತಿದೆ. ಇತಿಹಾಸದಲ್ಲೇ ಪ್ರಥಮಬಾರಿಗೆ, ೧೯೭೫ನೇ ವರ್ಷವನ್ನು ಅಂತರರಾಷ್ಟ್ರೀಯ ಮಹಿಳಾ ವರ್ಷವೆಂದು ಘೋಷಿಸಲಾಗಿದೆ. ಸಮಾನತೆ, ಪ್ರಗತಿ ಹಾಗೂ ಶಾಂತಿ—ಇದು, ಅಂತರರಾಷ್ಟ್ರೀಯ ಮಹಿಳಾ ವರ್ಷ ಆಚರಣೆಯ ಮುಖ್ಯ ಗುರಿ.

"ಸಾಮಾನ್ಯವಾಗಿ ರಾಜಕೀಯ ಜೀವನದಲ್ಲಿ ಮಾತ್ರವೇ ಅಲ್ಲ, ನಿತ್ಯದ ಹಾಗೂ ಸಾರ್ವತ್ರಿಕ ಸೇವೆಯಲ್ಲೂ ಕೂಡ ಸ್ವತಂತ್ರ ಪಾತ್ರವನ್ನು ವಹಿಸುವಂತೆ ಮಹಿಳೆಯರನ್ನು ಆಕರ್ಷಿಸಿದ ಹೊರತು ಸಮಾಜವಾದದ ಮಾತಿರಲಿ, ಸಂಪೂರ್ಣ ಮತ್ತು ಸುಭದ್ರ ಪ್ರಜಾಪ್ರಭುತ್ವದ ಕುರಿತು ಮಾತನಾಡುವುದೂ ಪ್ರಯೋಜನವಿಲ್ಲ" ಎಂದು ವಿ. ಐ. ಲೆನಿನ್ ಅವರು ಬರೆದರು.

ಸೋವಿಯತ್ ಮಹಿಳೆಯರು ಇಂದು, ಜೀವನದ ಎಲ್ಲ ಚಟುವಟಿಕೆಗಳಲ್ಲೂ ಭಾಗ ವಹಿಸುತ್ತಾರೆ. ಸಾರ್ವಜನಿಕ ಆರೋಗ್ಯ, ಸಾಮಾಜಿಕ ಸಂಕ್ಷೇಮ, ಶಾರೀರಿಕ ಶಿಕ್ಷಣ ಕ್ಷೇತ್ರಗಳಲ್ಲಿ ಸ್ತ್ರೀಯರ ಸಂಖ್ಯೆ ಶೇಕಡಾ ೮೫ರಷ್ಟಿದೆಯಾದರೆ, ಶಿಕ್ಷಣ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಅವರ ಸಂಖ್ಯೆ ಶೇಕಡಾ ೭೫ರಷ್ಟು ಹಾಗೂ ರಾಜ್ಯ ಮತ್ತು ಆರ್ಥಿಕ ವ್ಯವಸ್ಥಾಪನೆಯಲ್ಲಿ ಶೇಕಡಾ ೬೫ರಷ್ಟಿದೆ. ಈ ಕಾರ್ಯಕರ್ತೆಯರಲ್ಲಿ ಅನೇಕರು ತರುಣಿಯರೇ ಆಗಿದ್ದಾರೆ. ಪ್ರತೀ ನಾಲ್ವರು ಡಾಕ್ಟರರಲ್ಲಿ ಮೂರು ಮಹಿಳೆಯರೇ ಆಗಿದ್ದಾರೆ. ಒಟ್ಟು ಅಧ್ಯಾಪಕ ಪ್ರವೃತ್ತಿಯವರಲ್ಲಿ ಸ್ತ್ರೀಯರ ಸಂಖ್ಯೆ ಶೇಕಡಾ ೭೧ರಷ್ಟಿದೆ. ವಿಜ್ಞಾನ ಹಾಗೂ ಸಂಶೋಧನಾಕಾರ್ಯದಲ್ಲಿ ಅವರೇನೂ ಪುರುಷರಿಗಿಂತ ಹಿಂದೆ ಬಿದ್ದಿಲ್ಲ. ೧೯೭೫ರಲ್ಲಿ ೨,೦೦೦ಕ್ಕಿಂತ ಹೆಚ್ಚು ಅಕಾಡೆಮೀಷಿಯನ್ನರು, ಅಕಾಡೆಮಿಯ ಕರೆಸ್ಪಾಂಡಿಂಗ್ ಸದಸ್ಯೆಯರು ಮತ್ತು ಪ್ರಾಧ್ಯಾಪಕಿಯರನ್ನೂ ಸೇರಿಕೊಂಡು ಮಹಿಳಾ ವಿಜ್ಞಾನಿಗಳ ಒಟ್ಟು ಸಂಖ್ಯೆ ೪೫೯,೫೦೦ರಷ್ಟಿತ್ತು.

ಇತ್ತೀಚಿನ ೨೦—೨೫ ವರ್ಷಗಳಲ್ಲಿ ಮಹಿಳಾ ಉದ್ಯೋಗಿಗಳ ಸಂಖ್ಯೆ ಅದ್ಭುತವಾಗಿ ಹೆಚ್ಚಿದೆ. ರಾಷ್ಟ್ರೀಯ ಅರ್ಥವ್ಯವಸ್ಥೆಯಲ್ಲಿ ಶೇಕಡಾ ೫೧ರಷ್ಟು ಸ್ತ್ರೀಯರೇ ಇದ್ದಾರೆ.

ಉತ್ಪಾದನಾ ಕ್ಷೇತ್ರದಲ್ಲಿ ಇಂಥ ಮುಖ್ಯ ಸ್ಥಾನವನ್ನು ಹೊಂದಿರುವ ಸ್ತ್ರೀಯರು ಎಲ್ಲ ಸಾರ್ವಜನಿಕ ಮತ್ತು ಸರಕಾರಿ ವ್ಯವಸ್ಥಾಪನೆಗಳಲ್ಲೂ ಕೂಡ ಭದ್ರ ಸ್ಥಾನಗಳನ್ನು ಹೊಂದಿದ್ದಾರೆ. ಸೋವಿಯತ್ ಸಂಸತ್ತಿನ ಒಟ್ಟು ಡೆಪ್ಯೂಟಿಗಳ ಮೂರನೇ ಒಂದು ಭಾಗ ಸ್ತ್ರೀಯರೇ ಆಗಿದ್ದಾರೆ. ಅವರಲ್ಲಿ ೨೭೯ (ಶೇಕಡಾ ೧೮.೪) ಸ್ತ್ರೀ-ಡೆಪ್ಯೂಟಿಗಳು ಮೂವತ್ತು ವರ್ಷದ ಒಳಗಿನವರಾಗಿದ್ದು ೧೭೪ (ಶೇಕಡಾ೧೧.೫)ಮಂದಿ ಕೋಮ್ಸೊಮೋಲ್ ಸಂಘಟನೆಯ ಸದಸ್ಯೆಯರಾಗಿದ್ದಾರೆ. ಕೋಮ್ಸೊಮೋಲ್ ಸಂಘಟನೆಯ ಒಟ್ಟು ಸದಸ್ಯರಲ್ಲಿ ತರುಣಿಯರ ಸಂಖ್ಯೆ ೧೭ ಮಿಲಿಯಗಳಷ್ಟಿದೆ.


ಸೋವಿಯತ್ ಮಹಿಳೆಯರಿಗೆ ರಾಷ್ಟ್ರೀಯ ಆರ್ಥಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದ ಎಲ್ಲ ಶಾಖೆಗಳಲ್ಲಿ ಅವರು ನೀಡಿದ ಕಾಣಿಕೆ ಮತ್ತು ಸಾಧಿಸಿದ ಸಾಧನೆಗಳಿಗಾಗಿ ಹಾಗೂ ಮಹಾ ದೇಶಾಭಿಮಾನಿ ಯುದ್ಧದ ಸಮಯದಲ್ಲಿ ಅವರು ತೋರಿದ ಧೈರ್ಯಸ್ಥೈರ್ಯಗಳಿಗಾಗಿ ೧,೫೪೮,೦೦೦ ಪುರಸ್ಕಾರಗಳನ್ನೂ ಸೇರಿಕೊಂಡು ೧,೮೬೭,೦೦೦ ಪ್ರಶಸ್ತಿ ಪದಕಗಳನ್ನೂ ನೀಡಲಾಗಿದೆ.

ಸೋವಿಯತ್ ಮಹಿಳೆಯರು ತಮಗೆ ದುಡಿಮೆ ಅತ್ಯವಶ್ಯಕವೆಂದು ಭಾವಿಸುತ್ತಾರೆ. ತಾವೂ ಪುರುಷರಿಗೆ ಸಮಾನರೆಂದು ತಿಳಿಯಲು ಇದು ಅವರಿಗೆ ಸಹಾಯಕವಾಗುತ್ತದೆ.

ವಿ. ಐ. ಲೆನಿನರು ಹೀಗೆ ಬರೆದರು: "ಮಹಿಳೆಯರನ್ನು ಸಂಪೂರ್ಣವಾಗಿ ವಿಮೋಚನೆಗೊಳಿಸಬೇಕಾದರೆ ಹಾಗೂ ಆಕೆಯನ್ನು, ಪುರುಷನಿಗೆ ಸಮಾನಳನ್ನಾಗಿ ಮಾಡಬೇಕಾದರೆ ರಾಷ್ಟ್ರೀಯ ಅರ್ಥವ್ಯವಸ್ಥೆಯ ಸಾಮಾಜೀಕರಣವಾಗಬೇಕು ಮತ್ತು ಸಾಮಾನ್ಯ ಉತ್ಪಾದನಾ ಶ್ರಮದಲ್ಲಿ ಮಹಿಳೆಯೂ ಭಾಗವಹಿಸಬೇಕು. ಆಗ ಮಾತ್ರ ಸ್ತ್ರೀಯರು ಪುರುಷರಿಗೆ ಸಮಾನವಾದ ಸ್ಥಾನವನ್ನು ಹೊಂದುತ್ತಾರೆ "

ಅವರ ಈ ಮಾತುಗಳು ಈಗ ಕೃತಿಗೆ ಬಂದಿವೆ.

—೦—



ಮಂಗಳೂರಿನ ಪ್ರಸಿದ್ಧ ವೈದಿಕ ಮನೆತನಗಳಲ್ಲೊಂದಾಗಿರುವ "ಜೋಡುಮಠ"ದ ಭಟ್ಟರ ಪರಂಪರೆಯಲ್ಲಿ ಅನೇಕ ಪ್ರಸಿದ್ಧ ವೈದಿಕರು ನಗರದ ಜನಜೀವನದಲ್ಲಿ ಪ್ರಭಾವಬೀರಿರುತ್ತಾರೆ. ಈ ಶತಮಾನದ ಆದಿಯಲ್ಲಿ ಶ್ರೀ ಜೋಡುಮಠ ನಾರಾಯಣಭಟ್ಟರು, ಅನಂತರ ಅವರ ಪುತ್ರ ಶ್ರೀ ಜೋಡುಮಠ ವಾಮನಭಟ್ಟರು ನಮಗೆಲ್ಲರಿಗೆ ಚಿರಪರಿಚಿತರಾಗಿದ್ದವರು. ಶ್ರೀ ನಾರಾಯಣ ಭಟ್ಟರು ಪೌರೋಹಿತ್ಯ ನಡೆಸುವಾಗ, ಸರಕಾರೀ ಇಲಾಖೆಯೊಂದರಲ್ಲಿ ಸೇವೆ ಸಲ್ಲಿಸಿದ್ದರು. ಅವರ ಪುತ್ರ ಶ್ರೀ ಜೆ. ವಾಮನ ಭಟ್ಟರು, ಗ್ರೆಜ್ಯುವೇಟರಾದ ನಂತರ, ಅಧ್ಯಾಪನ ಸೇವೆಗೆ ಆಕರ್ಷಿತರಾಗಿ, ಕೆನರಾ ಹೈಸ್ಕೂಲನ್ನು ಸೇರಿದರು. ಎಲ್. ಟಿ. ಶಿಕ್ಷಣವನ್ನೂ ಪೂರೈಸಿದರು. ಕೆನರಾ ಹೈಸ್ಕೂಲಿನಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ, ಸಾಹಿತ್ಯ ಚಟುವಟಿಕೆಗಳಲ್ಲಿ ಪ್ರಾಮುಖ್ಯ ಪಾತ್ರವಹಿಸಿದ್ದರು. "ಮಿತ್ರ ಮಂಡಲಿ" ಎಂಬ ಹೆಸರಿನಿಂದ ಸಾಹಿತ್ಯಸೇವೆಗೆ ಅಸ್ತಿತ್ವಕ್ಕೆ ಬಂದ ಸಂಘದ ಆರಂಭದ ರಚಕ ಸದಸ್ಯರಲ್ಲಿ ಇವರೂ ಒಬ್ಬರು. ಸಂಸ್ಕೃತ ಅಧ್ಯಯನವನ್ನೂ ಮಾಡಿ, "ಶಾಕುಂತಲ" ನಾಟಕವನ್ನು ಲಲಿತ ಗದ್ಯದಲ್ಲಿ ಬರೆದು ಪ್ರಕಟಿಸಿದ್ದರು. ಅದು 9ನೇ ತರಗತಿಗೆ ಪಠ್ಯೇತರ ಪುಸ್ತಕವಾಗಿ ಶಿಕ್ಷಣ ಇಲಾಖೆಯಿಂದ ಮಂಜೂರಾಗಿತ್ತು. "ಕೋದಂಡನ ಉಪನ್ಯಾಸಗಳು" ಎಂಬ ವಿಡಂಬನಾತ್ಮಕ ಹರಟೆಗಳನ್ನೂ ಬರೆದು ಪ್ರಕಟಿಸಿದ್ದಾರೆ. ಅನೇಕ ನಿಯತಕಾಲಿಕಗಳಲ್ಲಿ ಇವರ ಲೇಖನಗಳೂ ಕವನಗಳೂ ಪ್ರಕಟವಾಗಿವೆ. ಪ್ರಸಿದ್ಧ ಅಧ್ಯಾಪಕರೂ ನಾಟಕಕಾರರೂ ಆಗಿದ್ದ ಎಂ. ಎನ್. ಕಾಮತರ ನಿಧನಾನಂತರ (1940) ಶ್ರೀ ವಾಮನ ಭಟ್ಟರು ಕೆನರಾ ಹೈಸ್ಕೂಲಿನ ವರ್ಧಂತ್ಯುತ್ಸವಗಳ ಕಾಲ ನಾಟಕಪ್ರದರ್ಶನದ ಹೊಣೆಯನ್ನು ವಹಿಸಿ ಸುಮಾರು ಮೂರು ವರ್ಷ ಈ ವಿಭಾಗದಲ್ಲೂ ಸೇವೆ ಸಲಿಸಿದ್ದಾರೆ. ಕೆನರಾ ಹೈಸ್ಕೂಲಿನಲ್ಲಿ ಅನೇಕ ವರ್ಷ ಸಂಸ್ಕೃತ ಪಂಡಿತರಾಗಿ ಸೇವೆ ಸಲಿಸಿದ್ದ ಆಚಾರ್ಯಮಠದ ವೇ। ಮೂ। ಪಂಡಿತ ರಾಘವೇಂದ್ರಾಚಾರ್ಯರ ನಿಧನಾನಂತರ ಶ್ರೀ ವಾಮನಭಟ್ಟರು ಸಂಸ್ಕೃತ ಅಧ್ಯಾಪನವನ್ನು ಒಂದು ವರ್ಷಕ್ಕೆ ವಹಿಸಿ ಕೊಂಡಿದ್ದರು. ಮುಂದೆ ಕೆನರಾ ಹೈಸ್ಕೂಲ್ (ಉರ್ವ) ಮುಖ್ಯೋಪಾಧ್ಯಾಯರಾಗಿ ಕೆಲವು ವರ್ಷಗಳ ಹಿಂದೆ ನಿವೃತ್ತರಾಗಿದ್ದರು. ಶ್ರೀ ವಿಠೋಬ ದೇವಸ್ಥಾನ ರಸ್ತೆಯಲ್ಲಿ ಓರಿಯಂಟಲ್ ಹೈಸ್ಕೂಲಿನ ಸ್ಥಾಪನೆಗೂ ಕಾರಣರು ಇವರೇ. ಮೊನ್ನಿನ ತನಕ ಆ ಶಾಲೆಯ ಕಾರ್ಯಗಳಲ್ಲಿ ಆಸಕ್ತಿ ಹೊಂದಿದ್ದರು. "ಭಟ್ ಎಂಡ್ ಕೋ" ಹೆಸರಿನ ಸಂಸ್ಥೆ ತೆರೆದು, ಅನೇಕ ಪಠ್ಯ ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ಸ್ವಸಮಾಜದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಗಳನ್ನು ನೀಡುವ ಶ್ರೀ ಕಾಶೀಮಠ ಸಂಸ್ಥಾನ ವೆಲ್ಫೆರ್ ಫಂಡಿನ ಮಂಗಳೂರು ವಲಯದ ಕಾರ್ಯದರ್ಶಿಯಾಗಿದ್ದರು.

(ಶ್ರೀ ವಾಮನಭಟ್ಟರ ಹಿರಿಯ ಪುತ್ರ ಶ್ರೀ ಜೆ. ಪದ್ಮನಾಭಭಟ್‌ರವರು ಗೋವೆಯ ಒಂದು ಕೊಲೇಜಿನಲ್ಲಿ ಲೆಕ್ಚರರಾಗಿದ್ದರೆ, ಇನ್ನೋರ್ವ ಪುತ್ರ ಶ್ರೀ ಜೆ. ರಾಮಚಂದ್ರ ಭಟ್‌ರವರು ಎಡ್ವೊಕೇಟರು, ಗವರ್ನಮೆಂಟ್ ಪ್ಲೀಡರ್ ಆಗಿರುವರು. ತೃತೀಯ ಪುತ್ರ ಡಾ। ಗಣೇಶ ಭಟ್‌ರವರು ಕೆನಡದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಓರ್ವ ಪುತ್ರಿ (ಶ್ರೀಮತಿ ಜಯಂತಿ), ಅಧ್ಯಾಪಿಕೆಯಾಗಿದ್ದಾಗ ಸೋವಿಯತ್ ರಷ್ಯಕ್ಕೂ ತೆರಳಿ, ಅಲ್ಲಿ ಕೆಲಕಾಲ ಅಧ್ಯಯನ ನಡೆಸಿ ಮರಳಿರುವರು.)

K. V. S.

—೦—

## ಮಂಗಳೂರಲ್ಲಿ ರಕ್ತದಾನ ಕೇಂದ್ರ

ಮಂಗಳೂರು ಪ್ರತಾಪನಗರದ "ಸಮಾಜಭವ"ನದ ಎದುರಲ್ಲಿರುವ ಅತ್ರೇಯ ಕ್ಲಿನಿಕಿನ ಡಾ। ಮಾಧವ ಭಂಡಾರಿಯವರ ನೇತೃತ್ವದ ಉಚಿತವಾಗಿ ರಕ್ತದಾನ ಮಾಡುವ ಕೇಂದ್ರವೊಂದು ಉದಿಸಿದ್ದು ಇದರಲ್ಲಿ ಈಗ ೧೨೫ ಸದಸ್ಯರಿದ್ದಾರೆ. ಅತಿ ಜರೂರಾಗಿ ರಕ್ತದ ಅವಶ್ಯಕತೆಯಿದ್ದವರು ತಮ್ಮ ರಕ್ತ ಅದಾವ ಗುಂಪಿಗೆ ಸೇರಿದೆಯೆಂಬುದನ್ನು ತಿಳಿಸಿ, ರಕ್ತವನ್ನು ಉಚಿತವಾಗಿ ಡಾ। ಮಾಧವ ಭಂಡಾರಿಯವರಿಂದ ಪಡೆಯಬಹುದು.

——

Printed at The Prabhat Printers, Ltd., Mangalore. Edited and Published by K. V. Shenoy at Prabhat Office, Car Street, Mangalore-1.